
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 22 | ಮೇ 25-31, 2020 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಕಾಮ್ರೇಡ್ ಕೆ.ವರದರಾಜನ್ ಲಾಲ್‌ಸಲಾಂ



ನಿಯಂತ್ರಣ-ಮುಕ್ತ ಲೂಟಿಗಾಗಿ ಎಪಿಎಂಸಿ ತಿದ್ದುಪಡಿ



ಕೋವಿಡ-19 ಬಂಡವಾಳಶಾಹಿಯ ಕೂಸು

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹೊರಟಿದೆ ಬಿಜೆಪಿ ರಾಜ್ಯ ಸರ್ಕಾರ



ಆರೋಗ್ಯಕ್ಕೆ ಆದ್ಯತೆ ಇನ್ನೂ ಇಲ್ಲ



20 ಲಕ್ಷ ಕೋಟಿಯಿಂದ 2 ಲಕ್ಷ ಕೋಟಿಗಿಳಿದ ಪ್ಯಾಕೇಜ್



ಮೋದಿ ಕೋವಿಡ್ ಮದ್ದು ಆರ್ಥಿಕ ಪುನಶ್ಚೇತನಕ್ಕಲ್ಲ

ಜನತೆಯ ಮೇಲೆ ಯುದ್ಧ ಸಾರಿರುವ ಸರ್ಕಾರಗಳೊಂದಿಗೆ ನಿಲ್ಲಲು ಹೇಗೆ ಸಾಧ್ಯ? ಆರ್.ಎಸ್.ಎಸ್. ಗೆ ಸಿಪಿಐ(ಎಂ) ಪ್ರಶ್ನೆ

ಕಾಮ್ರೇಡ್ ಕೆ. ವರದರಾಜನ್– ಸಿಪಿಐ(ಎಂ) ಪೊಲಿಟ್ ಬ್ಯುರೊ ಶ್ರದ್ಧಾಂಜಲಿ



ಸಿಪಿಐ(ಎಂ) ಕೇಂದ್ರ ಸಮಿತಿಯು ವಿಶೇಷ ಆಹ್ವಾನಿತರು, ಮಾಜಿ ಪೊಲಿಟ್ ಬ್ಯುರೊ ಸದಸ್ಯರಾಗಿದ್ದ ಕಾಂ.ಕೆ.ವರದರಾಜನ್ ರವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಳವಾದ ದುಃಖ ಮತ್ತು ಆಘಾತವನ್ನು ವ್ಯಕ್ತಪಡಿಸಿದೆ. ಅವರು ಮೇ 16 ಅಪರಾಹ್ನ ತಮಿಳುನಾಡಿನ ಕರೂರಿನಲ್ಲಿ ಉಸಿರಾಟದ ಸಮಸ್ಯೆಯಿಂದಾಗಿ ನಿಧನರಾದರು. ಅವರು ಕರೂರಿನಲ್ಲಿದ್ದ ತಮ್ಮ ಮಗನ ಮನೆಗೆ ಹೋಗಿದ್ದರು, ಲಾಕ್‌ಡೌನಿನಿಂದಾಗಿ ಅಲ್ಲಿಯೇ ಉಳಿದಿದ್ದರು. ಅವರಿಗೆ 73 ವರ್ಷವಾಗಿತ್ತು.

ಮಧ್ಯಮ ವರ್ಗದಲ್ಲಿ ಜನಿಸಿದ, ಒಬ್ಬ ಸಿವಿಲ್ ಇಂಜಿನಿಯರ್ ಆಗಿ ತರಬೇತಿ ಪಡೆದ ಅವರು 1970ರಲ್ಲಿ ಸಿಪಿಐ(ಎಂ) ಸೇರಿದರು. 1978ರಲ್ಲಿ ಅವರು ತಮಿಳುನಾಡು ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರಾದರು ಮತ್ತು 1986ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದರು. 1998ರಲ್ಲಿ ಅವರು ಕೇಂದ್ರ ಸಮಿತಿಗೆ ಮತ್ತು 2002ರಲ್ಲಿ ಕೇಂದ್ರ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದರು. 2005ರಲ್ಲಿ ಪಕ್ಷದ 18ನೇ ಮಹಾಧಿವೇಶನದಲ್ಲಿ ಪೊಲಿಟ್ ಬ್ಯುರೊಗೆ ಚುನಾಯಿತರಾದರು. ಅವರು 2002ರಿಂದ 2015ರ ವರೆಗೆ ಪಕ್ಷದ ಕೇಂದ್ರದಲ್ಲಿ ಕೇಂದ್ರ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಮತ್ತು ಪೊಲಿಟ್ ಬ್ಯುರೊ ಸದಸ್ಯರಾಗಿ ಕಾರ್ಯನಿರ್ವಹಿಸಿದರು.

ಕಿಸಾನ್ ಸಭಾದಲ್ಲಿ ಕೆಲಸ ಮಾಡುತ್ತಿದ್ದ ಅವರು 1986ರಲ್ಲಿ ಅಖಿಲ ಭಾರತ ಕಿಸಾನ್ ಸಭಾದ ತಮಿಳುನಾಡು ಘಟಕದ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಮುಂದೆ ಅದರ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾದರು. ಪ್ರಸಕ್ತ ?ವರು ಎಐಕೆಎಸ್‌ನ ನ ಉಪಾಧ್ಯಕ್ಷರಾಗಿದ್ದರು.

ಕಾಮ್ರೇಡ್ ವರದರಾಜನ್ ತುರ್ತು ಪರಿಸ್ಥಿತಿಯಲ್ಲಿ ಎರಡು ವರ್ಷ ಭೂಗತರಾಗಿದ್ದರು, ಬಂಧಿಸಲ್ಪಟ್ಟು ಜೈಲುವಾಸವನ್ನೂ ಅನುಭವಿಸಿದರು.

ಅವರೊಬ್ಬ ವಿನಯಶೀಲ ಸಂಗಾತಿಯಾಗಿದ್ದರು, ಸರಳ ಸ್ವಭಾವದವರು ಮತ್ತು ಅವರ ಆವಶ್ಯಕತೆಗಳು ಮಿತವಾಗಿದ್ದವು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಅವರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸಿದೆ, ಮತ್ತು ಅವರ ಮಗಳು, ಮಗ ಹಾಗೂ ಕುಟುಂಬಕ್ಕೆ ಹಾರ್ದಿಕ ಸಂತಾಪಗಳನ್ನು ಕಳಿಸಿದೆ.

ಅಂಫನ್ ಚಂಡಮಾರುತ –ಒಂದು ರಾಷ್ಟ್ರೀಯ ವಿಪತ್ತು

ಅಂಫನ್ ಚಂಡಮಾರುತ ಪಶ್ಚಿಮ ಬಂಗಾಲ ಮತ್ತು ಒಡಿಶಾದಲ್ಲಿ ವಿಧ್ವಂಸಕಾರೀ ತೊಂದರೆಗಳನ್ನು ಉಂಟು ಮಾಡಿದೆ ಎನ್ನುತ್ತ ಸಿಪಿಐ(ಎಂ) ಪೊಲಿಟ್ ಬ್ಯುರೊ ಇದರಲ್ಲಿ ಪ್ರಾಣ ಕಳಕೊಂಡಿರುವವರ ಕುಟುಂಬಗಳಿಗೆ ಆಳವಾದ ಸಂತಾಪಗಳನ್ನು ತಿಳಿಸಿದೆ.

ಈ ಕ್ಷಣದಲ್ಲಿ ಪರಿಹಾರ ಮತ್ತು ಮರುವಸತಿಗೆ ಆದ್ಯತೆ ಸಿಗಬೇಕು. ದೇಶ ಮತ್ತು ಜನತೆ ಈಗಾಗಲೆ ಕೊವಿಡ್ ಮಹಾಮಾರಿಯ ವಿರುದ್ಧ ಬದುಕುಳಿಯುವ ಒಂದು ಕಠೋರ ಹೋರಾಟದಲ್ಲಿ ತೊಡಗಿದೆ. ಈ ಎರಡೂ ರಾಜ್ಯಗಳಲ್ಲಿ ಜನಗಳಿಗೆ ದೇಶದ ಜನಗಳು ಮತ್ತು ಸರಕಾರಗಳಿಂದ ಬೆಂಬಲ ಮತ್ತು ಸೌಹಾರ್ದ ಬೇಕಾಗಿದೆ.

ಕೇಂದ್ರ ಸರಕಾರ ತಕ್ಷಣವೇ ಇದನ್ನು ಒಂದು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು, ಮತ್ತು ಈ ಅನಾಹುತದ ಪರಿಣಾಮಗಳನ್ನು ಎದುರಿಸಬೇಕಾಗಿರುವ ರಾಜ್ಯಗಳಿಗೆ ಗಮನಾರ್ಹ ಪ್ರಮಾಣದಲ್ಲಿ ನೆರವಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

20ಲಕ್ಷ ಕೋಟಿ ಪ್ಯಾಕೇಜಿನ 4ನೇ ಕಂತು 'ಸ್ವಾವಲಂಬನೆ'ಯ ಅಬ್ಬರದ ಮಾತುಗಳ ನಡುವೆ ಲಂಗುಲಗಾಮಿಲ್ಲದ ಖಾಸಗೀಕರಣದ ನೀಲ ನಕಾಶೆ

ಕೊವಿಡ್ ಮಹಾಮಾರಿಯ ಸಂದರ್ಭದಲ್ಲಿ 20 ಲಕ್ಷ ಕೋಟಿ ರೂ.ಗಳ ಪರಿಹಾರ ಪ್ಯಾಕೇಜಿನಲ್ಲಿ ಲಾಕ್ಡೌನಿನಿಂದ ಅತ್ಯಂತ ಹೆಚ್ಚು ಸಂಕಷ್ಟಗಳನ್ನು ಎದುರಿಸುತ್ತಿರುವ ಬಡ ಕಾರ್ಮಿಕರಿಗೆ ಮತ್ತು ರೈತರಿಗೆ ಏನೂ ಕೊಡದ ಮೂರು ಕಂತುಗಳ ನಂತರ ಮೇ 16 ದಂದು ಪ್ರಕಟವಾದ ನಾಲ್ಕನೆ ಕಂತು ಕಾರ್ಪೊರೇಟ್ ಕುಳಗಳಿಗೆ ಭಾರೀ 'ಉತ್ತೇಜನೆ'ಗಳ ಬಕ್ಷೀಸುಗಳನ್ನು ಪ್ರಕಟಿಸಿದೆ. ವಿಶೇಷವೆಂದರೆ 'ಸ್ವಾವಲಂಬನೆ ಈ ಪ್ಯಾಕೇಜಿನ ಹೆಗ್ಗುರುತು ಎಂದು ಪ್ರಧಾನಿಗಳು ಮೇ 12 ರಂದು ಒತ್ತಿ–ಒತ್ತಿ ಹೇಳಿದ್ದರೂ, ಈ ನಾಲ್ಕನೇ ದಿನದ ಪ್ಯಾಕೇಜಿನಲ್ಲಿ ವಿದೇಶೀ ಕಾರ್ಪೊರೇಟ್‌ಗಳಿಗೇ ಹೆಚ್ಚಿನ ಬಕ್ಷೀಷುಗಳು ತುಂಬಿವೆ.

ವಾಸ್ತವವಾಗಿ ಇದು 'ಸ್ವಾವಲಂಬನೆ'ಯ ಗದ್ದಲದ ನಡುವೆ ವಿನಾಶ, ವಿಧ್ವಂಸ ಮತ್ತು ವಿಕೈಗಾರಿಕೀಕರಣದ ಕಾರ್ಯಕ್ರಮ, ಆಯಕಟ್ಟಿನ ಸಾರ್ವಜನಿಕ ವಲಯದ ಉದ್ದಿಮೆಗಳನ್ನು, ವಿಶೇಷವಾಗಿ ವಿದೇಶೀ ಕುಳಗಳಿಗೆ ತೆರೆಯುವ ಹಣಕಾಸು ಮಂತ್ರಿಗಳ ನೀಲನಕಾಶೆ ಎಂದು ಸಿಐಟಿಯು ಇದನ್ನು ಬಲವಾಗಿ ಖಂಡಿಸಿದೆ.

ಕಲ್ಲಿದ್ದಲು, ಖನಿಜಗಳು, ರಕ್ಷಣಾ ಉತ್ಪಾದನೆ, ವಿಮಾನಯಾನ, ವಿಮಾನ ನಿಲ್ದಾಣಗಳು, ವಿದ್ಯುತ್ ವಿತರಣೆ, ಬಾಹ್ಯಾಕಾಶ ಮತ್ತು ಅಣುಶಕ್ತಿ ಈ ಎಲ್ಲ ಪ್ರಮುಖ ಎಂಟು ವಲಯಗಳಲ್ಲಿ 'ಅಯಕಟ್ಟಿನ ಸುಧಾರಣೆ' ಅಂದರೆ ದೇಶಿ–ವಿದೇಶಿ ಕಾರ್ಪರೇಟ್‌ಗಳಿಗೆ ಸಾರಾಸಗಟು ಮಾರಾಟದ ಕಾರ್ಯಕ್ರಮವನ್ನು 'ಸ್ವಾವಲಂಬೀ ಭಾರತ್' ಪ್ಯಾಕೇಜಿನ ಭಾಗವಾಗಿ ಪ್ರಕಟಿಸಲಾಗಿದೆ. ಇವೆಲ್ಲ ಕಾರ್ಮಿಕ ಕಾನೂನುಗಳ ಮೇಲೆ ದಾಳಿಗಳ ನಂತರ ಬಂದಿದೆ ಎಂಬುದು ಗಮನಾರ್ಹ.

ಅದಾಣಿ, ಅನಿಲ್ ಅಂಬಾನಿ, ವೆದಾಂತ , ಕಲ್ಯಾಣಿ, ಟಾಟಾ ಪವರ್, ಜೆಎಸ್‌ಡಬ್ಲ್ಯು ಸ್ಟೀಲ್, ಜಿವಿಕೆ, ಹಿಂಡಾಲ್ಕೊ, ಜಿಡಂಆರ್ ಮುಂತಾದವರು ಮೋದಿ ಸರಕಾರದ ಈ ನಾಲ್ಕನೇ ಕಂತಿನ ಪ್ರಮುಖ 'ದೇಶೀ' ಫಲಾನುಭವಿಗಳು.

ರಕ್ಷಣಾ ಉತ್ಪಾದನಾ ವಲಯದಲ್ಲಿ ಕಂಪನೀಕರಣ, ಮದ್ದುಗುಂಡು ತಯಾರಿಕೆಯಲ್ಲಿ ಸಾರ್ವಜನಿಕ–ಖಾಸಗಿ ಭಾಗೀದಾರಿಕೆ, ಜತೆಗೆ 74ಶೇ. ಎಫ್‌ಡಿಐ ಗೆ ಅವಕಾಶದ ಮೂಲಕ ಖಾಸಗೀಕರಣದ ನಕಾಶೆಯನ್ನು ತಯಾರಿಸಲಲಾಗಿದೆ. ಅಂತಿಮವಾಗಿ ಇದು ವಿದೇಶೀಕರಣದತ್ತ ಸಾಗುತ್ತದೆ. ಅಂದರೆ ನಮ್ಮ ದೇಶದ ಭದ್ರತೆ ವಿದೇಶಿ ರಕ್ಷಣಾ ಉತ್ಪಾದಕರನ್ನು ಅವಲಂಬಿಸುವಂತಾಗುತ್ತದೆ, ಈಗ ಲಾಭದಲ್ಲಿರುವ ನಮ್ಮ ರಕ್ಷಣಾ ವಲಯದ ಉದ್ದಿಮೆಗಳು ವಿದೇಶಿ ಕಂಪನಿಗಳ ಕಿರಿಯ ಪಾಲುದಾರರ ಮಟ್ಟಕ್ಕೆ ಇಳಿಯುವಂತಾಗುತ್ತದೆ ಎಂದು ಸಿಐಟಿಯು ಎಚ್ಚರಿಸಿದೆ. ಅಂದರೆ ಸ್ವಾವಲಂಬನೆಯ ತದ್ವಿರುದ್ಧವಾಗಿ ದೇಶದ ರಕ್ಷಣೆಯ ವಿಷಯದಲ್ಲೂ ಸಂಪೂರ್ಣ ಪರಾವಲಂಬನೆಯ ಪ್ರಕ್ರಿಯೆ.

ಕಲ್ಲಿದ್ದಲು ಮತ್ತು ಬಾಕ್ಸೈಟ್ ಖನಿಜ ವಲಯದಲ್ಲಿ 100% ಎಫ್‌ಡಿಐ ಮತ್ತು ರಫ್ತಿಗೂ ಮುಕ್ತ ಅವಕಾಶ ನೀಡಲಾಗಿದೆ. ಇದರ ಅರ್ಥ ನಮ್ಮ ವಿದ್ಯುತ್, ಉಕ್ಕು, ಅಲ್ಯುಮಿನಿಯಂ, ರಸಗೊಬ್ಬರ ಮುಂತಾದ ಉದ್ದಿಮೆಯಗಳು ಕಚ್ಚಾ ಸಾಮಗ್ರಿಗಳ ಕೊರತೆಯಿಂದ ಮುಚ್ಚುವಂತಾಗುತ್ತದೆ, ಏರ್ ಇಂಡಿಯಾದ ಜತೆಗೆ ಲಾಭದಲ್ಲಿರುವ ಹಲವು ವಿಮಾನ ನಿಲ್ದಾಣಗಳನ್ನು ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ.

ಎಲ್ಲರನ್ನೂ, ಖಾಸಗೀಕರಣದ ಬಗ್ಗೆ ವಿಶೇಷ ವಿರೋಧವಿಲ್ಲದವರನ್ನೂ ದಂಗು ಬಡಿಸುವ ಕ್ರಮವೆಂದರೆ ಬಾಹ್ಯಾಕಾಶ ವಲಯದಲ್ಲೂ ಖಾಸಗಿ–ಸಾರ್ವಜನಿಕ ಬಾಗೀದಾರಿಕೆಯ ಅವಕಾಶ!

ಸಾರಾಂಶವೆಂದರೆ, ದೇಶಿ–ವಿದೇಶಿ ಖಾಸಗಿ ಬಂಡವಾಳವನ್ನು ಸಂತುಷ್ಟಗೊಳಿಸಲು ಕಾರ್ಮಿಕ ಕಾನೂನುಗಳ ಅಮಾನತು, ರೈತರ ಜಮೀನುಗಳನ್ನು ಅಗ್ಗದ ಬೆಲೆಗಳಲ್ಲಿ ಕಾರ್ಪೊರೇಟ್‌ಗಳಿಗೆ ಒಪ್ಪಿಸುವುದು, ನಂತರ, ಸಾರ್ವಜನಿಕ ನಿಧಿಗಳಿಂದ ಮಾಡಿದ ಸಂಶೋಧನೆಗಳ ಬೌದ್ಧಿಕ ಹಕ್ಕುಗಳನ್ನು , ಬೆಳೆಸಿದ ಆಸ್ತಿಗಳನ್ನು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಕೂಡ ಖಾಸಗಿಯವರಿಗೆ ಹರಾಜು ಹಾಕುವುದು– ಇದೇ ಈ 'ಸ್ವಾವಲಂಬೀ' ಪ್ಯಾಕೇಜಿನ ನಿಜಹೂರಣ,

ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಾಧಿಸುವ ಕುಕೃತ್ಯಗಳ ಬಗ್ಗೆ ಚರ್ಚೆ, ಸಂವಾದಗಳು ನಡೆಯದಂತೆ, ಭಿನ್ನಮತಗಳು ಬರದಂತೆ ಮಾಡಲು ಇದಕ್ಕೆ ಮಹಾಮಾರಿಯ ಮತ್ತು ಲಾಕ್ ಡೌನಿನ ಅವಧಿಯನ್ನೇ ಆರಿಸಿಕೊಂಡಿರುವುದು ಈ ಸರಕಾರದ ವಂಚಕ ಮತ್ತು ವಿನಾಶಕಾರೀ ಆಶಯಗಳನ್ನು ಬಿಂಬಿಸುತ್ತದೆ ಎಂದು ಸಿಐಟಿಯು ಪ್ರದಾನ ಕಾರ್ಯದರ್ಶಿ ತಪನ್ ಸೆನ್ ಹೇಳಿದ್ದಾರೆ. ಎಲ್ಲ ದುಡಿಯುವ ಜನತೆ ಮತ್ತು ಕಾರ್ಮಿಕ ಸಂಘಟನೆಗಳು ಈ ಪತ್ರಿಗಾಮಿ ಕ್ರಮಗಳ ವಿರುದ್ಧ ಐಕ್ಯ ಪ್ರತಿರೋಧಕ್ಕೆ ಬೇಗನೇ ಸಿದ್ಧವಾಗಬೇಕು ಎಂದು ಸಿಐಟಿಯು ಕರೆ ನೀಡಿದೆ.

'ಆತ್ಮನಿರ್ಭರ್ ಭಾರತ್' ಪ್ಯಾಕೇಜ್ ಎಂಬ ಕ್ರೂರ ವಂಚನೆ ವಿರುದ್ಧ ರೈತ–ಕಾರ್ಮಿಕರ ಪ್ರತಿರೋಧ ಆರಂಭ

ಮೇ 16 ರಂದು ರೈತ ಗೌರವ ದಿನಾಚರಣೆ, ಮೇ 22 ರಂದು ರಾಷ್ಟ್ರವ್ಯಾಪಿ ಕಾರ್ಮಿಕರ ಪ್ರತಿಭಟನಾ ದಿನಾಚರಣೆ

ಕೊವಿಡ್ ಮಹಾಮಾರಿಯ ವಿರುದ್ಧ ಲಾಕ್‌ಡೌನ್ ಲ್ಬಣಗೊಳಿಸಿರುವ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ಹೆಸರಿನಲ್ಲಿ ಮೋದಿ ಸರಕಾರದ ಹಣಕಾಸು ಮಂತ್ರಿಗಳು ಮೇ 13 ರಿಂದ ಪ್ರಕಟಿಸುತ್ತಿರುವ 'ಆತ್ಮನಿರ್ಭರ್ ಭಾರತ್', ಅಂದರೆ 'ಸ್ವಾವಲಂಬೀ ಭಾರತ' ಪ್ಯಾಕೇಜ್ ಎಂಬುದು ರೈತ–ಕಾರ್ಮಿಕರಿಗೆ ಮಾಡುತ್ತಿರುವ ಕ್ರೂರ ವಂಚನ ಎಂದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿರುವ ಹಿನ್ನೆಲೆಯಲ್ಲಿ ರೈತರು ಮತ್ತು ಕಾರ್ಮಿಕರ ದೇಶವ್ಯಾಪಿ ಪ್ರತಿಭಟನೆಗಳು ಎದ್ದು ಬರುತ್ತಿವೆ.

ಈಗಾಗಲೇ ಮೇ 16 ರಂದು ದೇಶಾದ್ಯಂತ ಲಕ್ಷಾಂತರ ರೈತರು 'ಕಿಸಾನ್ ಸಮ್ಮಾನ್ ದಿವಸ್' (ರೈತ ಗೌರವ ದಿನ' ಆಚರಿಸಿದ್ದಾರೆ. ಮೇ 22 ರಂದು ರಾಷ್ಟ್ರವ್ಯಾಪಿ ಮತಪ್ರದರ್ಶನ ನಡೆಸಲು ಕಾರ್ಮಿಕ ಸಂಘಟನೆಗಳು ಕರೆ ನೀಡಿವೆ.

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎ.ಐ.ಕೆ.ಎಸ್.ಎಸ್.ಸಿ.) ಕರೆಯಂತೆ ದೇಶದ ಮೂಲೆ–ಮೂಲೆಗಳಲ್ಲೂ ರೈತರು ಕೊವಿಡ್–19 ಮಹಾಮಾರಿಯ ಮಿತಿಗಳ ನಡುವೆಯೂ ರೈತ–ಕಾರ್ಮಿಕರ ನೋವು–ಸಂಕಟಗಳ ಬಗ್ಗೆ ಮೋದಿ ಸರಕಾರದ ಅಸಡ್ಡೆಯ ವಿರುದ್ಧ ಮತ್ತು ಲಾಕ್‌ಡೌನ್ ಮರೆಯಲ್ಲಿ ಕೃಷಿ–ವ್ಯಾಪಾರಿಗಳ ಪರ 'ಸುಧಾರಣೆ'ಗಳನ್ನು ಹರಿಯ ಬಿಡುತ್ತಿರುವುದರ ವಿರುದ್ಧ ಪ್ರತಿಭಟನೆಯ ಘೋಷಣೆಗಳನ್ನು ಹೊತ್ತ ಫಲಕಗಳನ್ನು ಹಿಡಿದುಕೊಂಡು ರೈತ ಗೌರವ ದಿನವನ್ನು ಆಚರಿಸಿದ್ದಾರೆ.

ಕೃಷಿ ಉತ್ಪನ್ನಗಳ ತಡೆಮುಕ್ತ ಅಂತರ–ರಾಜ್ಯ ವ್ಯಾಪಾರಕ್ಕೆ ಅವಕಾಶ ಕೊಡಲೆಂದು ಆವಶ್ಯಕ ಸರಕುಗಳ ಕಾಯ್ದೆ, 1955ಕ್ಕೆ ಮೋದಿ ಸರಕಾರ ತಿದ್ದುಪಡಿಯನ್ನು ಪ್ರಕಟಿಸಿರುವುದರ ವಿರುದ್ಧವೂ ರೈತರು ಘೋಷಣೆಗಳನ್ನು ಎತ್ತಿದರು. ಇದು ರಾಜ್ಯಗಳ ಅಧಿಕಾರಗಳನ್ನು ಸೊರಗಿಸಿ ದೇಶದ ಒಕ್ಕೂಟ ಸ್ವರೂಪದ ವಿರುದ್ಧ ಮಾಡಿರುವ ದಾಳಿ, ಇಂತಹ ಕೃಷಿ ವ್ಯಾಪಾರಸ್ಥರ ಪರವಾದ ಕ್ರಮಗಳಿಂದ ರೈತಾಪಿ ಜನಗಳ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸುವುದರ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ರೈತರು ಕೊಟ್ಟಿದ್ದಾರೆ.



ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ವಿವಿಧ ವಲಯಗಳ ಸ್ವತಂತ್ರ ಅಖಿಲ ಭಾರತ ಒಕ್ಕೂಟಗಳ ಮುಖಂಡರು ಮೇ 14 ರಂದು ಸಭೆ ಸೇರಿ ಲಾಕ್‌ಡೌನ್ ಅವಧಿಯಲ್ಲಿ ಶ್ರಮಜೀವಿಗಳು ಎದುರಿಸುತ್ತಿರುವ ಕಠಿಣ ಪರಿಸ್ಥಿತಿಯ ಬಗ್ಗೆ ಚರ್ಚಿಸಿ ಈ ಸವಾಲನ್ನು ಎದುರಿಸಲು ಐಕ್ಯ ಕಾರ್ಯಾಚರಣೆಗಳನ್ನು ನಡೆಸಲು ನಿರ್ಧರಿಸಿದರು.

ಕಾರ್ಮಿಕರನ್ನು ಜೀತದಾಳುಗಳಾಗಿ ಮಾಡುವ ಪ್ರಯತ್ನಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಇದನ್ನು ಒಗ್ಗಟ್ಟಿನಿಂದ ಎದುರಿಸಲು ನಿರ್ಧರಿಸಿವೆ. ಈಗಾಗಲೇ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆದಿವೆ. ರಾಷ್ಟ್ರಮಟ್ಟದಲ್ಲಿ ಪ್ರತಿರೋಧ ಕಾರ್ಯಾಚರಣೆಗಳನ್ನು ಆರಂಭಿಸಲು ಮೇ 22ನ್ನು ರಾಷ್ಟ್ರವ್ಯಾಪಿ ಪತ್ರಿಭಟನಾ ದಿನವಾಗಿ ಆಚರಿಸುತ್ತಿವೆ. ಜತೆಗೆ ದಿನವಿಡೀ ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಮುಖಂಡರು ದಿಲ್ಲಿಯ ರಾಜಘಾಟ್ ನಲ್ಲಿ ಗಾಂದೀಜಿಯ ಸಮಾಧಿಯ ಎದುರು ಉಪವಾಸ ಮುಷ್ಕರ ನಡೆದಿದೆ.

ಇದಾದ ನಂತರ ಲಕ್ಷಾಂತರ ಮನವಿಗಳನ್ನು ಸರಕಾರಗಳಿಗೆ ಕಳಿಸಲಾಗುವುದು. ಈ ನಡುವೆ ರಾಜ್ಯಗಳಲ್ಲಿ ಮತ್ತು ವಿವಿಧ ಉದ್ದಿಮೆ ವಲಯಗಳಲ್ಲಿ ಐಕ್ಯ ಚಳುವಳಿಯನ್ನು ಬಲಗೊಳಿಸುವ ಪ್ರಯತ್ನಗಳನ್ನು ತೀವ್ರಗೊಳಿಸಲಾಗುವುದು.

ಭಾರತ ಸರಕಾರ ಕಾರ್ಮಿಕರ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಕುರಿತ ಅಂತರ್ರಾಷ್ಟ್ರೀಯ ಅಧಿನಿರ್ಣಯಗಳನ್ನು ಉಲ್ಲಂಘಿಸುತ್ತಿದೆ ಎಂದು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ, ಐಎಲ್‌ಒಗೆ ಒಂದು ಜಂಟಿ ದೂರನ್ನು ಸಲ್ಲಿಸಲೂ ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನಿರ್ಧರಿಸಿವೆ.

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹೊರಟಿದೆ ಬಿಜೆಪಿ ರಾಜ್ಯ ಸರ್ಕಾರ

ಸಂಪಾದಕೀಯ

ಕೊರೊನಾ ಸೋಂಕಿನ ಭೀತಿಯನ್ನು ಮುಂದಿಟ್ಟು ರಾಜ್ಯ ಬಿಜೆಪಿ ಸರ್ಕಾರ ನಮೋ ನಿರ್ದೇಶನಕ್ಕೆ ಅನುಗುಣವಾಗಿ ತಮ್ಮ ಪಕ್ಷ ರಾಜಕೀಯವನ್ನು ಬಲಪಡಿಸಲು ವ್ಯವಸ್ಥಿತ ಪ್ರಯತ್ನದಲ್ಲಿ ತೊಡಗಿದೆ. ಕಾರ್ಮಿಕರಿಗೆ ಲಾಭಕೋರ ಮಾಲೀಕರ ದೌರ್ಜನ್ಯ ವಿರುದ್ಧ ರಕ್ಷಣೆ ನೀಡುತ್ತಿದ್ದ ಕಾನೂನುಗಳನ್ನೇ ಕಿತ್ತುಕೊಳ್ಳಲು ಹೊರಟಿದೆ. ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಲಾಭದಾಯಕ ಬೆಲೆ ನೀಡಿ ನೇಗಿಲ ಯೋಗಿಯನ್ನು ಕಾಪಾಡುವ ಬದಲು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯನ್ನೇ ತಿದ್ದುಪಡಿ ಮಾಡಿ ದೇಶಕ್ಕೆ ಅನ್ನನೀಡುವ ರೈತರನ್ನು ದೈತ್ಯ ಕಾರ್ಪೊರೇಟ್ ಕಂಪೆನಿಗಳ ದವಡೆಗೆ ನೂಕಲು ಹೊರಟಿದೆ. ಕಳೆದ ಎರಡು ಮೂರು ತಿಂಗಳುಗಳಿಂದ ಕೆಲಸ ಇಲ್ಲದೆ, ಮನೆಯಿಂದ ಹೊರ ಬರಲಾಗದೆ ಉಪವಾಸ ವನವಾಸ ಅನುಭವಿಸಿದ ಕೃಷಿ ಕೂಲಿಕಾರರಿಗೆ, ವಲಸೆ ಕಾರ್ಮಿಕರಿಗೆ ನೆರವು ನೀಡಲು ಯಡಿಯೂರಪ್ಪನವರ ಖಜಾನೆಯಲ್ಲಿ ದುಡ್ಡಿಲ್ಲ. ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ಬೆಳೆದ ಫಸಲನ್ನು ಮಾರಾಟಮಾಡಲಾಗದೆ ನಷ್ಟ ಅನುಭವಿಸಿದ ಕೃಷಿಕನಿಗೆ ಯಡಿಯೂರಪ್ಪ ಕೊಟ್ಟದ್ದು ಕೇವಲ ತಲಾ 5000 ರೂ. ಮಾತ್ರ. ಅದೂ ಇನ್ನೂ ಘೋಷಣೆಯಾಗಿ ಉಳಿದಿದೆ. ಕಾರ್ಯರೂಪಕ್ಕೆ ಬಂದಿಲ್ಲ. ಕುಡಿಯುವ ನೀರು ಸಿಗದಂತಾಗಿ ಪರದಾಡುತ್ತಿರುವ ಗ್ರಾಮಗಳಿಗೆ ನೀರು ಒದಗಿಸುವ ವ್ಯವಸ್ಥೆ ಇಲ್ಲ. ಸರ್ಕಾರಿ ಆಸ್ಪತೆಗಳಲ್ಲಿ ಬೇರೆ ರೋಗಿಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಇಲ್ಲ. ವಿದ್ಯಾರ್ಥಿಗಳ ಶಾಲೆ, ಪರೀಕ್ಷೆಗಳ ಗೊಂದಲ. ಇತ್ಯರ್ಥ ಆಗಿಲ್ಲ. ಇವೆಲ್ಲದರ ನಡುವೆ ಕೊರೊನಾ ಸೋಂಕಿತರು, ಮತ್ತು ಶಂಕಿತರ ಸಂಖ್ಯೆ ಆಘಾತಕಾರಿಯಾಗಿ ಬೆಳೆಯುತ್ತಿದೆ.

ಬಾಧಿತ ಜನತೆಯ ಕೈಕಾಲು ಕಟ್ಟಿಹಾಕಿದ್ದಾರೆ. ಬಾಯಿಗೆ ಬೀಗ ಹಾಕಿದ್ದಾರೆ. ಯಾರೂ ಪ್ರಶ್ನಿಸುವಂತಿಲ್ಲ. ಕರ್ಫ್ಯೂ ಜಾರಿಯಲ್ಲಿದೆ. ಎನ್ನಲಾಗುತ್ತದೆ. ತಹಶಿಲ್ದಾರರಿಗೆ, ಜಿಲ್ಲಾಧಿಕಾರಿಗಳಿಗೆ ತಮ್ಮ ಸಮಸ್ಯೆಗಳ ಬಗ್ಗೆ ಮನವಿ ಕೊಡುವುದಿದ್ದರೆ 4 ಜನ ಮಾತ್ರ ಬರಬಹುದು. ಈ ಪರಿಸ್ಥಿತಿಯನ್ನು ಬಳಸಿಕೊಂಡು ಕಾನೂನುಗಳು ಪಾಸಾಗುತ್ತವೆ. ಕಾನೂನುಗಳು ರದ್ದಾಗುತ್ತವೆ. ಪ್ರಜಾಪ್ರಭುತ್ವ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತದೆ. ಅಂತಹ ಗಂಭೀರ ಪ್ರಕರಣಗಳಲ್ಲಿ ಗ್ರಾಮ ಪಂಚಾಯತ್ ಚುನಾವಣೆ ಒಂದು.

ರಾಜ್ಯದ ಸುಮಾರು 6000 ಗ್ರಾಮ ಪಂಚಾಯತಿ ಸದಸ್ಯರ ಹಾಗೂ ಅಧ್ಯಕ್ಷ – ಉಪಾಧ್ಯಕ್ಷರುಗಳ ಅವಧಿ ಮೇ 15 ರಿಂದ ಸೆಪ್ಟೆಂಬರ್ 30 ರೊಳಗೆ ಮುಗಿಯಲಿದೆ. ನಿಯಮ ಪ್ರಕಾರ ಅವಧಿ ಮುಗಿದ ತಕ್ಷಣ ಚುನಾವಣೆ ನಡೆಸಬೇಕು. ಆದರೆ ಕೊರೊನಾದಂತಹ ರಾಷ್ಟ್ರೀಯ ವಿಪತ್ತು ದೇಶವನ್ನು ಆವರಿಸಿದಾಗ ಚುನಾವಣೆಯನ್ನು ಮುಂದೂಡಲು ಅವಕಾಶವಿದೆ. ಆದರೆ ಯಡಿಯೂರಪ್ಪ ಸರ್ಕಾರ ರಾಜಕೀಯ ದುರುದ್ದೇಶ ಸಾಧಿಸುವ ಸಲುವಾಗಿ ಚುನಾವಣಾ ಆಯುಕ್ತರಿಗೆ ಪತ್ರವನ್ನು ಬರೆದು ಚುನಾವಣೆಯನ್ನು ಮುಂದೂಡಿ ಆಡಳಿತ ಸಮಿತಿ ನೇಮಿಸುವಂತೆ ನಿರ್ದೇಶಿಸಿದ್ದಾರೆ. ಚುನಾವಣಾ ಆಯೋಗ ಒಂದು ಸ್ವತಂತ್ರ ವೇದಿಕೆಯೆಂಬುದನ್ನೇ ಅವರು ಮರೆತಿದ್ದಾರೆ.

ಚುನಾವಣೆ ನಡೆಸುವುದೇ ಸರಿಯಾದ ಕ್ರಮವಾಗಿತ್ತು. ಆದರೆ ಸಾವಿರಾರು ಜನ ಆಸ್ಪತ್ರೆಗಳಲ್ಲಿ, ಕ್ವೊರೆಂಟೈನ್‌ಗಳಲ್ಲಿ ದಾಖಲಾಗಿರುವ ಮುಕ್ತ ಚುನಾವಣೆ ನಡೆಸಲು ಸಾಧ್ಯವಾಗದು. ಚುನಾವಣೆಯನ್ನು ಮುಂದೂಡುವುದು ಅನಿವಾರ್ಯ. ಆದರೆ ಗ್ರಾಮಗಳಲ್ಲಿ ಆಡಳಿತ ನಡೆಸುವ ಬಗೆ ಹೇಗೆ? ಸರ್ಕಾರದ ದುರುದ್ದೇಶದ ಆಯ್ಕೆ ಮಾಡಿಕೊಂಡಿದೆ. ಇದ್ದುದರಲ್ಲಿ ಉತ್ತಮ ದಾರಿ ಎಂದರೆ ಹಾಲಿ ಸದಸ್ಯರನ್ನೇ ಆಡಳಿತ ಸಮಿತಿಯಲ್ಲಿ ಮುಂದುವರೆಸಿ ಅವರಿಂದಲೇ ಆಡಳಿತ ನಡೆಸಬಹುದಾಗಿತ್ತು. ಆದರೆ ಯಡಿಯೂರಪ್ಪನವರು ಕೇಂದ್ರ ಸರ್ಕಾರದ ಆದೇಶಕ್ಕೆ ಮಣಿದು ಪ್ರಜಾಪ್ರಭುತ್ವ ಕ್ರಮಕ್ಕೆ ಮುಂದಾಗಿದ್ದಾರೆ.

ಕೊರೊನಾ ದೃಷ್ಟಿಯಿಂದಲೂ ಹಾಲಿ ಸದಸ್ಯರೇ ಯೋಗ್ಯರು. ಏಕೆಂದರೆ ಅವರು ಅನುಭವ ಇರುವ ಸದಸ್ಯರು. ಹಾಲಿ ಸದಸ್ಯರಿಗೆ ತರಬೇಟಿ ನೀಡಲಾಗಿದೆ. ಕೊರೊನಾ ಸೋಂಕಿನಿಂದ ಜನರನ್ನು ಪಾರು ಮಾಡುವ ವಿಧಾನವನ್ನು ಅವರು ಕೆಲ ಮಟ್ಟಿಗಾದರೂ ಅರಿತ್ತಿದ್ದಾರೆ.

ಸರ್ಕಾರದ ಆಯ್ಕೆ ಕೀಳುಮಟ್ಟದ ಪಕ್ಷ ರಾಜಕೀಯ. ಪಂಚಾಯತ್ ರಾಜ್ ಸಂಸ್ಥೆಯ ಕತ್ತು ಹಿಸುಕಲು ಬಿಜೆಪಿ ಮುಂದಾಗಿ ಸಮಿತಿ ಸದಸ್ಯರ ನೇಮಕಕ್ಕೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ತಮ್ಮ ಸ್ಥಾನವನ್ನು ಉಳಿಸಿಕೊಳ್ಳಬೇಕು ಎನ್ನುವ ಹಿರಿಯ ಅಧಿಕಾರಿಗಳು, ಚುನಾವಣಾ ಇಲಾಖೆಯವರು ಪ್ರಭುಗಳ ಇಚ್ಛೆಯನ್ನು ಅರ್ಥಮಾಡಿಕೊಂಡು ಬಿಜೆಪಿ ಬಾಲಂಗೋಚಿಗಳನ್ನು ಸಮಿತಿಗಳಿಗೆ ನೇಮಿಸದೆ ಇರುತ್ತಾರಾ?

ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ-2020, ಹಿಂಪಡೆಯಲು ಹಾಗೂ ಭೂದಂಧೆಯನ್ನು ಸಕ್ರಮಗೊಳಿಸುವ ಬಿಡಿಎ ಕಾಯ್ದೆ ತಿದ್ದುಪಡಿ ಕೈ ಬಿಡಲು ಒತ್ತಾಯಿಸಿದೆ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಕರ್ನಾಟಕ ರಾಜ್ಯ ಸರಕಾರ ಈಚೆಗೆ ವಿಧಾನ ಸಭೆಯಲ್ಲಿ ಅಂಗೀಕರಿಸಿದ ಇದೇ ಮೇ13,2020 ರಂದು ರಾಜ್ಯಪಾಲರ ಸಮ್ಮತಿಯೊಂದಿಗೆ ಪ್ರಕಟಿಸಿದ, ಕರ್ನಾಟಕ ಭೂಸುಧಾರಣಾ ತಿದ್ದುಪಡಿ ಕಾಯ್ದೆ – 2020, ಪಕ್ಕಾ ರೈತ ವಿರೋಧಿಯಾಗಿದೆ.

ಇದು ರೈತರ ಮೇಲಿನ ಬಂಡವಾಳಶಾಹಿ ಹಾಗೂ ಭೂಮಾಲಕರ ದೌರ್ಜನ್ಯವನ್ನು ಮತ್ತಷ್ಟು ವ್ಯಾಪಕಗೊಳಿಸಲಿದೆ.

ರಾಜ್ಯದ ಜನತೆ ಕೋವಿಡ್ –19 ವೈರಾಣುವಿರುದ್ಧದ ಹೋರಾಟದ ಸಂಕಷ್ಟದಲ್ಲಿರುವಾಗ, ಅದರ ಮರೆಯಲ್ಲಿ, ಇಂತಹ ರೈತ ವಿರೋಧಿ ಹಾಗೂ ರಾಜ್ಯದ ಅಭಿವೃದ್ಧಿ ವಿರೋಧಿಯಾದ ಅಕ್ರಮಕ್ಕೆ ಮುಂದಾಗಿರುವುನ್ನು ಸಿಪಿಐಎಂ ಬಲವಾಗಿ ಖಂಡಿಸುತ್ತದೆ.

ಇದು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಖರೀದಿಸುವ ಮತ್ತು ಭೂ ಪರಿವರ್ತನೆಯ ವ್ಯವಸ್ಥೆಯನ್ನು ಸುಲಭ ಗೊಳಿಸಿರುವುದರಿಂದ, ರಾಜ್ಯದ ಕೃಷಿ ಭೂಮಿಯನ್ನು ಗಣನೀಯವಾಗಿ ಕಡಿತಗೊಳಿಸಲಿದೆ. ಇದು ರಾಜ್ಯದ ಆಹಾರದ ಸ್ವಾವಲಂಬನೆಗೆ ತೀವ್ರ ಧಕ್ಕೆತರಲಿದೆ.

ಅದೇ ರೀತಿ, ಅಂತಹ ಜಮೀನುಗಳನ್ನು ಯಾವ ಉದ್ದೇಶಕ್ಕೆ ಖರೀದಿಸಲಾಗಿದೆಯೋ, ಅಂತಹ ಉದ್ದೇಶಕ್ಕೆ ಏಳು ವರ್ಷದೊಳಗೆ ಬಳಸಿಕೊಳ್ಳದಿದ್ದ ಪಕ್ಷದಲ್ಲಿ ಅದನ್ನು ಬೇರೆಯವರಿಗೆ ಮಾರಾಟ ಮಾಡಲು ಅವಕಾಶ ನೀಡುವುದರಿಂದ, ಸಂಕಷ್ಟದಲ್ಲಿರುವ ರೈತರಿಂದ ಜಮೀನುಗಳನ್ನು ಕಡಿಮೆ ಬೆಲೆಗೆ ಖರೀಧಿಸಿ, ದುಬಾರಿ ಬೆಲೆಗೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುವ ದಂಧೆಗೆ ಅವಕಾಶವಾಗಲಿದೆ.

ಇದು ಕೈಗಾರಿಕಾಭಿವೃದ್ಧಿಯನ್ನೇನು ಸಾಧಿಸಲು ನೆರವಾಗದು ಬದಲಿಗೆ, ಕೃಷಿ ಭೂಮಿ ಹಾಗೂ ರೈತರನ್ನು ಲೂಟಿಗೊಳಪಡಿಸಲು ಬಂಡವಾಳದಾರರು ಹಾಗೂ ಕಾರ್ಪೋರೇಟ್ ಕಂಪನಿಗಳಿಗೆ ಸಹಾಯಕವಾಗಲಿದೆ.

ಆದ್ದರಿಂದ, ತಕ್ಷಣವೇ ರಾಜ್ಯ ಸರಕಾರ, ಸದರಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ– 2020 ನ್ನು ವಾಪಾಸು ಪಡೆಯಲು ಈ ಮೂಲಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಅದೇ ರೀತಿ, ಬೃಹತ್ ಬೆಂಗಳೂರಿನಲ್ಲಿನ ಸುಮಾರು 50 ಸಾವಿರ ಕೋಟಿಗೂ ಅಧಿಕ ಬೆಲೆ ಬಾಳುವ 16,219 ಎಕರೆ ಭೂಗಳ್ಳ ಭೂದಂಧೆಕೋರರ ಮೇಲೆ ಕಾನೂನು ಕ್ರಮವಹಿಸದೇ, ಭೂಗಳ್ಳರ ಭೂದಂಧೆಯ ಜೊತೆ ಶಾಮೀಲಾದಂತೆ ಅದನ್ನು ಸಕ್ರಮ ಗೊಳಿಸಲು ಬಿಡಿಎ ಕಾಯ್ದೆಗೆ ತಿದ್ದುಪಡಿ ಮಾಡುವ ರಾಜ್ಯ ಸರಕಾರದ ಕ್ರಮವನ್ನು ಸಿಪಿಐಎಂ ತೀವ್ರವಾಗಿ ಪ್ರತಿರೋಧಿಸುತ್ತದೆ. ಅಂತಹ ಕ್ರಮವನ್ನು ಕೂಡಲೇ ಕೈಬಿಡಲು ಒತ್ತಾಯಿಸುತ್ತದೆ.

ಮತ್ತು ರಾಜ್ಯದ ನಾಗರೀಕರಿಗೆ ಗೊತ್ತಾಗುವಂತೆ ಮೂಲ ಭೂಗಳ್ಳರ ಪಟ್ಟಿಯನ್ನು ಬಹಿರಂಗ ಪಡಿಸಬೇಕು ಮತ್ತು ಅವರ ಎಲ್ಲರೀತಿಯ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಅದನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕೆಂದು ಸಿಪಿಐಎಂ ಒತ್ತಾಯಿಸುತ್ತದೆ

ಯು. ಬಸವರಾಜ ಕಾರ್ಯದರ್ಶಿ, (22–05–2020)

ವಲಸೆ ಕಾರ್ಮಿಕರನ್ನು 'ಕಸ' ಕ್ಕೆ ಹೋಲಿಸಿದ ಬಿಜೆಪಿ ರಾಷ್ಟ್ರಿಯ ಪ್ರಧಾನ ಕಾರ್ಯದರ್ಶಿ ಬಹಿರಂಗ ಕ್ಷಮಾಪಣೆಗೆ ಆಗ್ರಹ

ಕೊವಿಡ್ 19 ವೈರಸ್ ದಾಳಿಯಲ್ಲಿ ಅತ್ಯಂತ ಸಂಕಷ್ಟಕ್ಕೀಡಾಗಿರುವ ವಿಭಾಗವೆಂದರೆ ವಲಸೆ ಕಾರ್ಮಿಕರು. ಅಂತಹ ವಲಸೆ ಕಾರ್ಮಿಕರಿಗಾಗಿ ಇಡೀ ದೇಶವೇ ಒಂದಾಗಿ ಮಮ್ಮಲ ಮರಗುತ್ತಿದೆ ಇಂತಹ ಸನ್ನಿವೇಶದಲ್ಲಿ ಆಡಳಿತ ಪಕ್ಷ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಸಂತೋಷ್ ವಲಸೆ ಕಾರ್ಮಿಕರನ್ನು ವಲಸೆ 'ಕಸಕ್ಕೆ' ಹೋಲಿಸಿದ ಕ್ರಮವು ಅತ್ಯಂತ ಮನುಷ್ಯ ವಿರೋಧಿಯಾಗಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ಸಿಐಟಿಯು) ತೀವ್ರವಾಗಿ ಖಂಡಿಸಿದ್ದು ಕೂಡಲೇ ಅವರು ವಲಸೆ ಕಾರ್ಮಿಕರ ಬಹಿರಂಗ ಕ್ಷಮೆ ಕೇಳಬೇಕೆಂದು ಆಗ್ರಹಪಡಿಸಿದೆ.

ಇಡೀ ದೇಶದಲ್ಲಿರುವ 8 ಕೋಟಿ ವಲಸೆ ಕಾರ್ಮಿಕರು ಕರೋನಾ ವೈರಸ್ ಪ್ರಮುಖ ಬಲಿಪಶುಗಳು ಕರೋನಾದಿಂದಾಗಿ ಹಸಿವು, ನೀರಡಿಗೆ ಹಾಗೂ ವಸತಿ ರಹಿತವಾದ ಈ ವಿಭಾಗಕ್ಕೆ ಕಿಂಚಿತ್ತೂ ಆರ್ಥಿಕ ನೆರವನ್ನು ಕೇಂದ್ರ ಸರಕಾರ ನೀಡಲಿಲ್ಲ. ಇಡೀ ದೇಶದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಗಳು ತಮ್ಮ ಖಜಾನೆಯಲ್ಲಿರುವ ಹಣದಲ್ಲಿ ಸುಮಾರು 3000 ಕೋಟಿಯಷ್ಟು ಕಟ್ಟಡ ಕಾರ್ಮಿಕರ ನಿಧಿಯನ್ನು ಈ ವಲಸೆ ಕಾರ್ಮಿಕರಿಗಾಗಿ ಖರ್ಚು ಮಾಡಿ ಔದಾರ್ಯ ತೋರಿವೆ. ಇದರಲ್ಲಿ ಕೇಂದ್ರ ಸರಕಾರದ ಪಾಲು ಶೂನ್ಯ. ಅಲ್ಲದೆ ಪ್ರಧಾನ ಮಂತ್ರಿ ಶ್ರೀ ನರೇಂದ್ರಮೋದಿ ಹಾಗೂ ಹಣಕಾಸು ಸಚಿವೆ ಶ್ರೀಮತಿ ನಿರ್ಮಲ ಸೀತಾರಾಮನ್ ಘೋಷಿಸಿದ 20 ಲಕ್ಷ ಕೋಟಿ ಕೊವೀಡ್ ಪ್ಯಾಕೇಜ್‌ನಲ್ಲೂ ವಲಸೆ ಕಾರ್ಮಿಕರ ಕಷ್ಟದ ಬದುಕಿಗೆ ಯಾವುದೇ ನಿರ್ದಿಷ್ಟ ಪರಿಹಾರ ಪ್ರಕಟಿಸಲಿಲ್ಲ. ಆದರೆ ದೇಶದ ಜನಸಮುದಾಯ ಮಾತ್ರ ಎಲ್ಲಾ ಭೇಧಭಾವಗಳನ್ನು ತೊರೆದು ಇಂತಹ ವಲಸೆಕಾರ್ಮಿಕರಿಗೆ ತಮ್ಮ ಕೈಲಾದ ಸಹಾಯ ಮಾಡಿ ಮಾನವೀಯತೆ ಮೆರೆದಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ವಲಸೆ ಕಾರ್ಮಿಕರು ತಮ್ಮ ತಮ್ಮ ಊರುಗಳಿಗೆ ತಲುಪಲು ಅಗತ್ಯವಿರುವ ರೈಲು ಬಸ್ಸಿನ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಬೇಕಾದುದ್ದು ಅದರ ಪರಮ ಕರ್ತವ್ಯವಾಗಿತ್ತು. ಆದರೆ ಬಂಡವಾಳಿಗರಿಗೆ ಸಾವಿರಾರು ಕೋಟಿ ಧಾರೆ ಎರೆಯುತ್ತಿರುವ ಸರಕಾರಕ್ಕೆ ಈ ನತದೃಷ್ಟ ವಲಸೆ ಕಾರ್ಮಿಕರ ಪ್ರಯಾಣಕ್ಕೆ ಒಂದು ರುಪಾಯಿಯನ್ನು ಖರ್ಚು ಮಾಡುತ್ತಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ. ಸಾಲದೆಂಬಂತೆ ಆಡಳಿತ ಬಿಜೆಪಿ ಪಕ್ಷದ ಹಿರಿಯ ಮುಖಂಡರೇ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕ್ರೇಜಿವಾಲ ಅವರನ್ನು ಟೀಕಿಸುವ ಭರಾಟೆಯಲ್ಲಿ ವಲಸೆ ಕಾರ್ಮಿರನ್ನು 'ಕಸ'ಕ್ಕೆ ಹೋಲಿಸಿ ಅಪಹಾಸ್ಯ ಮಾಡಿರುವುದು ಅವರ ವ್ಯಕ್ತಿತ್ವಕ್ಕೆ ಶೋಭೆ ತರುವಂತದ್ದಲ್ಲ.

ಇಡೀ ಕೊವೀಡ್ 19 ನ್ನು ಎದುರಿಸುವ ಕೆಲಸದಲ್ಲಿ ಇಡೀ ದೇಶ ಒಂದಾಗಿ ಹೋರಾಡುತ್ತಿದೆ. ಅದರಲ್ಲೂ ನಮ್ಮ ದೇಶದ ಅಭಿವೃದ್ದಿಯಲ್ಲಿ ವಲಸೆ ಕಾರ್ಮಿಕರು ವಹಿಸುತ್ತಿರುವ ಪಾತ್ರ ಪ್ರಶಂಶನೀಯವಾದುದ್ದು ಇಂತಹ ಸನ್ನಿವೇಶದಲ್ಲಿ ನಾವು ಅವರಿಗೆ ಏನು ಮಾಡದಿದ್ದರೂ ಪರವಾಗಿಲ್ಲ ಬದಲಾಗಿ ಕನಿಷ್ಟ ಸೌಜನ್ಯದಿಂದ ವರ್ತಿಸಿ ಈಗೀನ ಸಂಕಟದಿಂದ ಅವರನ್ನು ಹೊರ ತರುವ ಪ್ರಯತ್ನವನ್ನು ಮಾಡೋಣ ಅದು ಮಾತ್ರವೇ ಅವರಿಗೆ ನಾವು ನೀಡುವ ಗೌರವ. ಇದನ್ನು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಸಂತೋಷ್ ಮತ್ತವರ ಹಿಂಬಾಲಕರು ಅರ್ಥ ಮಾಡಿಕೊಳ್ಳಬಹುದೆಂದು ಭಾವಿಸುತ್ತೇವೆ.

ಕೆ. ಮಹಾಂತೇಶ್
ಪ್ರಧಾನ ಕಾರ್ಯದರ್ಶಿ (21–05–2020)

ಕೊರೋನಾ ನೆಪದಲ್ಲಿ ಕೇಂದ್ರ ಮಾರುಕಟ್ಟೆ ಎತ್ತಂಗಡಿ; ಅತಂತ್ರಗೊಂಡ ವ್ಯಾಪಾರಸ್ಥರು-ತೀವ್ರ ಹೋರಾಟಕ್ಕೆ ನಿರ್ಧಾರ



ಕೊರೋನಾ ವೈರಸ್ ತಡೆಗಟ್ಟುವ ಸಲುವಾಗಿ ಕೇಂದ್ರ ಸರಕಾರ ಘೋಷಣೆ ಮಾಡಿರುವ ಲಾಕ್‌ಡೌನ್‌ನಿಂದಾಗಿ ದೇಶದ ಆರ್ಥಿಕತೆ ತೀರಾ ಹಾಳಾಗಿದ್ದು, ಮತ್ತೊಂದು ಕಡೆ ಅದನ್ನೇ ನೆಪಮಾಡಿಕೊಂಡು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಹೆಸರಿನಲ್ಲಿ ನಗರದ ಹೃದಯಭಾಗದಲ್ಲಿದ್ದ ಕೇಂದ್ರ ಮಾರುಕಟ್ಟೆಯನ್ನು ಏಕಾಏಕಿಯಾಗಿ ಬೈಕಂಪಾಡಿಯ ಎಪಿಎಂಸಿ ಯಾರ್ಡ್‌ಗೆ ತಾತ್ಕಾಲಿಕ ನೆಲೆಯಲ್ಲಿ ಎತ್ತಂಗಡಿ ಮಾಡಿರುವುದು ಹಾಗೂ ಯಾವುದೇ ರೀತಿಯ ಪರ್ಯಾಯ ವ್ಯವಸ್ಥೆ ಕಲ್ಪಿಸದಿರುವುದು ತೀರಾ ಅವೈಜ್ಞಾನಿಕ ಕ್ರಮ ಹಾಗೂ ಖಂಡನೀಯವಾಗಿದೆ.

ದ.ಕ. ಜಿಲ್ಲೆಯ ಆರ್ಥಿಕತೆಯ ಜೀವನಾಡಿಯಾದ ಕೇಂದ್ರ ಮಾರುಕಟ್ಟೆ ಕಳೆದ ಹಲವು ದಶಕಗಳಿಂದ ಮಂಗಳೂರು ನಗರದ ಹೃದಯಭಾಗದಲ್ಲಿರುವ 2 ಕಟ್ಟಡಗಳಲ್ಲಿ ಕಾರ್ಯಚರಿಸಿಕೊಂಡಿದ್ದು, ದಿನವೊಂದಕ್ಕೆ ಕೋಟ್ಯಾಂತರ ರೂ. ವಹಿವಾಟು ನಡೆಸುವ ಸ್ಥಳವಾಗಿದೆ. ಅಂತಹ ಮಾರುಕಟ್ಟೆಯ ಪರಿಸರದಲ್ಲಿ ವಿಪರೀತ ಜನಸಂದಣಿ ಸೇರುವುದನ್ನೇ ನೆಪ ಮಾಡಿ ದ.ಕ. ಜಿಲ್ಲಾಡಳಿತವು ಪ್ರತೀ ದಿನ ರಾತ್ರಿ 11ರಿಂದ ಮುಂಜಾನೆ 4 ಗಂಟೆಯವರೆಗೆ ಸಗಟು ವ್ಯಾಪಾರಸ್ಥರು ವ್ಯಾಪಾರ ಮಾಡಬೇಕು, ಚಿಲ್ಲರೆ ವ್ಯಾಪಾರಸ್ಥರು ಬೆಳಿಗ್ಗೆ 7ರಿಂದ 12ರವರೆಗೆ ವ್ಯಾಪಾರ ಮಾಡಬೇಕೆಂದು ತೀರ್ಮಾನಿಸಿತು. ಬಳಿಕ ಒಂದೇ ದಿನದ ಪರಿಸ್ಥಿತಿಯನ್ನು ನೋಡಿ, ಮೊದಲೇ ಕೇಂದ್ರ ಮಾರುಕಟ್ಟೆಯ ಬಗ್ಗೆ ಪೂರ್ವಾಗ್ರಹ ಹೊಂದಿದ್ದ ಜಿಲ್ಲಾಡಳಿತವು ಸಾಮಾಜಿಕ ಅಂತರದ ಪ್ರಶ್ನೆಯನ್ನು ಮುಂದಿಟ್ಟು ಅಲ್ಲಿನ ವ್ಯಾಪಾರಸ್ಥರೊಂದಿಗೆ ಯಾವುದೇ ರೀತಿಯಲ್ಲಿ ಚರ್ಚಿಸದೆ, ಕನಿಷ್ಠ ಮುನ್ಸೂಚನೆಯನ್ನು ಕೂಡ ಕೊಡದೆ ಏಕಾಏಕಿಯಾಗಿ ಕೇಂದ್ರ ಮಾರುಕಟ್ಟೆಯನ್ನು ಬೈಕಂಪಾಡಿಯ ಎಪಿಎಂಸಿ ಯಾರ್ಡ್‌ಗೆ ಸ್ಥಳಾಂತರಿಸಲಾಗಿದೆ ಎಂದು ಹೇಳಿಕೆಯನ್ನು ಕೊಟ್ಟಿತು. ಕೇಂದ್ರ ಮಾರುಕಟ್ಟೆಯಲ್ಲಿ ಸಗಟು, ಚಿಲ್ಲರೆ ವ್ಯಾಪಾರಸ್ಥರು ಸೇರಿದಂತೆ ಬಟ್ಟೆ, ಎಲೆಕ್ಟ್ರಾನಿಕ್ಸ್, ದಿನಸಿ ಅಂಗಡಿಗಳ ವ್ಯಾಪಾರಸ್ಥರು ಇದ್ದರೂ ಅವರ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದ ಜಿಲ್ಲಾಡಳಿತವು, ಎಪ್ರಿಲ್ 2ರಿಂದ 14ರವರೆಗೆ ಸಗಟು ವ್ಯಾಪಾರಸ್ಥರು ಮಾತ್ರ ತಮ್ಮ ವ್ಯಾಪಾರವನ್ನು ತಾತ್ಕಾಲಿಕ ನೆಲೆಯಲ್ಲಿ ಬೈಕಂಪಾಡಿಯ ಎಪಿಎಂಸಿ ಯಾರ್ಡ್‌ಗೆ ಸ್ಥಳಾಂತರಿಸಬೇಕೆಂದು ಆದೇಶ ಹೊರಡಿಸಲಾಯಿತು. ಉಳಿದ ಚಿಲ್ಲರೆ ವ್ಯಾಪಾರಸ್ಥರು ಶಾಪ್‌ಗಳ ಬಗ್ಗೆ ಯಾವುದೇ ಚಕಾರವನ್ನು ಎತ್ತಲಿಲ್ಲ. ಬಳಿಕ ಕಾಟಾಚಾರಕ್ಕೆ ವ್ಯಾಪಾರಸ್ಥರ ಸಭೆಯನ್ನು ಆಯೋಜಿಸಿ ಜಿಲ್ಲಾಡಳಿತದ ತೀರ್ಮಾನವನ್ನು ಹೇರಿದ್ದರೇ ಹೊರತು ವ್ಯಾಪಾರಸ್ಥರ ಅಹವಾಲಿಗೆ ಸ್ಪಂದಿಸಲಿಲ್ಲ. ಬಳಿಕ ಸಂಸದರು, ಶಾಸಕರ ಸಮಕ್ಷಮದಲ್ಲಿ ಎಪಿಎಂಸಿ ಸಭಾಂಗಣದಲ್ಲಿ ಸಭೆ ನಡೆದು, ಯಾವುದೇ ಕಾರಣಕ್ಕೂ ಕೇಂದ್ರ ಮಾರುಕಟ್ಟೆಯನ್ನು ಎಪಿಎಂಸಿ ಯಾರ್ಡ್‌ಗೆ ಸ್ಥಳಾಂತರಿಸಬಾರದು, ನೂತನ ಕಟ್ಟಡದ ಪ್ರಕ್ರಿಯೆ ಪ್ರಾರಂಭವಾಗುವವರೆಗೆ ಈ ಹಿಂದಿನ ಕಟ್ಟಡದಲ್ಲೇ ಕಾರ್ಯಾಚರಿಸಲು ಅವಕಾಶ ನೀಡಬೇಕೆಂದು ವ್ಯಾಪಾರಸ್ಥರು ಒತ್ತಾಯಿಸಿದಾಗ, ಸಂಸದರು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕೇಂದ್ರ ಮಾರುಕಟ್ಟೆಯ ನೂತನ ಕಟ್ಟಡದ ಪ್ರಸ್ತಾಪವನ್ನು ಮುಂದಿಟ್ಟರು. ಒಟ್ಟಿನಲ್ಲಿ ಸಂಸದರು ಶಾಸಕರು ಇಲ್ಲಿಯವರೆಗೆ ಅಧಿಕೃತವಾಗಿ ಕೇಂದ್ರ ಮಾರುಕಟ್ಟೆಯ ನೂತನ ಕಟ್ಟಡದ ಯೋಜನೆಯ ಬಗ್ಗೆ ಬಹಿರಂಗ ಹೇಳಿಕೆಯನ್ನು ಕೊಡದೆ, ಕೇವಲ ಕೊರೋನಾ ನೆಪದಲ್ಲಿ, ಸಾಮಾಜಿಕ ಅಂತರವನ್ನು ಕಾಪಾಡುವ ಹೆಸರಿನಲ್ಲಿ ಈಗಿರುವ ಕೇಂದ್ರ ಮಾರುಕಟ್ಟೆಯನ್ನೇ ಇನ್ನಿಲ್ಲವಾಗಿಸಲು ಹೊರಟಿದ್ದಾರೆ. 4-5 ದಿನಗಳಲ್ಲಿ ಕೇಂದ್ರ ಮಾರುಕಟ್ಟೆಯ ವ್ಯಾಪಾರಸ್ಥರ ಸಭೆಯನ್ನು ಕರೆಯುವುದಾಗಿ ವಾಗ್ದಾನವಿತ್ತ ಸಂಸದರು, 21 ದಿನಗಳು ಕಳೆದರೂ ಈ ಬಗ್ಗೆ ದಿವ್ಯಮೌನ ವಹಿಸಿರುವುದು ಹಲವಾರು ಸಂಶಯಗಳಿಗೆ ಎಡೆ ಮಾಡಿದೆ.

ಕಳೆದ 2 ತಿಂಗಳಿನಿಂದ ಲಾಕ್‌ಡೌನ್‌ನಿಂದಾಗಿ ಪ್ರತಿಯೊಬ್ಬರ ಬದುಕು ತೀರಾ ಸಂಕಷ್ಟದಲ್ಲಿದ್ದು, ವ್ಯಾಪಾರಸ್ಥರು ಕೂಡಾ ಅದರಿಂದ ಹೊರತಾಗಿಲ್ಲ. ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ 598 ವ್ಯಾಪಾರಸ್ಥರನ್ನು ಒಳಗೊಂಡ ಕೇಂದ್ರ ಮಾರುಕಟ್ಟೆಯನ್ನು ಕೊರೋನಾದ ಹೆಸರಿನಲ್ಲಿ ಹಾಗೂ ನವೀಕರಣದ ನೆಪದಲ್ಲಿ ಪರ್ಯಾಯ ವ್ಯವಸ್ಥೆ ಮಾಡದೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಬೀದಿಪಾಲು ಮಾಡಿರುವುದು ಸರ್ವಥಾ ಸರಿಯಲ್ಲ.

ಈ ಬಗ್ಗೆ ಜಿಲ್ಲಾಡಳಿತವು ತುರ್ತು ಗಮನ ಹರಿಸಿ ಸದ್ಯದ ಪರಿಸ್ಥಿತಿಯಲ್ಲಿ ವ್ಯಾಪಾರಕ್ಕೆ ತೀರಾ ಅನಾನುಕೂಲವಾಗಿರುವ ಬೈಕಂಪಾಡಿಯ ಎಪಿಎಂಸಿ ಯಾರ್ಡ್‌ನಲ್ಲಿ ಸಗಟು ವ್ಯಾಪಾರವನ್ನು ಮುಂದುವರಿಸುವ ಇರಾದೆಯನ್ನು ತಕ್ಷಣ ಕೈಬಿಡಬೇಕು, ನಗರದ ಹೃದಯಭಾಗದಲ್ಲಿರುವ ಕೇಂದ್ರ ಮಾರುಕಟ್ಟೆಯ ಕಟ್ಟಡದಲ್ಲೇ, ವ್ಯಾಪಾರ ನಡೆಸಲು ಅವಕಾಶ ಮಾಡಿಕೊಡಬೇಕು, ವೈಜ್ಞಾನಿಕ ನೆಲೆಯಲ್ಲಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿದ ಬಳಿಕವಷ್ಟೇ ನೂತನ ಕಟ್ಟಡದ ಕಾರ್ಯಕ್ಕೆ ಮುಂದಾಗಬೇಕು ಹಾಗೂ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಸುಮಾರು 50 ಲಕ್ಷ ರೂ.ಯಷ್ಟು ನಷ್ಟವಾಗಿದ್ದು, ಸಂತ್ರಸ್ತಗೊಂಡ ವ್ಯಾಪಾರಸ್ಥರಿಗೆ ಕೂಡಲೇ ಪರಿಹಾರವನ್ನು ಘೋಷಿಸಬೇಕೆಂದು ಕೇಂದ್ರ ಮಾರುಕಟ್ಟೆ ವ್ಯಾಪಾರಸ್ಥರ ಸಂಘ (ರಿ) ಹಾಗೂ ನ್ಯೂ ಸೆಂಟ್ರಲ್ ಮಾರ್ಕೆಟ್ ಶಾಪ್ ಓನರ್ಸ್ ಎಸೋಸಿಯೇಶನ್ (ರಿ) ಉಭಯ ಸಂಘಟನೆಗಳು ಜಂಟಿಯಾಗಿ ಒತ್ತಾಯಿಸಿದೆ. ಇಲ್ಲದಿದ್ದಲ್ಲಿ ಕೇಂದ್ರ ಮಾರುಕಟ್ಟೆಯ ಉಳಿವಿಗಾಗಿ ಈ ತಿಂಗಳ ಅಂತ್ಯದವರೆಗೆ ಪ್ರಬಲ ಹೋರಾಟವನ್ನು ಸಂಘಟಿಸುವುದಾಗಿಯೂ ಹಾಗೂ ಜಿಲ್ಲೆಯ ಸಮಾನ ಮನಸ್ಕ ಸಂಘಟನೆಗಳನ್ನು ಒಟ್ಟು ಸೇರಿಸಿ ಹೋರಾಟ ಸಮಿತಿಯನ್ನು ರೂಪಿಸುವ ಮೂಲಕ ಹೋರಾಟದ ತೀವ್ರತೆಯನ್ನು ಹೆಚ್ಚಿಸಲಾಗುವುದು ಎಂದು ಸಂಘಟನೆಗಳು ತಿಳಿಸಿವೆ.

ಸುನೀಲ್‌ಕುಮಾರ್ ಬಜಾಲ್ ಕಾರ್ಯಾಧ್ಯಕ್ಷರು, ಮುಸ್ತಫ ಕುಂಞ ಅಧ್ಯಕ್ಷರು, ಜನಾರ್ಧನ ಸಾಲಿಯಾನ್ ಪ್ರಧಾನ ಕಾರ್ಯದರ್ಶಿ (21-05-2020)

ದತ್ತಾತ್ರೇಯ ಹೊಸಬಾಳೆ ಎಂಬ ಆರ್‌ಎಸ್‌ಎಸ್ ಪದಾಧಿಕಾರಿಯನ್ನು ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ (?) ರವೀಂದ್ರಭಟ್ಟರು ಮಾಡಿದ ಸಂದರ್ಶನದ ಬಗ್ಗೆ ಚರ್ಚೆ ನಡೆಯುತ್ತಿದೆ. ಇದನ್ನುಎರಡುರೀತಿಯಲ್ಲಿ ಚರ್ಚಿಸಬಹುದು. ಮೊದಲನೆಯದು ಬಹಳಷ್ಟು ಪ್ರಗತಿಪರರ ಆಕ್ರೋಶಕ್ಕೆ ಕಾರಣವಾಗಿರುವ ಪ್ರಜಾವಾಣಿಯ ಸೈದ್ಧಾಂತಿಕ ರೂಪಾಂತರ, ಎರಡನೆಯದ್ದು ಸಂದರ್ಶನದ ಹಿಂದಿನ ವೃತ್ತಿಪರತೆ.

ಮೊದಲನೆಯ ಆಕ್ಷೇಪಕ್ಕೆ ಸಂಬಂಧಿಸಿದಂತೆ ಸೂಕ್ಷ್ಮವಾಗಿ ಯೋಚಿಸಿದರೆ ಅರಿವಾಗುವುದು ಆಕ್ಷೇಪಣೆಕಾರರಿಗೆ ಪ್ರಜಾವಾಣಿ ಬಗ್ಗೆ ಇರುವ ವಿಪರೀತ ಪ್ರೀತಿ, ಅಭಿಮಾನ, ವ್ಯಾಮೋಹ. ಇದು ಒಂದು ರೀತಿ, ಹಾದಿ ತಪ್ಪಿದ ಮಗನಿಗೆ ತಾಯಿ ಕಣ್ಣೀರು ಹಾಕುತ್ತಲೇ ಬೆತ್ತ ಹಿಡಿದು ಬಡಿಯುತ್ತಿರುವಂತೆ ನನಗೆ ಕಾಣುತ್ತಿದೆ. ಮಗನಿಗೆ ಮಗನ ಹಾದಿಯೇ ಸರಿ, ತಾಯಿಗೆ ಆಕೆಯ ಹಾದಿ ಸರಿ. ಇದರ ಬಗ್ಗೆ ಆ ಮೇಲೆ ಚರ್ಚೆ ಮಾಡೋಣ.

ಎರಡನೆಯದು ಸಂದರ್ಶನದ ವೃತ್ತಿಪರತೆಯ ವಿಚಾರ. ಇಂತಹವರನ್ನೇ ಸಂದರ್ಶನ ಮಾಡಬೇಕೆಂದು ಮಾಧ್ಯಮದಲ್ಲಿ ಲಿಖಿತ ನಿಯಮವೇನಿಲ್ಲ. ಇಲ್ಲಿ ಸಂದರ್ಶನ ಮುಖ್ಯ ಅಲ್ಲ, ಮುಖ್ಯವಾಗುವುದು ಯಾರನ್ನು, ಯಾರು ಸಂದರ್ಶನ ಮಾಡಿದ್ದಾರೆ ಮತ್ತು ಅದನ್ನು ಎಲ್ಲಿ ಎಷ್ಟು ಮಹತ್ವಕೊಟ್ಟು ಪ್ರಕಟಿಸಲಾಗಿದೆ ಎಂಬ ಪತ್ರಿಕೆಯ ನಿರ್ಧಾರ.

ಇದೇ ಸಂದರ್ಶನವನ್ನು ಪ್ರಜಾವಾಣಿಯ ಒಳಪುಟದಲ್ಲಿ, ವರದಿಗಾರನೊಬ್ಬ ಮಾಡಿದ್ದರೆ ಅದಕ್ಕೆ ಇಂದಿನ ಪ್ರಮಾಣದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿರಲಿಲ್ಲ. ಇಲ್ಲವೇ ಸರ ಸಂಘ ಚಾಲಕ ಮೋಹನ್ ಭಾಗವತ್ ಅವರನ್ನೇ ಸಂದರ್ಶನ ಮಾಡಿದ್ದರೂ ಸಮರ್ಥನೆ ಇರುತ್ತಿತ್ತು. ನನಗೆ ತಿಳಿದ ಹಾಗೆ ಪ್ರಜಾವಾಣಿಯ ಇತಿಹಾಸದಲ್ಲಿ ಸಂಪಾದಕ, ಕಾರ್ಯನಿರ್ವಾಹಕ ಸಂಪಾದಕ ಇಲ್ಲವೇ ಸಹ ಸಂಪಾದಕರ್ಯಾರೂ ಕೂಡಾ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಕೇಂದ್ರ ರಾಜ್ಯದ ಸಚಿವರು, ಇಲ್ಲವೇ ಹಿರಿಯ ಸಾಹಿತಿಗಳನ್ನು ಬಿಟ್ಟರೆ ಉಳಿದವರ ಸಂದರ್ಶನ ಮಾಡಿಲ್ಲ.

ಸಂದರ್ಶನಕಾರರು ಹೊಸಬಾಳೆಯವರನ್ನು ಸರ್ಕಾರದ ವಕ್ತಾರರಿಗೆ ಕೇಳುವ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಯಾವುದೇ ಮುಜುಗರ ಇಲ್ಲದೆ ವಕ್ತಾರರಂತೆಯೇ ಉತ್ತರಿಸಿದ್ದಾರೆ. ಎಲ್ಲ ಪಕ್ಷಗಳಿಂದಲೂ ಸಮಾನ ದೂರ ಎನ್ನುವ ಆರ್‌ಎಸ್‌ಎಸ್ ನ ಘೋಷಿತ ನಿರ್ಧಾರದಲ್ಲಿ ಏನಾದರೂ ಬದಲಾವಣೆಯಾಗಿದೆಯೇ?

1. ಭಾರತದ ಜನರು ಹೇಗೆ ಸ್ಪಂದಿಸುತ್ತಿದ್ದಾರೆ ಎಂದು ಕೇಳಲು ಹೊಸಬಾಳೆಯವರೇನ ಇಡೀ ದೇಶ ಸುತ್ತಿಬಂದವರೇ? ಸುತ್ತಿ ಬಂದಿದ್ದರೆಅದನ್ನು ವಿವರವಾಗಿ ತಿಳಿಸಬೇಕಿತ್ತು. ಇಲ್ಲವೇ ಸರ್ಕಾರವೇನಾದರೂ ನಡೆಸಿದ ಸಮೀಕ್ಷೆಯರಹಸ್ಯದಾಖಲೆಯೇನಾದರೂ ಹೊಸಬಾಳೆಯವರ ಕೈಗೆ ಸಿಕ್ಕಿದೆಯೇ?
2. ಕೇಳಬೇಕಾಗಿದ್ದದ್ದು ಆರ್‌ಎಸ್‌ಎಸ್ ಹೇಗೆ ಸ್ಪಂದಿಸುತ್ತಿದೆ ಎನ್ನುವುದನ್ನು. " ಮುಸ್ಲಿಮರನ್ನು ಬಿಟ್ಹಾಕಿ, ನಿಮ್ಮ ಲೆಕ್ಕದಲ್ಲಿ ಅವರಿಲ್ಲ, ಹಿಂದೂಗಳ ಪರವಾಗಿ ಪ್ರಾಣ ಕೊಡುವ ಆರ್‌ಎಸ್‌ಎಸ್ ದೇಶಾದ್ಯಂತ ಬೀದಿಯಲ್ಲಿ ಸಾವು-ಬದುಕಿನ ಹೋರಾಟ ನಡೆಸುತ್ತಿರುವ ಹಿಂದೂ ವಲಸೆ ಕಾರ್ಮಿಕರಿಗೆ ಏನಾದರೂ, ಎಲ್ಲಿಯಾದರೂ ನೆರವು ನೀಡಿದೆಯಾ? ಸವಿವರವಾಗಿ ತಿಳಿಸುತ್ತೀರಾ ಎಂದು ಕೇಳಬೇಕಿತ್ತಲ್ಲಾ?
3. ಕೇಳಬೇಕಾಗಿದ್ದದ್ದು ಕೇಂದ್ರ ಸರ್ಕಾರ ಹೇಗೆ ಸ್ಪಂದಿಸುತ್ತಿದೆ? ಎಂದು. ಒಂದು ಸಾವು, 24 ಸೋಂಕು ಇದ್ದಾಗ ಲಾಕ್‌ಡೌನ್ ಘೋಷಿಸಿ ಈಗ 62 ಸಾವಿರ ಸೋಂಕಿತರು, 3300 ಸಾವು ಸಂಭವಿಸಿದ ಸಂದರ್ಭದಲ್ಲಿ ಲಾಕ್‌ಡೌನ್ ಹಿಂದೆಗೆದು ಕೊಂಡಿದ್ದು ಯಾಕೆ? ಎಂದು ಕೇಳಬೇಕಿತ್ತಲ್ಲಾ?
4. ವಿರೋಧ ಪಕ್ಷಗಳಿಂದ ಸಹಕಾರ ಸಿಕ್ಕಿದೆ ಎಂದು ನಿಮಗನಿಸಿದೆಯೇ ಎಂದರೆ ಏನರ್ಥ? ಯಾರಿಗೆ ಸಹಕಾರ? ಸರ್ಕಾರಕ್ಕೋ? ಆರ್‌ಎಸ್‌ಎಸ್ ಗೋ? ಸರ್ಕಾರಕ್ಕೆ ಈ ಪ್ರಶ್ನೆಯಾದರೆ ಕನಿಷ್ಠ ಯಡಿಯೂರಪ್ಪನವರನ್ನಾದರೂ ಕೇಳಬೇಕಿತ್ತಲ್ಲಾ? ವಿರೋಧ ಪಕ್ಷಗಳು ಸಹಕಾರ ಕೊಡುವುದಿದ್ದರೂ ಆರ್‌ಎಸ್‌ಎಸ್ ಗೆ ಯಾಕೆ ಕೊಡಬೇಕು?
5. ಕೊರೊನಾ ಹರಡುವ ವಿಷಯದಲ್ಲಿ ಮುಸ್ಲಿಮರ ವಿರುದ್ಧ ಆರೋಪಗಳು ಬಂದವು ಏನಂತೀರಿ ಎಂದರೆ ಏನರ್ಥ? ಆರೋಪ ಮಾಡಿದವರ ಹೆಸರು ಹೇಳಿ ಕೇಳಬೇಕಿತ್ತಲ್ಲಾ? ಬಿಜೆಪಿಯ ಶೋಭಾ ಕರಂದ್ಲಾಜೆ, ಸಿ.ಟಿ.ರವಿ, ಯತ್ನಾಳ್, ರೇಣುಕಾಚಾರ್ಯ ಮೊದಲಾದವರು ಆರೋಪ ಮಾಡಿದ್ದಾರಲ್ಲಾ? ನೀವೂ ಇಲ್ಲಿಯವರೆಗೆ ಅದನ್ನು ತಪ್ಪೆಂದು ಹೇಳಲಿಲ್ಲವಲ್ಲಾ ಯಾಕೆ? ಈ ರೀತಿ ಆರೋಪ ಮಾಡುವವರ ವಿರುದ್ಧ ಕ್ರಮಕೈಗೊಳ್ಳಲು ಹೊರಟಿದ್ದ ಯಡಿಯೂರಪ್ಪನವರ ಕೈಕಟ್ಟಿ ಹಾಕಿದ್ದು ಯಾರು ಎಂದು ಕೇಳಬೇಕಿತ್ತಲ್ಲಾ?
6. ಕೊನೆಯದಾಗಿ, ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯನ್ನು ಮೇಲೆತ್ತಲು ಏನು ಮಾಡಬೇಕೆಂದು ಹೇಳಲು ಹೊಸಬಾಳೆಯವರೇನು ಆರ್ಥಿಕ ತಜ್ಞರೇ? ನರೇಂದ್ರ ಮೋದಿ ಸರ್ಕಾರ ಖಾಸಗೀಕರಣದ ಹೊಸ ಪರ್ವ ಪ್ರಾರಂಭಿಸಿರುವ ಬಗ್ಗೆ ಆರ್‌ಎಸ್‌ಎಸ್ ಅಭಿಪ್ರಾಯ ಕೇಳಬೇಕಿತ್ತಲ್ಲಾ?
7. ಕಾರ್ಮಿಕ ಕಾನೂನನ್ನು ಅಮಾನತ್ ನಲ್ಲಿರಿಸಲು ಮತ್ತು ಅದಕ್ಕೆ ತಿದ್ದುಪಡಿ ಮಾಡಲು ಹೊರಟಿರುವ ಬಗ್ಗೆ. ಸರ್ಕಾರದ ಈ ನಿರ್ಧಾರವನ್ನು ಪರಿವಾರಕ್ಕೆ ಸೇರಿರುವ ಬಿಎಂಎಸ್, ಸ್ವದೇಶಿ ಜಾಗರಣ ವೇದಿಕೆ ವಿರೋಧಿಸುತ್ತಿರುವ ಬಗ್ಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಕಾಯ್ದೆಗೆ ತಿದ್ದುಪಡಿ ಮಾಡಿ ಕಾರ್ಮಿಕರಿಗೆ ಲಾಕ್‌ಡೌನ್ ಅವಧಿಯ ಸಂಬಳ ಕೊಡದಂತೆ ಮಾಡಿರುವ ಬಗ್ಗೆ ಅಭಿಪ್ರಾಯ ಕೇಳಬೇಕಿತ್ತಲ್ಲಾ?

ಅಂದ ಹಾಗೆ ಬಿ.ಎಲ್. ಸಂತೋಷ್ ಅವರನ್ನು ದೂರಇಟ್ಟು ಇದ್ದಕ್ಕಿದ್ದ ಹಾಗೆ ದತ್ತಾತ್ರೇಯ ಹೊಸಬಾಳೆಯವರಿಗೆ, ಅದೂ ರಾಘವೇಶ್ವರ ಸ್ವಾಮಿ ವಿರುದ್ಧದ ಅಭಿಯಾನದಲ್ಲಿ ಸಕ್ರಿಯರಾಗಿದ್ದವರಿಗೆ ಎಲ್ಲರೂ ಮಹತ್ವ ಕೊಡುವುದು ನೋಡಿದರೆ ಇದರಲ್ಲಿ ಬೇರೆಏನಾದರೂ ಒಳಸುಳಿಗಳಿರಬಹುದೇ?

– ದಿನೇಶ್ ಅಮಿನ್ ಮಟ್ಟು

ಕಾಂ.ಕೆ. ವರದರಾಜನ್ ರವರಿಗೆ ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿಯ ಹೃದಯ ಪೂರ್ವಕ ಶ್ರದ್ಧಾಂಜಲಿ:

ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ದ ಕೇಂದ್ರ ಸಮಿತಿಯ ಸದಸ್ಯರು ಮತ್ತು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಉಪಾಧ್ಯಕ್ಷರು ಆದ ಕಾಮ್ರೇಡ್ ಕೆ. ವರದರಾಜನ್ ರವರು ಇಂದು ತಮ್ಮ 74 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

ದೇಶ ಕಂಡ ಅಪ್ರತಿಮ ರೈತ ನಾಯಕರಲ್ಲೊಬ್ಬರಾಗಿದ್ದರು. ಅಕ್ಟೋಬರ್ 04, 1946 ರಲ್ಲಿ ತಮಿಳುನಾಡಿನಲ್ಲಿ ಜನಿಸಿದರು. ಅವರು ಸಿವಿಲ್ ಇಂಜನೀಯರಿಂಗನಲ್ಲಿ ಡಿಪ್ಲೋಮಾ ಪದವಿ ಪಡೆದವರು. ತಮ್ಮ ತಾರುಣ್ಯದಲ್ಲಿಯೇ ಎಡ ಸಿದ್ಧಾಂತದೆಡೆಗೆ ಆಕರ್ಷಿತರಾದವರು.

ತಮಿಳ್ನಾಡು ರಾಜ್ಯದ ತಿರುಚಿ ಜಿಲ್ಲೆಯಲ್ಲಿ 1968 ರಲ್ಲಿಯೇ ಪಕ್ಷದ ಸದಸ್ಯರಾಗಿ, ರೈತ ಚಳುವಳಿ ಕಟ್ಟಲು ಮುಂದಾದರು. ಚಳುವಳಿಯಲ್ಲಿ ಪೂರ್ಣ ಕಾಲ ತೊಡಗಿಸಿಕೊಂಡ ಅವರು ಮುಂದೆ ದೇಶದ ನೇತಾರರಾದವರು. ತಮ್ಮ ಕೊನೆಯ ದಿನಗಳ ವರೆಗೆ ಹಿಂದೆ ಸರಿದವರಲ್ಲ.

ದೇಶದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸುಮಾರು ಎರಡು ವರ್ಷಗಳ ಕಾಲ ಭೂಗತರಾಗಿದ್ದವರು. ಸಿಪಿಐಎಂ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. ಮಾತ್ರವಲ್ಲಾ, ಸಮರ ಶೀಲ ರೈತ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಗಳಾಗಿ ಒಂದೂವರೆ ದಶಕಗಳ ಕಾಲ ಕಾರ್ಯ ನಿರ್ವಹಿಸಿದ್ದಾರೆ. ದಲಿತ ಶೋಷಣ ಮುಕ್ತಿ ಮಂಚ್ ನ ಸ್ಥಾಪಕ ಸದಸ್ಯರಾಗಿದ್ದು ಮಾತ್ರವಲ್ಲಾ ಸುಮಾರು ಆರೇಳು ವರ್ಷಗಳು ಅದು ದೇಶದಾದ್ಯಂತ ವಿಸ್ತಾರಗೊಳ್ಳಲು ಶ್ರಮಿಸಿದವರು.

ಕರ್ನಾಟಕದ ಸಿಪಿಐಎಂ ಪಕ್ಷ ಮತ್ತು ರೈತ ಚಳುವಳಿ ಹಾಗೂ ದಲಿತ ಚಳುವಳಿಗೆ ಕಳದೆರಡು ದಶಕಗಳಿಂದ ನಿರಂತರವಾಗಿ ಮಾರ್ಗದರ್ಶನ ಮಾಡಿದವರು. ಸರಳ ಜೀವಿಗಳು, ಸದಾ ಹಸನ್ಮುಖಿಗಳು, ಸಹೃದಯರು, ಉತ್ತಮ ತಮಾಶೆಗಳ ಮೂಲಕ ಬಿಗುವಿನ ವಾತಾವರಣವನ್ನು ಸಡಿಲಗೊಳಿಸಲು ಯತ್ನಿಸುತ್ತಿದ್ದ ಪ್ರೀತಿಯ ಸಂಗಾತಿಯಾಗಿದ್ದರು.

ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ದ ರಾಜ್ಯ ಸಮಿತಿಯು ಅಗಲಿದ ಸಂಗಾತಿಗೆ ತನ್ನ ಹೃದಯ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ಅದೇ ರೀತಿ, ಅವರ ಕುಟುಂಬದ ದುಃಖತಪ್ತ ಸದಸ್ಯರುಗಳಿಗೆ ಮತ್ತು ಅವರ ಎಲ್ಲಾ ಸಂಗಾತಿಗಳಿಗೆ ತನ್ನ ಸಂತಾಪಗಳನ್ನು ತಿಳಿಸುತ್ತದೆ.

ಯು. ಬಸವರಾಜ,
ಕಾರ್ಯದರ್ಶಿ (16–05–2020)

ದೇಶ ಕಂಡ ಅಪ್ರತಿಮ ರೈತ ನಾಯಕ: ಶ್ರೀ ಕೆ. ವರದರಾಜನ್

ಅಖಿಲ ಭಾರತ ರೈತ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಉಪಾಧ್ಯಕ್ಷರಾಗಿದ್ದ ಶ್ರೀ ಕೆ. ವರದರಾಜನ್ ಇಂದು ಬೆಳಿಗ್ಗೆ ತಮಿಳುನಾಡಿನ ಕರೂರ್ ನಲ್ಲಿ ತಮ್ಮ 74 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.



ಅವರು ಮೊದಲಿಗೆ ತಮ್ಮ ತಾರುಣ್ಯದಲ್ಲಿಯೇ 1968 ರಲ್ಲಿ ತಿರುಚಿ ಜಿಲ್ಲೆಯಲ್ಲಿ ರೈತ ಚಳುವಳಿಯನ್ನು ಮುನ್ನಡೆಸಲು ತಮ್ಮನ್ನು ತೊಡಗಿಸಿಕೊಂಡರು ಮುಂದೆ ಅವರು, ಹಲವು ವರ್ಷಗಳ ಕಾಲ ತಮಿಳ್ನಾಡು ರಾಜ್ಯದ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯಾಗಿ ನಂತರ ದೇಶದಾದ್ಯಂತ ಎರಡು ಕೋಟಿ ಸದಸ್ಯತ್ವ ಹೊಂದಿದ್ದ ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಗಳಾಗಿ ಸುಮಾರು ಒಂದೂವರೆ ದಶಕಗಳ ಕಾಲ ಕಾರ್ಯ ನಿರ್ವಹಿಸಿದರು.ರೈತರು, ಕೂಲಿಕಾರರ ಮತ್ತು ದಲಿತರ ಪ್ರೀತಿಪಾತ್ರ ನಾಯಕರಾಗಿದ್ದರು, ಭೂಮಿಗಾಗಿ, ಕೂಲಿಗಾಗಿ, ಬೆಂಬಲಬೆಲೆಗಾಗಿ, ಕೃಷಿ ಸಾಲಕ್ಕಾಗಿ ಹಲವು ಪ್ರಮುಖ ಹೋರಾಟಗಳನ್ನು ಕಟ್ಟಿ ಬೆಳೆಸಿದವರು. ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯಾಚರಣೆಯ ವಿರುದ್ದ ಸೆಣೆಸಿದವರು, ದೇಶ ಕಂಡ ಅಪ್ರತಿಮ ನಾಯಕರಲ್ಲಿ ಒಬ್ಬರಾಗಿ ದುಡಿದವರು.

ಸಿಪಿಐಎಂ ಪಕ್ಷದ ಪಾಲಿಟ್ ಬ್ಯುರೋ ಸದಸ್ಯರಾಗಿ ದುಡಿದವರು. ದೇಶದಾದ್ಯಂತ ತಿರುಗಾಡಿ ಹಲವು ರಾಜ್ಯಗಳಲ್ಲಿ ರೈತರ ಹಾಗೂ ಕಾರ್ಮಿಕರ ಮತ್ತು ದಲಿತರ ಚಳುವಳಿಗಳ ಬೆಳವಣಿಗೆಗೆ ತಮ್ಮ ಕೊಡುಗೆ ನೀಡಿದವರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಗೆ ಕಳೆದ ಎರಡು ದಶಕಗಳಿಂದ ಮಾರ್ಗದರ್ಶನ ಮಾಡಿದವರು. ಕರ್ನಾಟಕದಲ್ಲಿ ನಿವೇಶನ ಹಾಗೂ ಭೂಮಿಗಾಗಿ, ಬೆಂಬಲಬೆಲೆಗಾಗಿ ದೊಡ್ಡ ಚಳುವಳಿ ಸಂಘಟಿಸಲು ನೆರವಾದವರು.

ಅಗಲಿದ ಹಿರಿಯರಿಗೆ ಕರ್ನಾಟಕ ಪ್ರಾಂತ ರೈತ ಸಂಘ ತನ್ನ ಹೃದಯ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ಅವರ ದುಃಖ ತಪ್ತ ಕುಟುಂಬದ ಸದಸ್ಯರಿಗೆ ತನ್ನ ತೀವ್ರ ಸಂತಾಪಗಳನ್ನು ಸಲ್ಲಿಸುತ್ತದೆ.

ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು, ಯು. ಬಸವರಾಜ
ಪ್ರಧಾನ ಕಾರ್ಯದರ್ಶಿ, (16–05–2020)

ಜನತೆಯ ಮೇಲೆ ಯುದ್ಧ ನಡೆಸಿರುವ ಸರ್ಕಾರಗಳೊಂದಿಗೆ ನಿಲ್ಲಲು ಹೇಗೆ ಸಾಧ್ಯ ಆರ್.ಎಸ್.ಎಸ್. ಗೆ ಸಿಪಿಐ(ಎಂ) ಪ್ರಶ್ನೆ

ಕೋವಿಡ್ 19 ಲಾಕ್ಡೌನ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಜನತೆಯ ನೆರವಿಗೆ ದಾವಿಸದೆ ಜನತೆಯ ಮೇಲೆ ಯುದ್ಧ ನಡೆಸಿರುವ ಸರ್ಕಾರಗಳ ಜೊತೆ ಹೇಗೆ ತಾನೆ ನಿಲ್ಲಲು ಸಾಧ್ಯ ಎಂದು ಯುದ್ಧದ ವೇಳೆ ಸರ್ಕಾರದೊಂದಿಗೆ ನಿಲ್ಲ ಬೇಕೆಂದಿರುವ ಆರ್.ಎಸ್.ಎಸ್.ನ ಸರ ಕಾರ್ಯವಾಹಕರಾದ ಶ್ರೀ. ದತ್ತಾತ್ರೇಯ ಹೊಸ ಬಾಳೆಯವರಿಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಪ್ರಶ್ನಿಸಿವೆ. ಕೆಳಗಿನ 15 ಪ್ರಶ್ನೆಗಳನ್ನು ಸಿಪಿಐ(ಎಂ) ಆರ್.ಎಸ್.ಎಸ್ಗೆ ಹಾಕಿದೆ.

1) ಲಾಕ್ಡೌನ್ ಸಂತ್ರಸ್ತರ ಪರಿಹಾರ ಕಾರ್ಯದಲ್ಲು ರಾಜಕೀಯ ಮಾಡುವ ಸರ್ಕಾರಕ್ಕೆ ಬೆಂಬಲ ನೀಡಬೇಕ?
2) ಮತದಾರರಿಗೆ ಮಾತ್ರ ರೇಷನ್ ಕಿಟ್ ವಿತರಿಸಿ ನೈಜ ಫಲಾನುಭವಿಗಳಿಗೆ ರೇಷನ್ ಕಿಟ್ ನೀಡದ ಸರ್ಕಾರಕ್ಕೆ ಬೆಂಬಲಿಸಬೇಕ?
3) ಬಿಲ್ಡರಗಳ ಲಾಭಿಗೆ ಮಣಿದು ವಲಸೆ ಕಾರ್ಮಿಕರನ್ನು ತಮ್ಮ ಊರಿಗೆ ಹೋಗದಂತೆ ತಡೆಯಲು ಯತ್ನಿಸಿದ ಸರ್ಕಾರಕ್ಕೆ ಬೆಂಬಲಿಸಬೇಕ?
4) 29.3.2020 ರ ಮಾರ್ಗದರ್ಶಿ ಆದೇಶದಲ್ಲಿ ಲಾಕ್ಡೌನ್ ಕಾಲಾವಧಿಯಲ್ಲಿ ವೇತನ ನೀಡಬೇಕು ಮತ್ತು ಕೆಲಸದಿಂದ ತೆಗೆಯಬಾರದು ಎಂದು ಹೇಳಿ ಆನಂತರ ಅದನ್ನು ಸುಪ್ರಿಂ ಕೋರ್ಟ್ನಲ್ಲಿ ಪ್ರತಿಪಾದಿಸದೆ, ನಂತರ 17.5.2020 ರ ಆದೇಶದಲ್ಲಿ ಹಿಂದೆ ಪಡೆದ ಸರ್ಕಾರ ಬೆಂಬಲಿಸಬೇಕ?
5) 13.5.2020 ರಂದು ವೇತನ ನೀಡದ ಮತ್ತು ಕೆಲಸ ದಿಂದ ತೆಗೆಯುವ ಮಾಲೀಕರ ಮೇಲೆ ಕ್ರಮಕ್ಕೆ ಆದೇಶ ನೀಡಿ ಮಾಲೀಕರ ಒತ್ತಡಕ್ಕೆ ಮಣಿದು 15.4.2020 ರಂದು ಆದೇಶ ಹಿಂಪಡೆದ ರಾಜ್ಯ ಸರ್ಕಾರವನ್ನು ಬೆಂಬಲಿಸಬೇಕ?
6) ವೇತನ ನೀಡದ ಕೆಲಸದಿಂದ ತೆಗೆಯುವ ಮಾಲೀಕರ ವಿರುದ್ಧ ದೂರು ಸ್ವೀಕರಿಸಲು ಆದೇಶಿಸಿದ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು ಮಾಲೀಕರ ಒತ್ತಡಕ್ಕೆ ಮಣಿದು ರಾತ್ರೋರಾತ್ರಿ ವರ್ಗಾವಣೆ ಮಾಡಿರುವ ರಾಜ್ಯ ಸರ್ಕಾರವನ್ನು ಬೆಂಬಲಿಸಬೇಕ?
7) ವಲಸೆ ಕಾರ್ಮಿಕರಿಗೆ ಉಚಿತ ರೈಲು ವ್ಯವಸ್ಥೆ ಮಾಡದ, ಅವರನ್ನು ನೆಡೆದು ಹೋಗುವ ದಯನೀಯ ಪರಿಸ್ಥಿತಿಗೆ ದೂಡಿ ದಾರಿಯಲ್ಲಿ ಸಾಯಲು ಬಿಟ್ಟು ಅವರನ್ನು ತುಚ್ಛವಾಗಿ ಕಾಣುವ ಹೀಯಾಳಿಸುವ ಹೇಳಿಕೆ ನೀಡುವ ನಾಯಕರನ್ನು ನಿಯಂತ್ರಿಸುವ ಕೆಲಸ ಮಾಡದ ಸರ್ಕಾರವನ್ನು ಬೆಂಬಲಿಸಬೇಕ?
8) ರೈತರಿಗೆ ಮಾರಕವಾದ ಎಪಿಎಂಸಿ ಸುಗ್ರೀವಾಜ್ಞೆ ಹೊರಡಿಸಿರುವ ರಾಜ್ಯ ಸರ್ಕಾರವನ್ನು ಬೆಂಬಲಿಸಿಬೇಕ?
9) ಲಾಕ್ಡೌನ್ ಪರಿಸ್ಥಿತಿ ಬಳಸಿ ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸುವ, ಕೆಲಸದ ಅವಧಿ ಹೆಚ್ಚಳ ಮಾಡುವ, ಕಾರ್ಮಿಕ ಕಾನೂನುಗಳನ್ನು ಅಮಾನತ್ತುಗೊಳಿಸಲು ಸುಗ್ರೀವಾಜ್ಞೆಹೊರಡಿಸುವ ಸರ್ಕಾರವನ್ನು ಬೆಂಬಲಿಸಬೇಕ?
10) ಕೋವಿಡನ್ನು ಧರ್ಮಕ್ಕೆ ಅಂಟಿಸಿ ಪ್ರಚುರ ಪಡಿಸಿ ಜನರ ನಡುವೆ ಕಂದಕ ಸೃಷ್ಟಿಸುವ ಕೆಲವು ಮಾಧ್ಯಮದ ಮೇಲೆ ಕ್ರಮವಹಿಸದ ಮತ್ತು ಅದಕ್ಕೆ ಪೂರಕ ಹೇಳಿಕೆ ನೀಡುವ ತಮ್ಮದೆ ನಾಯಕರ ಮೇಲೆ ಅಗತ್ಯ ಕ್ರಮ ವಹಿಸದ ಸರ್ಕಾರವನ್ನು ಬೆಂಬಲಿಸಬೇಕ?
11) ಪರಿಹಾರದ ಹೆಸರಲ್ಲಿ ಕೇವಲ ಅಂಕಿ ಸಂಖ್ಯೆಗಳ ಪ್ಯಾಕೇಜ್ ಪ್ರಕಟಿಸಿ ಮಾಲೀಕರಿಗೆ ಪರಿಹಾರ ನೀಡುವ ಕಾರ್ಮಿಕರಿಗೆ ಯಾವುದೇ ಪರಿಹಾರ ನೀಡದ ವೇತನವನ್ನು ಇಲ್ಲದಂತೆ ಮಾಡುವ ಸರ್ಕಾರದ ನಿಲುಮೆಯನ್ನು ಬೆಂಬಲಿಸಿಬೇಕ?
12) ಲಾಕ್ಡೌನ್ ತೆರವಿನ ನಂತರ ಆರ್ಥಿಕ ಪುನಶ್ಚೇತನಕ್ಕೆ ಲಿಖಿತ ಸಲಹೆ ನೀಡಿರುವ ವಿರೋಧ ಪಕ್ಷಗಳ ಜೊತೆ ಚರ್ಚಿಸಲು ಮುಂದಾಗದ ಸರ್ಕಾರ ಬೆಂಬಲಿಸಿಬೇಕ?
13) ಎಲ್ಲಾ ದೇಣಿಗೆಯನ್ನು ಪಿಎಂ ಕೇರ್ಸ ನಿಧಿಗೆ ಸ್ವೀಕರಿಸಿ, ರಾಜ್ಯಗಳ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡುವ ದೇಣಿಗೆಯನ್ನು ಸಿಎಸ್ಆರ್ ವ್ಯಾಪ್ತಿಯಿಂದ ಹೊರಗುಳಿಸಿ ರಾಜ್ಯಗಳು ಸಂಪನ್ಮೂಲಗಳ ಕೊರತೆಯಿಂದ ಬಳಲುವಂತೆ ಮಾಡಿ, ರಾಜ್ಯಗಳಿಗೆ ಅಗತ್ಯ ಅನುದಾನವನ್ನು ನೀಡದ ಸರ್ಕಾರ ಬೆಂಬಲಿಸಿ ಬೇಕ?
14) ಕೋವಿಡ್ ನೆಪದಲ್ಲಿ ಸಾರ್ವಜನಿಕ ಉದ್ದಿಮೆಗಳನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಲು ಮುಂದಾಗಿರುವ ಸರ್ಕಾರವನ್ನು ಬೆಂಬಲಿಸಿಬೇಕ?
15) ಲಾಕ್ಡೌನ್ ನಷ್ಟವನ್ನು ಅಂದಾಜಿಸದೆ ಲಾಕ್ಡೌನ್ ಪರಿಹಾರ ಪ್ಯಾಕೇಜ್ ಪ್ರಕಟಿಸುವ, ಪರಿಹಾರ ನೀಡುವಲ್ಲಿ ರಾಜ್ಯಗಳ ನಡುವೆ ತಾರತಮ್ಯ ಮಾಡುವ ಸರ್ಕಾರ ಬೆಂಬಲಿಸಬೇಕ?

ಕೋವಿಡ್ ವಿರುದ್ಧ ಹೋರಾಟಕ್ಕೆ ಸಿಪಿಐ(ಎಂ) ಸಂಪೂರ್ಣ ಬೆಂಬಲ ನೀಡಿದೆ. ಪೂರ್ವ ಯೋಜನೆಯಿಲ್ಲದೆ ಲಾಕ್ಡೌನ್ ಘೋಷಣೆ ಉಂಟುಮಾಡಿದ ಕಾರಣ ಉಂಟಾದ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಿಲ್ಲ ಎಂಬ ವಿರೋಧ ನಮ್ಮ ಪಕ್ಷದಾಗಿದೆ.

ಕೇರಳದ ಸಿಪಿಐ(ಎಂ) ನೇತೃತ್ವದ ಎಲ್ಡಿಎಫ್ ಸರ್ಕಾರ ಇಡಿ ದೇಶಕ್ಕೆ ಮಾದರಿಯಾಗಿದೆ. ಅಂತಹ ಕ್ರಮ ಮೆಚ್ಚುಗೆ ಪಡೆಯ ಬೇಕಲ್ಲವೇ? ಆ ಸರ್ಕಾರಕ್ಕೆ ಕೇಂದ್ರ ಸಮರ್ಪಕ ಹಣಕಾಸು ನೆರವು ನೀಡದಿರುವುದರ ಬಗ್ಗೆಯೂ ಆರ್ಎಸ್ಎಸ್ ಅಭಿಪ್ರಾಯ ನೀಡಬೇಕಲ್ಲವೆ ಎಂದು ಕೋರಿದೆ.

ಕೋವಿಡ್ ವಿರುದ್ಧದ ಯುದ್ಧದಲ್ಲಿ ಸರ್ಕಾರಕ್ಕೆ ಸಿಪಿಐ(ಎಂ) ಪಕ್ಷವು ಬೆಂಬಲ ನೀಡಿದೆ. ಇಡೀ ದೇಶವು ಒಂದಾಗಿ ಕೋವಿಡ್ ವಿರುದ್ದ ಹೋರಾಡಿ ಗೆಲುವು ಸಾಧಿಸಬೇಕೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿ ಈ ಹಿಂದೆಯೆ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಜನತೆಯ ಸಂಕಷ್ಟಕ್ಕೆ ಸ್ಪಂದಿಸದ ಸರ್ಕಾರದ ವಿಚಾರದಲ್ಲಿ ಸಿಪಿಐ(ಎಂ) ಜನತೆಯೊಂದಿಗೆ ಸದಾ ನಿಲ್ಲುತ್ತದೆ ಎಂದು ಸ್ಪಷ್ಟ ಪಡಿಸುತ್ತ, ಮೇಲಿನ 15 ಪ್ರಶ್ನೆಗಳಿಗೆ ಉತ್ತರ ನೀಡ ಬೇಕೆಂದು ಸಿಪಿಐ(ಎಂ) ಕೋರಿದೆ.

ಕೆ.ಎನ್. ಉಮೇಶ್ ಕಾರ್ಯದರ್ಶಿ, ಬೆಂಗಳೂರು ದ.ಜಿ. ಸಮಿತಿ, ಎನ್. ಪ್ರತಾಪ್ ಸಿಂಹ ಕಾರ್ಯದರ್ಶಿ, ಬೆಂಗಳೂರು ಉ.ಜಿ. ಸಮಿತಿ 20.5.2020

ಗ್ರಾಮ ಪಂಚಾಯತ್ ಗಳಿಗೆ ಆಡಳಿತ ಸಮಿತಿಗಳನ್ನು ನೇಮಿಸುವುದನ್ನು ತಡೆಯಲು ಹಾಗೂ ಈಗಿನ ಆಡಳಿತ ಸಮಿತಿಗಳನ್ನೇ ಉಸ್ತುವಾರಿ ಸಮಿತಿಗಳಾಗಿ ಮುಂದುವರೆಸಲು ಇಲ್ಲವೇ ಆಡಳಿತಾಧಿಕಾರಿಗಳನ್ನು ನೇಮಿಸಲು ಮನವಿ

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ರಾಜ್ಯದ 6021 ಗ್ರಾಮ ಪಂಚಾಯ್ತಿಗಳ ಅವಧಿ ಮುಂದಿನ ಜೂನ್ /ಜುಲೈ ತಿಂಗಳೊಳಗೆ ಮುಗಿಯಲಿದ್ದು ಸದರಿ ಪಂಚಾಯ್ತುಗಳಿಗೆ ಈ ದಿನಗಳಲ್ಲಿ ನಡೆಯ ಬೇಕಿದ್ದ ಚುನಾವಣೆಗಳನ್ನು ಕೋವಿಡ್–19 ರ ವಿರುದ್ದದ ಸಂಘಟಿತ ಹೋರಾಟದ ಕಾರಣದಿಂದಾಗಿ ನಡೆಸಲಾಗುತ್ತಿಲ್ಲವೆಂದು ಚುನಾವಣೆಗಳನ್ನು ಮುಂದೂಡಲಾಗಿದೆ. ಇದನ್ನು ಭಾರತ ಕಮ್ಯುನಿಷ್ಠ ಪಕ್ಷ (ಮಾರ್ಕ್ಸವಾದಿ) ಒಪ್ಪುತ್ತದೆ.

ಆದರೇ, ಅವಧಿ ಮುಗಿದ ನಂತರ ಮುಂದೆ ಚುನಾವಣೆ ನಡೆಯುವವರೆಗೆ ತಮ್ಮ ಸರಕಾರ ಆಡಳಿತ ಸಮಿತಿಗಳನ್ನು ನೇಮಿಸಲಿದೆಯೆಂಬುದನ್ನು ಕೇಳಿ ಆಶ್ಚರ್ಯವಾಗಿದೆ. ಇದು ಆಡಳಿತ ಪಕ್ಷದ ಸದಸ್ಯರನ್ನೇ ನೇಮಿಸಿಕೊಳ್ಳುವ ದುರುಪಯೋಗಕ್ಕೆ ಕಾರಣವಾಗುವುದಿಲ್ಲವೇ? ಆದ್ದರಿಂದ ರಾಜ್ಯ ಸರಕಾರದ ಈ ಕ್ರಮವನ್ನು ಸಿಪಿಐಎಂ ಒಪ್ಪುವುದಿಲ್ಲ. ತಕ್ಷಣವೇ ಅಂತಹ ಪ್ರಯತ್ನವನ್ನು ಕೂಡಲೇ ನಿಲ್ಲಿಸಬೇಕೆಂದು ಸಿಪಿಐಎಂ ಒತ್ತಾಯಿಸುತ್ತದೆ.

ಮುಂದಿನ ಚುನಾವಣೆಯ ವರೆಗೆ, ಆಡಳಿತವನ್ನು ಮುನ್ನಡೆಸಲು ಎರಡು ದಾರಿಗಳಿವೆ.

1) ಈಗಿರುವ ಆಡಳಿತವನ್ನೇ ಉಸ್ತುವಾರಿ ಆಡಳಿತವಾಗಿ ಮುಂದುವರೆಸುವುದು.
2) ಆಡಳಿತಾಧಿಕಾರಿಯನ್ನು ನೇಮಿಸುವುದು.


ಈ ಕ್ರಮಗಳೇ ಆಡಳಿತ ಸಮಿತಿ ನೇಮಿಸುವುದಕ್ಕಿಂತ ಉತ್ತಮವಾದವು ಗಳಾಗಿವೆ.

ಆದ್ದರಿಂದ, ಈ ಕುರಿತಂತೆ ಕ್ರಮವಹಿಸಲು ವಿನಂತಿಸುವೆವು.

ಹೇಗಿದ್ದರೂ, ಪಂಚಾಯ್ತಿಯ ಯಾವುದೇ ಅಭಿವೃದ್ಧಿ ಕಾರ್ಯಗಳು ಗ್ರಾಮ ಸಭೆಗಳು ಅದಕ್ಕೂ ಮುಂಚೆ ವಾರ್ಡ ಸಭೆಗಳ ಮೂಲಕ ನಿರ್ಧರಿಸಲ್ಪಡುತ್ತವೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಯು. ಬಸವರಾಜ,
ಕಾರ್ಯದರ್ಶಿ (18–05–2020)

20 ಲಕ್ಷ ಕೋಟಿಯನ್ನು 2 ಲಕ್ಷ ಕೋಟಿಗಿಳಿಸಿದ 5 ದಿನಗಳು



ಮೇ 12 ರಂದು ಪ್ರಧಾನ ಮಂತ್ರಿಗಳು ಮಾಡಿದ ಕೊರೊನ ಕಾಲದ ಐದನೇ ಭಾಷಣದಲ್ಲಿ ಕೊನೆಗೂ ಪರಿಹಾರ ಪ್ಯಾಕೇಜಿನ ಪ್ರಸ್ತಾಪ ಬಂತು. ಈ ಬಾರಿ ಬಹುದೊಡ್ಡ ಪ್ಯಾಕೇಜನ್ನೇ ಕೊಡುತ್ತಿರುವುದಾಗಿ ಪ್ರಧಾನ ಮಂತ್ರಿಗಳು ಸಾರಿದರು, ಎಲ್ಲ ಜನವಿಭಾಗಗಳಿಗೆ ಪರಿಹಾರ ಕೊಡುವ 20 ಲಕ್ಷ ಕೋಟಿ ರೂ.ಗಳ 'ಆತ್ಮನಿರ್ಭರ್ ಭಾರತ್' (ಸ್ವಾವಲಂಬೀ ಭಾರತ) ಬೃಹತ್ ಆರ್ಥಿಕ ಪ್ಯಾಕೇಜನ್ನು ಹಣಕಾಸು ಮಂತ್ರಿಗಳು ಪ್ರಕಟಿಸುವುದಾಗಿ ಹೇಳಿದರು. ಇದು ನಮ್ಮ ದೇಶದ ಜಿಡಿಪಿಯ 10ಶೇ.ದಷ್ಟಾಗುತ್ತದೆ ಎಂಬುದನ್ನು ಒತ್ತಿ-ಒತ್ತಿ ಹೇಳಿದರು. ನಂತರ, ಈಗಾಗಲೇ ಮೊದಲ ಲಾಕ್‌ಡೌನ್ ಆರಂಭಿಸಿದ ನಂತರ ಮಾರ್ಚ್ 27ರಂದು ಪ್ರಕಟಿಸಿದ 1.7ಲಕ್ಷ ಕೋಟಿ ರೂ.ಗಳ 'ಗರೀಬ್ ಕಲ್ಯಾಣ್' ಪ್ಯಾಕೇಜ್ ಮತ್ತು ಅದರ ಮೊದಲು ಮತ್ತು ನಂತರ ಅದುವರೆಗೆ ರಿಝರ್ವ್ ಬ್ಯಾಂಕ್ ಪ್ರಕಟಿಸಿದ ಹಣಕಾಸು ಕ್ರಮಗಳೂ ಈ 20ಲಕ್ಷ ಕೋಟಿಯಲ್ಲಿ, ಅಥವ 10ಶೇ.ಜಿಡಿಪಿಯಲ್ಲಿ ಸೇರಿವೆ ಎಂದು ಸೇರಿಸಿದರು.

ಇದರ ಮೊತ್ತ ಎಷ್ಟೆಂದು ಅವರೇನೂ ಹೇಳಿಲ್ಲ. ಆದರೆ ಆಮೇಲಷ್ಟೇ ಹಲವರ ಗಮನಕ್ಕೆ ಬಂದದ್ದು. ವಾಸ್ತವವಾಗಿ ಜನಸಾಮಾನ್ಯರಿಗೆ ಅದುವರೆಗಿನ ಈ ಕ್ರಮಗಳಿಂದ ಏನೇನೂ ಸಿಕ್ಕಿರದಿದ್ದರೂ, ಅದರ ಮೊತ್ತ ಆಗಲೇ 9.8 ಲಕ್ಷ ಕೊಟಿ ರೂ. ಆಗಿದೆ ಎಂದು ಪರಿಣಿತರು ಆಮೇಲೆ ಲೆಕ್ಕ ಹಾಕಿದ್ದಾರೆ. ಗರೀಬ್ ಕಲ್ಯಾಣ್ ಯೋಜನೆಯಲ್ಲಿ ಸುಮಾರು 80ಸಾವಿರ ಕೋಟಿರೂ.ಗಳಷ್ಟು 2020-21ರ ಬಜೆಟಿನಲ್ಲಿ ಆಗಲೇ ಇದ್ದ ಕ್ರಮಗಳು ಎಂಬುದನ್ನೂ ಇಲ್ಲಿ ಗಮನಿಸಬೇಕು.

ಮೇ 13 ರಂದು ಹಣಕಾಸು ಮಂತ್ರಿಗಳು ಪ್ರಕಟಿಸಿದ ಪರಿಹಾರಗಳ 5.94 ಲಕ್ಷ ಕೋಟಿ ರೂ.ಗಳ ಮೊದಲ ಕಂತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಮತ್ತು ಬ್ಯಾಂಕಿಂಗೇತರ ಹಣಕಾಸು ಕಂಪನಿಗಳಿಗೆ, ವಿದ್ಯುತ್ ವಿತರಣಾ ಕಂಪನಿಗಳಿಗೆ ಸಾಲಗಳ ಗ್ಯಾರಂಟಿ, ಹಣದ ಲಭ್ಯತೆಯನ್ನು ಹೆಚ್ಚಿಸುವ ಇನ್ನಷ್ಟು ಕ್ರಮಗಳನ್ನು ಕುರಿತಾದ್ದು. ಇದಲ್ಲದೆ ನೌಕರರ ಭವಿಷ್ಯ ನಿಧಿ ದೇಣಿಗೆ ಕುರಿತಂತೆ ಮಾರ್ಚ್ 27 ರ ಪ್ಯಾಕೇಜಿನಲ್ಲಿ ಇದ್ದ ಅಂಶಗಳನ್ನು ಆಗಸ್ಟ್ ವರೆಗೆ ವಿಸ್ತರಿಸಲಾಯಿತು. ಮೂಲದಲ್ಲೇ ಆದಾಯ ತೆರಿಗೆಯ ಮುರಿಕೆಯ ಪ್ರಮಾಣವನ್ನು ತಕ್ಷಣಕ್ಕೆ 10ಶೇ.ದಿಂದ 7.5ಶೇ.ಕ್ಕೆ ಇಳಿಸಿ ಉಳಿದದ್ದನ್ನು ಮುಂದೂಡಲಾಯಿತು. ಒಟ್ಟಿನಲ್ಲಿ ಜಿಡಿಪಿಯ ಸುಮಾರು 2.98ಶೇ.ದಷ್ಟಾಗುವ ಈ ಮೊತ್ತದಲ್ಲಿ ಲಾಕ್‌ಡೌನಿನೀಧ ತೀವ್ರ ಸಂಕಷ್ಟಗಳನ್ನು ಅನುಭವಿಸುತ್ತಿರುವ ವಿಭಾಗಗಳಿಗೆ ತಕ್ಷಣದ ಪರಿಹಾರ ಸುಮಾರಾಗಿ ಏನೂ ಇರಲಿಲ್ಲ. **ಸರಕಾರ ಮಾಡುವ ಹೆಚ್ಚುವರಿ ವೆಚ್ಚ ಸುಮಾರು 16,500 ಕೋಟಿರೂ. ಮಾತ್ರ. ಹೆಚ್ಚೆಂದರೆ 25,500 ಕೋಟಿ ರೂ. ಅಂದರೆ ಜಿಡಿಪಿಯ ಸುಮಾರು 0.25ಶೇ.**

ಮೇ 14ರಂದು ಪ್ರಕಟಿಸಿದ ಎರಡನೇ ಕಂತಿನ ಮೊತ್ತ 3.14ಲಕ್ಷ ಕೋಟಿ ರೂ., ಅಥವ ಜಿಡಿಪಿಯ 1.57ಶೇ. ಇದು ವಲಸೆ ಕಾರ್ಮಿಕರು, ನಗರದ ಬಡ ಕಾರ್ಮಿಕರು ಮತ್ತು ರೈತರಿಗ ಪರಿಹಾರದ ಪ್ಯಾಕೇಜ್ ಎನ್ನಲಾಯಿತು. ಆದರೆ ಇದರಲ್ಲಿ 8 ಕೊಟಿ ವಲಸೆ ಕಾರ್ಮಿಕರಿಗೆ ಎರಡು ತಿಂಗಳ ಕಾಲ ಪ್ರತಿವ್ಯಕ್ತಿಗೆ 5 ಕೆ.ಜಿ. ಧಾನ್ಯಗಳು ಮತ್ತು ಕುಟುಂಬಕ್ಕೆ 1 ಕೆ.ಜಿ. ಬೇಳೆಯನ್ನು ಕೊಡುವ ಸ್ಕೀಮ್ ಮಾತ್ರವೇ ಲಾಕ್ ಡೌನ್ ಸಮಸ್ಯೆಗಳ ದೃಷ್ಟಿಯಿಂದ ಗಮನಾರ್ಹವಾಗಿತ್ತು.

ಅಂದರೆ ನೇರವಾಗಿ ತಕ್ಷಣದ ಸಂಕಷ್ಟಗಳ ಪರಿಹಾರಕ್ಕೆ ಎನ್ನಬಹುದಾದ ಮೊತ್ತ ಕೇವಲ 5000 ಕೋಟಿ ರೂ. ಮಾತ್ರ, ಅಥವ ಹೆಚ್ಚೆಂದರೆ 14500 ಕೋಟಿ ರೂ. ಎಂದು ಹೇಳಬಹುದು ಎಂದು ಕೆಲವು ಪರಿಣಿತರು ಲೆಕ್ಕ ಹಾಕಿದ್ದಾರೆ, **ಅಂದರೆ ಹೆಚ್ಚೆಂದರೆ ಒಟ್ಟು ಜಿಡಿಪಿ ಯ 0.06ಶೇ.. ಮಾತ್ರ!**

ಮೇ 15ರ ಮೂರನೇ ಕೆಂತು ಕೃಷಿ ಮತ್ತು ಸಂಬಂಧಪಟ್ಟ ಕ್ಷೇತ್ರಗಳಿಗೆ 1.5ಲಕ್ಷ ಕೋಟಿರೂ.ಗಳ , ಅಥವ ಜಿಡಿಪಿಯ 0.75ಶೇ. ದ ಪ್ಯಾಕೇಜ್. ಇದರಲ್ಲಿ ಕೂಡ ಹತಾಶ ಸ್ಥಿತಿಯಲ್ಲಿರುವ ರೈತರು, ಮೀನುಗಾರರು ಮತ್ತಿತರರಿಗೆ ಪರಿಹಾರ ಕೊಡುವುದು ಮುಖ್ಯ ಉದ್ದೇಶವಿದಂತಿಲ್ಲ. ಮುಖ್ಯವಾಗಿ ಕೃಷಿಯ ಕಂಪನೀಕರಣದ ಉದ್ದೇಶ ಹೊಂದಿರುವ ಕ್ರಮಗಳು, ಮತ್ತು ಸಾಲಗಳನ್ನು ಕೊಡಿಸುವ ಕ್ರಮಗಳೇ ಮುಖ್ಯವಾಗಿದ್ದವು. ಆದ್ದರಿಂದ **1.5 ಲಕ್ಷ ಕೋಟಿಯಲ್ಲಿ ಸರಕಾರದ ವೆಚ್ಚ ಸೊನ್ನೆಯೇ.**

ಮೇ 16 ರ ನಾಲ್ಕನೇ ಪ್ಯಾಕೇಜ್ 8100 ಕೋಟಿ ರೂ.ಗಳದ್ದು ,ಗಾತ್ರದ ದೃಷ್ಟಿಯಿಂದ ತುಂಬಾ ಚಿಕ್ಕದು. ಆದರೆ ಸರಕಾರದ ನಿಜ ಉದ್ದೇಶದ ದೃಷ್ಟಿಯಿಂದ ಬಹುಶಃ ಬಹಳ ಮಹತ್ವದ್ದು. ಏಕೆಂದರೆ ಇದು ಕಲ್ಲಿದ್ದಲು, ಖನಿಜಗಳು, ರಕ್ಷಣಾ ಉತ್ಪಾದನೆ, ವಿಮಾನಯಾನ, ವಿಮಾನ ನಿಲ್ದಾಣಗಳು, ವಿದ್ಯುತ್ ವಿತರಣೆ, ಬಾಹ್ಯಾಕಾಶ ಮತ್ತು ಅಣುಶಕ್ತಿ ಈ ಎಲ್ಲ ಪ್ರಮುಖ ಎಂಟು ವಲಯಗಳಲ್ಲಿ 'ಅಯಕಟ್ಟಿನ ಸುಧಾರಣೆ' ಅಂದರೆ ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ಸಾರಾಸಗಟು ಮಾರಾಟದ ಕಾರ್ಯಕ್ರಮವನ್ನು 'ಸ್ವಾವಲಂಬೀ ಭಾರತ್' ಪ್ಯಾಕೇಜಿನ ಭಾಗವಾಗಿಸಿದ ಬಹುಶಃ ಬಹು ಮುಖ್ಯವಾದ ಕಂತು.

ಅದಾಣಿ, ಅನಿಲ್ ಅಂಬಾನಿ, ವೆದಾಂತ, ಕಲ್ಯಾಣಿ, ಟಾಟಾ ಪವರ್, ಜೆಎಸ್‌ಡಬ್ಲ್ಯು ಸ್ಟೀಲ್, ಜಿವಿಕೆ, ಹಿಂಡಾಲ್ಕೊ, ಜಿಎಂಆರ್ ಮುಂತಾದವರು ಮೋದಿ ಸರಕಾರದ ಈ ನಾಲ್ಕನೇ ಕಂತಿನ ಪ್ರಮುಖ 'ದೇಶೀ' ಫಲಾನುಭವಿಗಳು.

ರಕ್ಷಣಾ ಉತ್ಪಾದನಾ ವಲಯದಲ್ಲಿ ಕಂಪನೀಕರಣ, ಮದ್ದುಗುಂಡು ತಯಾರಿಕೆಯಲ್ಲಿ ಸಾರ್ವಜನಿಕ-ಖಾಸಗಿ ಭಾಗೀದಾರಿಕೆ, ಜತೆಗೆ 74ಶೇ. ಎಫ್‌ಡಿಐ ಗೆ ನೇರ ಅವಕಾಶದ ಮೂಲಕ ರಕ್ಷಣಾ ಉತ್ಪಾದನಾ ವಲಯದ ಖಾಸಗೀಕರಣದ ನಕಾಶೆಯನ್ನು ಕೊಟ್ಟಿದೆ.

ಕಲ್ಲಿದ್ದಲು ಮತ್ತು ಬಾಕ್ಸೈಟ್ ಖನಿಜ ವಲಯದಲ್ಲಿ 100% ಎಫ್‌ಡಿಐ ಮತ್ತು ರಫ್ತಿಗೂ ಮುಕ್ತ ಅವಕಾಶ ನೀಡಲಾಗಿದೆ. ಏರ್ ಇಂಡಿಯಾದ ಜತೆಗೆ ಲಾಭದಲ್ಲಿರುವ ಹಲವು ವಿಮಾನ ನಿಲ್ದಾಣಗಳನ್ನು ಖಾಸಗಿಯವರಿಗೆ ಒಪ್ಪಿಸಲಾಗುತ್ತಿದೆ.

ಎಲ್ಲರನ್ನೂ, ಖಾಸಗೀಕರಣದ ಬಗ್ಗೆ ವಿಶೇಷ ವಿರೋಧವಿಲ್ಲದವರನ್ನೂ ದಂಗು ಬಡಿಸುವ ಕ್ರಮವೆಂದರೆ ಬಾಹ್ಯಾಕಾಶ ವಲಯದಲ್ಲೂ ಖಾಸಗಿ-ಸಾರ್ವಜನಿಕ ಭಾಗೀದಾರಿಕೆಯ ಅವಕಾಶ!

ಮರುದಿನ ಮೇ 17ರಂದು ಕೂಡ ಹಣಕಾಸು ಮಂತ್ರಿಗಳು ಖಾಸಗೀಕರಣದ ಪ್ರವಚನವನ್ನು ಮುಂದುವರೆಸಿದರು, ಪ್ರತಿಯೊಂದು ವಲಯದಲ್ಲೂ ಖಾಸಗಿ ಕಂಪನಿಗಳನ್ನು ಸ್ವಾಗತಿಸುವ, ಮತ್ತು ಸಾರ್ವಜನಿಕ ವಲಯವನ್ನು ಕೆಲವು ಆಯಕಟ್ಟಿನ ವಲಯಗಳಿಗೆ ಮಾತ್ರ ಸೀಮಿತಗೊಳಿಸುವ 'ಹೊಸ' ಧೋರಣೆಯನ್ನು ಪ್ರಕಟಿಸಿದರು!

ಇದು ಈ ಪ್ಯಾಕೇಜಿನ ಕೊನೆಯ ಕಂತಾಗಿದ್ದು ಇದರಲ್ಲಿ ಒಂದು ಸ್ವಾಗತಾರ್ಹ ಕ್ರಮವೆಂದರೆ ಮನರೇಗಕ್ಕೆ 40, 000 ಕೋಟಿ ರೂ.ಗಳನ್ನು ಕೊಟ್ಟಿರುವುದು. ಆದರೆ ಈ ಹಿಂದೆ ಮನರೇಗಕ್ಕೆ ನೀಡಿದ್ದ ಮೊತ್ತಗಳಿಗೆ ಹೋಲಿಸಿದರೆ, ಸರಕಾರ ಮಾಡಿದ ಕಡಿತಗಳನ್ನು ಇದು ತುಂಬಿಸಿದೆಯಷ್ಟೇ, ಅಲ್ಲದೆ ಕಳೆದ ವರ್ಷದ ಕೂಲಿ ಬಾಕಿ 11,000 ಕೋಟಿ ರೂ.ಗಳೂ ಇದರಲ್ಲಿ ಸೇರಿವೆ. ಆದ್ದರಿಂದ ಇದರಲ್ಲೂ ಏರಿಕೆ ಎಂಬುದರಲ್ಲಿ ತೋರಿಕೆಯೇ ಹೆಚ್ಚು.

ಕೊರೊನ ಎರಗುವ ಮೊದಲೇ ದೇಶದ ಆರ್ಥಿಕ ವ್ಯವಸ್ಥೆ ಬೇಡಿಕೆಯ ಕೊರತೆಯಿಂದ ಹಿಂಜರಿತದತ್ತ ಜಾರುತ್ತಿತ್ತು. ಕೊರೊನದಿಂದಾಗಿ ಬಂದ ಲಾಕ್‌ಡೌನ್ ಜನಸಾಮಾನ್ಯರ ಆದಾಯಗಳಿಗೇ ಕತ್ತರಿ ಹಾಕಿದ್ದರಿಂದ ಬೇಡಿಕೆ ಪ್ರಪಾತಕ್ಕಿಳಿಯಿತು. ಆದ್ದರಿಂದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಬೇಡಿಕೆಯನ್ನು ಹೆಚ್ಚಿಸುವ, ಅದಕ್ಕಾಗಿ ತಕ್ಷಣದಿಂದಲೇ ಜನಗಳ ಆದಾಯಗಳನ್ನು ಹೆಚ್ಚಿಸುವ ಕ್ರಮಗಳನ್ನು ಹಾಗೂ ಮಹಾಮಾರಿಯ ವಿರುದ್ಧ ಹೋರಾಟದ ಮುಂಚೂಣಿಯಲ್ಲಿ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿರುವ ರಾಜ್ಯ ಸರಕಾರಗಳಿಗೆ ಗಮನಾರ್ಹ ನೆರವನ್ನು ನಿರೀಕ್ಷಿಸಲಾಗಿತ್ತು. ಆದರೆ ಈ ಎರಡೂ ನಿರೀಕ್ಷೆಗಳು ಸುಳ್ಳಾಗಿವೆ.

ರಾಜ್ಯಸರಕಾರಗಳು ಸಂಪನ್ಮೂಲ ಸಂಗ್ರಹಿಸಲು ಸಾಲ ಎತ್ತುವ ಮಿತಿಯನ್ನು ಆಯಾಯ ರಾಜ್ಯ ಜಿಡಿಪಿಯ 3ಶೇ.ದಿಂದ 5ಶೇ.ಕ್ಕೆ ಏರಿಸಬೇಕು ಎಂಬ ಸುಮಾರಾಗಿ ಎಲ್ಲ ರಾಜ್ಯ ಸರಕಾರಗಳ ಬೇಡಿಕೆಯನ್ನು ಕೊನೆಗೂ ಒಪ್ಪಿಕೊಂಡಂತೆ ಕಂಡರೂ ವಾಸ್ತವವಾಗಿ ಈ ಏರಿಕೆ 3.5ಶೇ. ದ ವರೆಗೆ ಮಾತ್ರ. ಏಕೆಂದರೆ ಇಷ್ಟರ ವರೆಗೆ ಮಾತ್ರವೇ ಸಾಲಗಳನ್ನು ಎತ್ತಲು ಯಾವುದೇ ಶರತ್ತಿಲ್ಲದೆ ಕೇಂದ್ರ ಸರಕಾರ ಅನುಮತಿ ಕೊಡುತ್ತದೆ. ಅದಕ್ಕಿಂತ ಹೆಚ್ಚು ಬೇಕಾದರೆ ಅದು ವಿಧಿಸುವ ಶರತ್ತುಗಳನ್ನು ಒಪ್ಪಬೇಕು. ಈ ಶರತ್ತುಗಳೂ ಖಾಸಗಿಯವರ ಹಿತಗಳನ್ನೇ ಈಡೇರಿಸುವಂತದ್ದು ಎಂದು ಬೇರೆ ಹೇಳಬೇಕಾಗಿಲ್ಲ.

ಇದರೊಂದಿಗೆ ಮೇ 12 ರಂದು ಪ್ರಧಾನ ಮಂತ್ರಿಗಳು ಸಾರಿದ 20 ಲಕ್ಷ ಕೋಟಿ ರೂ.ಗಳ ಆತ್ಮ ನಿರ್ಭರ್ ಭಾರತ್' ಪ್ಯಾಕೇಜಿನ ಪ್ರಕಟಣೆಗಳು ಕೊನೆಗೊಂಡವು

ಇದರ ಒಟ್ಟು ಮೊತ್ತ ರೂ. 20,97 ಲಕ್ಷ ಕೋಟಿ. ಇದು ನಮ್ಮ ದೇಶ ದ ಜಿಡಿಪಿಯ 9.8%. . ಆದರೆ ಇದು ನಿಜವೇ?

ಐದು ದಿನಗಳ ಕಾಲ ಹಣಕಾಸು ಮಂತ್ರಿಗಳ ಪ್ರಕಟಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸುಮಾರಾಗಿ ಎಲ್ಲರೂ ಕೇಳಿರುವ ಪ್ರಶ್ನೆ. ಅಲ್ಲ ಎಂಬುದು ಬಹಳಷ್ಟು ಪರಿಣಿತರ ಉತ್ತರ.

ಜಗತ್ತಿನಲ್ಲೆಲ್ಲ ಪರಿಹಾರ ಪ್ಯಾಕೇಜ್‌ದ ಮೊತ್ತ ಅಂದರೆ ಸರಕಾರ ನಿಜವಾಗಿಯೂ ತನ್ನ ಮತ್ತು ದೇಶದ ಸಮ್ಮುಖ ಇರುವ ಬಿಕ್ಕಟ್ಟಿನಿಂದ ಪಾರಾಗಲು ಮಾಡುವ ಹೆಚ್ಚುವರಿ ವೆಚ್ಚ. ಆದರೆ ಇಲ್ಲಿ ದೇಶದ ಕೇಂದ್ರೀಯ ಬ್ಯಾಂಕ್ ಕೈಗೊಳ್ಳುವ ಕ್ರಮಗಳ ಮೊತ್ತ, ಇತರ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳ ಮೂಲಕ ವಿತರಣೆಯಾಗ ಬೇಕೆಂದಿರುವ ಸಾಲಗಳ ಮೊತ್ತ ಮಾತ್ರವಲ್ಲ, ವ್ಯಕ್ತಿಗಳಿಗೆ ತೆರಿಗೆ ಪಾವತಿಯನ್ನು ಭಾಗಶಃ ಮುಂದೂಡಿದ್ದರೆ, ಆ ಮೊತ್ತವೂ ಸರಕಾರದ ಉತ್ತೇಜನೆಯ ಮೊತ್ತಕ್ಕೆ ಸೇರಿಕೊಂಡಿದೆ; ಸರಕಾರ ಹಿಂದಿರುಗಿಸಬೇಕಾಗಿದ ಮೊತ್ತವನ್ನು ಹಿಂದಿರುಗಿಸದೇ ಬಾಕಿಯಿಟ್ಟುಕೊಂಡಿದ್ದರೆ, ಈಗ ಈ ಪ್ಯಾಕೇಜಿನ ಭಾಗವಾಗಿ ಅದನ್ನು ಹಿಂದಿರುಗಿಸುತ್ತಿದ್ದರೆ, ಅದೂ 20ಲಕ್ಷ ಕೋಟಿಗೆ ಸೇರುತ್ತದೆ! ಈಗಾಗಲೇ ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಹೊಸ ಪೊಟ್ಟಣದಲ್ಲಿ ಸುತ್ತಿ ಕೊಟ್ಟರೆ ಅದೂ ಸೇರುತ್ತದೆ! ಅಲ್ಲದೆ ಕೇಂದ್ರ ಸರಕಾರಕ್ಕೆ ಸೇರಿರದ ಖನಿಜ ನಿಧಿ, ಕಟ್ಟಡ ಕಾರ್ಮಿಕರ ನಿಧಿ ಮತ್ತು ಅರಣ್ಯೀಕರಣ ನಿಧಿಯಿಂದ ಬಳಸುವ ಮೊತ್ತವನ್ನೂ ಈ 20.97 ಲಕ್ಷ ಕೋಟಿಯಲ್ಲಿ ಸೇರಿಸಲಾಗಿದೆ.

ವಾಸ್ತವವಾಗಿ, ಸರಕಾರ ಮಾಡುವ ನಿಜ ವೆಚ್ಚದ ದೃಷ್ಟಿಯಿಂದ ಪ್ಯಾಕೇಜಿನ ನಿಜ ಮೊತ್ತ ಹಚ್ಚೆಂದರೆ ಸುಮಾರು 2,02,400 ಕೋಟಿ ರೂ.ಮಾತ್ರ, ಅಂದರೆ ಪ್ರಧಾನ ಮಂತ್ರಿಗಳು ಸಾರಿದ ಮೊತ್ತದ 10ಶೇ., ದೇಶದ ಒಟ್ಟು ಜಿಡಿಪಿಯ 1ಶೇ.ದಷ್ಟು ಮಾತ್ರ!

ಈ ಐದು ದಿನಗಳ ಕಾಲ ಹಣಕಾಸು ಮಂತ್ರಿಗಳ ಮಾತುಗಳನ್ನು ಕೇಳುತ್ತಿದ್ದವರಿಗೆ ಈ ಸಮಸ್ತ ಪ್ಯಾಕೇಜನ್ನು ಲಾಕ್‌ಡೌನಿನಿಂದ ಅತಿ ಹೆಚ್ಚು ಸಂಕಷ್ಟಗಳಿಗ ಒಳಗಾದ ದುಡಿಮೆಗಾರರಿಗೆ, ಬಡಜನರಿಗೆ ಪರಿಹಾರಗಳನ್ನು ನೀಡುವ ಉದ್ದೇಶದಿಂದ ರೂಪಿಸಲಾಗಿತ್ತೇ ಎಂಬ ಪ್ರಶ್ನೆ ಸಹಜವಾಗಿ ಮೊದಲ ದಿನದಿಂದಲೇ ಎದ್ದಿತ್ತು. ನಾಲ್ಕನೇ ದಿನ ಈ ಬಗ್ಗೆ ಸಂದೇಹವೇ ಉಳಿಯಲಿಲ್ಲ. ಐದನೇ ದಿನ ಇದನ್ನು ಮತ್ತಷ್ಟು ದೃಢಗೊಳಿಸಿತು.

ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಹೇಳಿದಂತೆ, ಇದು ಪ್ರಧಾನ ಮಂತ್ರಿಗಳ ಮೇ12 ರ ಭಾಷಣದ ನಾಲ್ಕು 'ಪದಪುಂಜಗಳಲ್ಲಿ(ಲ್ಯಾಂಡ್, ಲೇಬರ್, ಲಾಸ್, ಲಿಕ್ವಿಡಿಟಿ- ಅಂದರ ಭೂಮಿ, ಶ್ರಮ, ಕಾನೂನುಗಳು ಮತ್ತು ಹಣದ ಹರಿದಾಟ) ಅಡಕವಾಗಿತ್ತು. ಬಿಜೆಪಿ ನೇತೃತ್ವದ ಸರಕಾರಕ್ಕೆ ಕೊವಿಡ್ ಮಹಾಮಾರಿ ಸೃಷ್ಟಿಸಿದ ಪರಿಸ್ಥಿತಿ ಶ್ರೀಮಂತ- ಬಂಟ ಬಂಡವಾಳಶಾಹಿ ಪರ ಅಜೆಂಡಾವನ್ನು ಮುಂದೊತ್ತುವ ಅತ್ಯುತ್ತಮ ಅವಕಾಶವಾಗಿ ಕಂಡಿದೆ.

ಆದ್ದರಿಂದಲೇ ಹಣಕಾಸು ಮಂತ್ರಿಗಳು ಕೊವಿಡ್ ಕಾಲದ ಪ್ಯಾಕೇಜಿನ ಹೆಸರಲ್ಲಿ ದೇಶಿ-ವಿದೇಶಿ ಕಾರ್ಪೊರೇಟ್ ಕುಳಗಳಿಗೆ ಬಕ್ಷಿಸುಗಳನ್ನು ಪ್ರಕಟಿಸುವ ದಿನ ಹೇಗಾದರೂ ತಮ್ಮೂರುಗಳಿಗ ಮರಳಬೇಕೆಂದಿದ್ದ 26 ವಲಸೆ ಕಾರ್ಮಿಕರ ದಾರುಣ ಸಾವಿನ ಬಗ್ಗೆ ಚಕಾರವೆತ್ತಲಿಲ್ಲ.

ಹಾಗೆ ನೋಡಿದರೆ ಪ್ರಧಾನ ಮಂತ್ರಿಗಳು ಈ ಮೊದಲು ಪ್ರಕಟಿಸಿದ್ದ ಗರೀಬ್ ಕಲ್ಯಾಣ್ ಯೋಜನೆಯನ್ನು ಇದರಲ್ಲಿ ವಿಲೀನಗೊಳಿಸಿದರೂ, ಇದನ್ನು ಕಲ್ಯಾಣ ಯೋಜನೆಯೆಂದಾಗಲೀ, ಪರಿಹಾರ ಪ್ಯಾಕೇಜ್ ಎಂದಾಗಲೀ, ಉತ್ತೇಜನಾ ಪ್ಯಾಕೇಜ್ ಎಂದೂ ಕೂಡ ಹೆಸರಿಸಲಿಲ್ಲ. 'ಆತ್ಮ ನಿರ್ಭರ್ ಭಾರತ್ ಅಭಿಯಾನ್; ಅಂದರು. ನಾಲ್ಕನೇ ದಿನ ಭಾರತದ ಸ್ವಾವಲಂಬನೆಯ ಪ್ರತೀಕಗಳಾಗಿರುವ ಸಾರ್ವಜನಿಕ ವಲಯದ ವ್ಯಾಪಕ ಖಾಸಗೀಕರಣ, ರಕ್ಷಣಾ ಉತ್ಪಾದನೆಯಲ್ಲೂ 74ಶೇ. ಎಫ್‌ಡಿಐಗೆ ಅವಕಾಶ ಮತ್ತು ಬಾಹ್ಯಾಕಾಶ ವಲಯದಲ್ಲೂ 'ಪಿಪಿಪಿ' ಊದಿರುವುದು ನೋಡಿದರೆ, 'ಆತ್ಮನಿರ್ಭರ್' ಅಂದರೆ ಸ್ವಾವಲಂಬನೆ ಭಾರತೀಯರು ಕಳೆದ 70 ವರ್ಷಗಳಲ್ಲಿ ತಿಳಿದಿದ್ದ ಸ್ವಾವಲಂಬನೆ ಅಲ್ಲ ಎಂಬುದೂ ಸ್ಪಷ್ಟವಾಗಿದೆ.

ಉಳಿದಿರುವ ಒಂದೇ ಅರ್ಥ ಎಂದರೆ ಸರಕಾರ ಯಾವುದೇ ಯೋಜನೆಯಿಲ್ಲದೆ ಹಾಕಿದ ಲಾಕ್‌ಡೌನಿನಿಂದಾಗಿರುವ ಸಂಕಟಗಳನ್ನು ನಿವಾರಿಸಿಕೊಳ್ಳಲು ಜನಸಾಮಾನ್ಯರು ಸರಕಾರವನ್ನು ಅವಲಂಬಿಸಬಾರದು! ಕಳೆದ 50 ದಿನಗಳಲ್ಲಿ ಸರಕಾರದ ವರ್ತನೆಯನ್ನು ಬಹುಶಃ ಈ ಬೆಳಕಿನಲ್ಲಿ ಮಾತ್ರವೇ ಅರ್ಥಮಾಡಿಕೊಳ್ಳಬಹುದು.

ಆದರೆ ಕೊರೊನ ವೈರಸ್ ಎತ್ತಿ ತೋರಿದ ಸಾರ್ವಜನಿಕ ಆರೋಗ್ಯದ ಬಿಕ್ಕಟ್ಟು ಹಲವಾರು ದೇಶಗಳಲ್ಲಿ ಉದಾರೀಕರಣ-ಜಾಗತೀಕರಣದ ಬಗ್ಗೆ ಪುನರಾಲೋಚನೆ ನಡೆಸುವಂತೆ ಮಾಡುತ್ತಿದೆ, ಅರ್ಥವ್ಯವಸ್ಥೆಯಲ್ಲಿ ಪ್ರಭುತ್ವದ, ಸರಕಾರದ ಪಾತ್ರ ಹೆಚ್ಚಬೇಕು ಎಂಬ ಮಾತುಗಳು ಹೆಚ್ಚೆಚ್ಚು ಕೇಳಬರುತ್ತಿದೆ. ಆದರೆ ಭಾರತದಲ್ಲಿ ಮೋದಿ ಸರಕಾರ ಹಣಕಾಸು ಬಂಡವಾಳವನ್ನು ಖುಶಿಪಡಿಸುವ ದಿವಾಳಿಕೋರ ದಾರಿಯಲ್ಲೇ ಮುಂದುವರೆಯುತ್ತಿದೆ.

ದಿನಾಂಕ	ಒಟ್ಟು ಮೊತ್ತ	ಬಜೆಟಿನಲ್ಲಿದ್ದದ್ದು (**.ಕೋಟಿ ರೂ.**)	ಹೆಚ್ಚುವರಿ
ಮೇ 12ರ ಮೊದಲು			
ವಿತ್ತೀಯ ಪರಿಹಾರ	1,92, 800	1,05,000	80,000
ರಿಝರ್ವ್ ಬ್ಯಾಂಕ್ ಕ್ರಮಗಳು	8,01,603	-	-
ಮೇ 13	5,94,550	-	16,800
ಮೇ 14	3,10,000	500	9,500
ಮೇ 15	1,50,000	-	48,000
ಮೇ 16	8,100	-	-
ಮೇ 17	40,000	-	40,000
ಒಟ್ಟು	**20,97,053**	**1,05,500**	**2,02,400**

ಆರೋಗ್ಯಕ್ಕೆ ಆದ್ಯತೆ ಇನ್ನೂ ಇಲ್ಲ

20,00,000 ಕೋಟಿ ರೂ.ಗಳಲ್ಲಿ ಕೇವಲ 15,000 ಕೋಟಿ ರೂ.

ಪ್ರಧಾನ ಮಂತ್ರಿಗಳ 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಒಂದು ವಂಚನೆಯ ಕಸರತ್ತು ಎಂದು ಸಾಬೀತಾಗಿದೆ. ಸರಕಾರಕ್ಕೆ ಈ ಪ್ಯಾಕೇಜಿನಿಂದ ಆಗುವ ಹೆಚ್ಚುವರಿ ವೆಚ್ಚ ಕೇವಲ ಜಿಡಿಪಿಯ 1 ಶೇ., ಪ್ರಧಾನಿಗಳು ಆಶ್ವಾಸನೆ ನೀಡಿದಂತೆ 10ಶೇ.ಅಲ್ಲ. ಅಲ್ಲದೆ ಈ ಪ್ಯಾಕೇಜಿನಲ್ಲಿ ಆರೋಗ್ಯಕ್ಕೆ ಕೊಟ್ಟಿರುವ ಹಣದ ಮೊತ್ತ ಕೇವಲ ರೂ. 15,000 ಕೋಟಿ. ಇದು ಈ ಮೊದಲೇ ಪ್ರಕಟಿಸಿದ 1.7ಲಕ್ಷ ಕೋಟಿ ರೂ. ಪ್ಯಾಕೇಜಿನ ಭಾಗವಾಗಿತ್ತು. ಹಣಕಾಸು ಮಂತ್ರಿ ಈ ಪ್ಯಾಕೇಜಿನ ಐದನೇ ಮತ್ತು ಅಂತಿಮ ಕಂತಿನಲ್ಲಿ ಇನ್ನಷ್ಟು ಆಶ್ವಾಸನೆಗಳನ್ನು ಕೊಟ್ಟರು, ಆದರೆ ಅವಕ್ಕೆ ನಿಧಿ ಒದಗಿಸುವ ಮೂರ್ತ ಬದ್ಧತೆಗಳೇನೂ ಇಲ್ಲ. ಒಂದು ವಿಸ್ತೃತ ಮತ್ತು ದಕ್ಷ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹೊಂದುವುದು ಅಗತ್ಯ ಎಂಬ ಪಾಟವನ್ನು ಬಿಜೆಪಿ ಆಳರಸರು ಈ ಮಹಾಮಾರಿಯಿಂದ ಕಲಿತಿಲ್ಲ. ಬಿಜೆಪಿ ಸರಕಾರ ಆರೋಗ್ಯದ ಖಾಸಗೀಕರಣದ ದಿಕ್ಕಿನಲ್ಲೇ ಮುಂದುವರೆಯುತ್ತಿದೆ.



ಪ್ರಕಾಶ ಕಾರಟ್

ಕೊವಿಡ್–19 ಮಹಾಮಾರಿ ಭಾರತದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಎಷ್ಟೊಂದು ಅಸಮರ್ಪಕವಾಗಿದೆ, ಎಂತಹ ಘೋರ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂಬುದನ್ನು ಬೆಳಕಿಗೆ ತಂದಿದೆ. 50 ದಿನಗಳ ಲಾಕ್‌ಡೌನ್ ನಂತರವೂ ಮೋದಿ ಸರಕಾರ ಮಾರಕ ವೈರಸನ್ನು ನಿಭಾಯಿಸುವ ಅನುಭವದಿಂದಲೂ ಪಾಟ ಕಲಿತಂತಿಲ್ಲ. ಒಂದಾದ ಮೇಲೆ ಒಂದರಂತೆ ಹಲವು ರಾಜ್ಯಗಳಲ್ಲಿ ಸರಕಾರೀ ಆಸ್ಪತ್ರೆಗಳು ರೋಗಿಗಳ ಸಂಖ್ಯೆ ಮತ್ತು ಶುಶ್ರೂಷೆಯ ಸೌಕರ್ಯಗಳ ಅಭಾವದಿಂದ ಕಂಗಾಲಾಗಿವೆ. ಈ ಮಹಾಮಾರಿ ವಿಪರೀತವಾಗಿ ಬಾಧಿಸಿರುವ ಮುಂಬೈಯ ಸರಕಾರೀ ಆಸ್ಪತ್ರೆಗಳ ಪರಿಸ್ಥಿತಿ ಇದಕ್ಕೊಂದು ಕಟು ಉದಾಹರಣೆ.



ಮೋದಿ ಸರಕಾರ ವಾಸ್ತವವಾಗಿ ಇರುವ ಅವಸ್ಥೆಯಿಂದ ಮುಖ ತಿರುವಿ ಆತ್ಮತೃಪ್ತಿಯನ್ನು ಪ್ರದರ್ಶಿಸುತ್ತಿದೆ. ತಪಾಸಣೆಯ ಪ್ರಮಾಣ ಈಗಲೂ ಅಗತ್ಯಕ್ಕಿಂತ ಬಹಳ ಕಡಿಮೆಯಿದೆ., ಸಾವಿರದಲ್ಲಿ 1.8 ಮಾತ್ರ. ಶಂಕಿತ ಪ್ರಕರಣಗಳ ಸಂಪರ್ಕಗಳನ್ನು ವ್ಯಾಪಕವಾಗಿ ಪತ್ತೆ ಹಚ್ಚುವ, ಅವರನ್ನು ಪ್ರತ್ಯೇಕವಾಸದಲ್ಲಿಡುವ ಕೆಲಸ ಹಲವೆಡೆಗಳಲ್ಲಿ ವ್ಯವಸ್ಥಿತ ರೀತಿಯಲ್ಲಿ ಆಗುತ್ತಿಲ್ಲ. ಕೇರಳ ಮಾತ್ರವೇ ಇದಕ್ಕೆ ಒಂದು ಗಮನಾರ್ಹ ಅಪವಾದ. ಲಾಕ್‌ಡೌನನ್ನು ದೀರ್ಘಕಾಲ ವಿಸ್ತರಿಸಿದ ನಂತರವೂ ರೋಗ ಎಷ್ಟು ಹರಡಿದೆ, ಭೌಗೋಳಿಕವಾಗಿ ಎಲ್ಲೆಲ್ಲಿ ತೀವ್ರವಾಗಿದೆ ಎಂಬುದರ ಒಂದು ಸ್ಪಷ್ಟ ಚಿತ್ರ ಇನ್ನೂ ಸಿಕ್ಕಿಲ್ಲ. ಇನ್ನು ಸಾವುಗಳ ಬಗ್ಗೆ ಹೇಳುವುದಾದರೆ, ವಾಸ್ತವ ಸಂಖ್ಯೆ ವರದಿಯಾಗಿರುವುದಕ್ಕಿಂತ ಹೆಚ್ಚಿರುವಂತೆ ಕಾಣುತ್ತದೆ. ಸದ್ಯ ಇದು ಒಂದು ಲಕ್ಷದಲ್ಲಿ 0.2. ಇದಕ್ಕೆ ಸಾವುಗಳ ವರದಿಯಲ್ಲಿನ ದುರ್ಬಲ ಮತ್ತು ತಪ್ಪು ವ್ಯವಸ್ಥೆಗಳಷ್ಟೇ ಕಾರಣವಲ್ಲ, ಕೆಲವು ಸಂದರ್ಭಗಳಲ್ಲಿ, ಪಶ್ಚಿಮ ಬಂಗಾಲ ಮುಂತಾದೆಡೆಗಳಲ್ಲಿ, ಧೋರಣೆಯ ನಿರ್ಧಾರದಿಂದಲೂ ಆಗಿದೆ.

ಕೊವಿಡ್ ಬಿಕ್ಕಟ್ಟು ಖಾಸಗಿ ಆರೋಗ್ಯ ವಲಯದ ಶೋಚನೀಯ ವಿಫಲತೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಅಭಾವವನ್ನು ಬೆಳಕಿಗೆ ತಂದಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಖಾಸಗಿ ಆಸ್ಪತ್ರೆಗಳು, ಕೆಲವು ಅಪವಾದಗಳನ್ನು ಬಿಟ್ಟರೆ, ಸನ್ನಿವೇಶಕ್ಕೆ ಸರಿಯಾಗಿ ಸ್ಪಂದಿಸಿಲ್ಲ., ಕಾಯಿಲೆಯನ್ನು ನಿಭಾಯಿಸಲು ತಮ್ಮ ಸಂಪನ್ಮೂಲಗಳನ್ನು ಬಳಸಲಿಲ್ಲ. ಇದು ಈ ರೋಗದ ವಿರುದ್ಧ ಹೋರಾಟದಲ್ಲಿ ಬಹಳಷ್ಟು ಪರಿಣಾಮ ಉಂಟು ಮಾಡಿದೆ. ಏಕೆಂದರೆ ಒಟ್ಟು ಆಸ್ಪತ್ರೆಗಳಲ್ಲಿ 93ಶೇ. ಖಾಸಗಿ ಆಸ್ಪತ್ರೆಗಳು ಮತ್ತು ಆಸ್ಪತ್ರೆ ಹಾಸಿಗೆಗಳಲ್ಲಿ 64ಶೇ. ಖಾಸಗಿಯವು.

ಇಂತಹ ಒಂದು ಪರಿಸ್ಥಿತಿ ಎದುರಾಗಿರುವಾಗ, ಕೇಂದ್ರ ಸರಕಾರ ಸಾರ್ಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ವಿಸ್ತರಿಸಲು ತುರ್ತು ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ನಿರೀಕ್ಷೆ ಸಹಜ. ಇದಕ್ಕೆ ಆರೋಗ್ಯದ ಬಾಬ್ತು ಸಾರ್ವಜನಿಕ ವೆಚ್ಚವನ್ನು ತಕ್ಷಣವೇ ಮತ್ತು ಗಮನಾರ್ಹ ಪ್ರಮಾಣದಲ್ಲಿ ಸಮರೋಪಾದಿಯಲ್ಲಿ ಹೆಚ್ಚಿಸಬೇಕಾಗಿತ್ತು. ಆದರೆ ಅಂತದ್ದೇನೂ ಅಗಿಲ್ಲ.

ಪ್ರಧಾನ ಮಂತ್ರಿಗಳು ಪ್ರಕಟಿಸುವುದಾಗಿ ಹೇಳಿದ 20 ಲಕ್ಷ ಕೋಟಿ ರೂ.ಗಳ ಪ್ಯಾಕೇಜ್ ಒಂದು ವಂಚನೆಯ ಕಸರತ್ತು ಎಂದು ಸಾಬೀತಾಗಿದೆ. ಸರಕಾರಕ್ಕೆ ಈ ಪ್ಯಾಕೇಜಿನಿಂದ ಆಗುವ ಹೆಚ್ಚುವರಿ ವೆಚ್ಚ ಕೇವಲ ಜಿಡಿಪಿಯ 1ಶೇ., ಪ್ರಧಾನಿಗಳು ಆಶ್ವಾಸನೆ ನೀಡಿದಂತೆ 10ಶೇ.ಅಲ್ಲ. ಅಲ್ಲದೆ ಈ ಪ್ಯಾಕೇಜಿನಲ್ಲಿ ಆರೋಗ್ಯಕ್ಕೆ ಕೊಟ್ಟಿರುವ ಹಣದ ಮೊತ್ತ ಕೇವಲ ರೂ. 15,000 ಕೋಟಿ. ಇದು ಈ ಮೊದಲೇ ಎಪ್ರಿಲ್‌ನಲ್ಲಿ ಪ್ರಕಟಿಸಿದ 1.7ಲಕ್ಷ ಕೋಟಿ ರೂ. ಪ್ಯಾಕೇಜಿನ ಭಾಗವಾಗಿತ್ತು.

ಕೇಂದ್ರ ಸಂಪುಟ ಎಪ್ರಿಲ್22ರಂದು ಕೊವಿಡ್–19ಕ್ಕೆ ಸ್ಪಂದನೆ ಮತ್ತು ಆರೋಗ್ಯ ತಯಾರಿಗೆಂದು ರೂ.15,000 ಕೋಟಿ ರೂ.ಗಳ ಹೂಡಿಕೆ ಪ್ಯಾಕೇಜನ್ನು ಮಂಜೂರು ಮಾಡಿತು. ಇದನ್ನು ಮೂರು ಘಟ್ಟಗಳಲ್ಲಿ ಬಳಸಲು ಅದು ನಿರ್ಧರಿಸಿತು. ರೂ.7774 ಕೋಟಿ ರೂ. ತಕ್ಷಣದ ಬಳಕೆಗೆ ಮತ್ತು ಉಳಿದದ್ದು 1 ವರ್ಷದಿಂದ 4 ವರ್ಷಗಳ ವರೆಗಿನ ಮಧ್ಯಮಾವಧಿಗೆ. ಮೊದಲ ಘಟ್ಟದಲ್ಲಿ ಎಲ್ಲ ರಾಜ್ಯ ಸರಕಾರಗಳು ಪಡೆಯುವ ಹೆಚ್ಚುವರಿ ನಿಧಿಗಳು 3000 ಕೋಟಿ ರೂ. ಮಾತ್ರ. ಇದನ್ನು 28 ರಾಜ್ಯಗಳು ಮತ್ತು ಎಂಟು ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿದಾಗ ಪ್ರತಿ ರಾಜ್ಯಕ್ಕೆ ಸಿಗುವ ಪಾಲು ಅತ್ಯಲ್ಪ. ಆರೋಗ್ಯ ರಾಜ್ಯಪಟ್ಟಿಯಲ್ಲಿರುವ ವಿಷಯ ಮತ್ತು ಈ ಮಹಾಮಾರಿಯನ್ನು ಎದುರಿಸುವ ವೆಚ್ಚಗಳ ಹೊರೆಯನ್ನು ಹೊರಬೇಕಾಗಿರುವುದು ರಾಜ್ಯ ಸರಕಾರಗಳೇ. ಆದರೆ ಈ ಜುಜುಬಿ ಮೊತ್ತದಿಂದ ಅವಕ್ಕೇನೂ ನೆರವು ಸಿಗದು.

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಈ ಪ್ಯಾಕೇಜಿನ ಐದನೇ ಮತ್ತು ಅಂತಿಮ ಕಂತಿನಲ್ಲಿ ಇನ್ನಷ್ಟು ಆಶ್ವಾಸನೆಗಳನ್ನು ಕೊಟ್ಟರು, ಆದರೆ ಅವಕ್ಕೆ ನಿಧಿ ಒದಗಿಸುವ ಮೂರ್ತ ಬದ್ಧತೆಗಳೇನೂ ಇಲ್ಲ. ಸಾರ್ವಜನಿಕ ಆರೋಗ್ಯದ ಮೇಲೆ ವೆಚ್ಚವನ್ನು ಹೆಚ್ಚಿಸಲಾಗುವುದು ಎಂದರು; ಗ್ರಾಮೀಣ ಮತ್ತು ನಗರ ಈ ಎರಡೂ ಮಟ್ಟಗಳಲ್ಲಿ ಬುಡಮಟ್ಟದಲ್ಲಿ ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರಗಳಿಗೆ ಹೂಡಿಕೆಗಳನ್ನು ಹೆಚ್ಚಿಸಲಾಗುವುದು ಎಂದರು; ಎಲ್ಲ ಜಿಲ್ಲೆಗಳು ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಬ್ಲಾಕುಗಳನ್ನು ಹೊಂದಿರುತ್ತವೆ(ಇದಕ್ಕೆ ಸಮಯ ಚೌಕಟ್ಟೇನೂ ಇಲ್ಲ) ಮತ್ತು ಬ್ಲಾಕ್ ಮಟ್ಟದಲ್ಲಿ ಸಾರ್ವಜನಿಕ ಆರೋಗ್ಯ ಪರೀಕ್ಷಣಾಲಯಗಳು ಇರುತ್ತವೆ ಎಂದರು.

ಒಂದು ವಿಸ್ತೃತ ಮತ್ತು ದಕ್ಷ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹೊಂದುವುದು ಅಗತ್ಯ ಎಂಬ ಪಾಟವನ್ನು ಬಿಜೆಪಿ ಆಳರಸರು ಈ ಮಹಾಮಾರಿಯಿಂದ ಕಲಿತಿಲ್ಲ. ಬಿಜೆಪಿ ಸರಕಾರ ಆರೋಗ್ಯದ ಖಾಸಗೀಕರಣದ ದಿಕ್ಕಿನಲ್ಲೇ ಮುಂದುವರೆಯುತ್ತಿದೆ. ಮೋದಿ ಸರಕಾರ ಸಾರ್ವಜನಿಕ ವೆಚ್ಚವನ್ನು ಹೇಗೆ ಹೆಚ್ಚಿಸಬೇಕೆಂದಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಮೋದಿ ಸರಕಾರ 2017ರಲ್ಲಿ ಪ್ರಕಟಿಸಿದ ರಾಷ್ಟ್ರೀಯ ಆರೋಗ್ಯ ಧೋರಣೆ ಸಾರ್ವಜನಿಕ ಆರೋಗ್ಯದ ಮೇಲಿನ ವೆಚ್ಚವನ್ನು ಈಗಿರುವ ಜಿಡಿಪಿಯ 1.15ಶೇ.ದಿಂದ 2025ರ ವೇಳೆಗೆ 2.5 ಶೇ.ಕ್ಕೆ ಏರಿಸುವುದಾಗಿ ಸೂಚನೆ ಇಟ್ಟಿತ್ತು. ಜಿಲ್ಲಾ ಆಸ್ಪತ್ರೆಗಳನ್ನು ವಿಸ್ತರಿಸುವಲ್ಲಿ ಖಾಸಗಿ–ಸಾರ್ವಜನಿಕ ಭಾಗೀದಾರಿಕೆಯ ಮಾತಾಡಿತ್ತು. ಆದ್ದರಿಂದ ಈಗ ಆಶ್ವಾಸನೆ ನೀಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಸಾಂಕ್ರಾಮಿಕ ರೋಗಗಳ ವಿಭಾಗ ಎಂದಾದರೂ ಸಾಕಾರಗೊಂಡರೆ, ಅದು ಖಾಸಗೀಕೃತ ಮಾದರಿಯಲ್ಲೇ ಇರಬಹುದೇನೋ.

ಕೊವಿಡ್–19ಕ್ಕೆ ಸ್ಪಂದನೆ ಅಸ್ತವ್ಯಸ್ತಗೊಳ್ಳಲಿಕ್ಕೆ, ಮತ್ತು ಸಾಂಕ್ರಾಕ ರೋಗ ತಜ್ಞರು ಮತ್ತು ಆರೋಗ್ಯ ಪರಿಣಿತರ ಸಲಹೆಗಳಂತೆ ನಡೆಯದಿರುವುದಕ್ಕೆ ಮೋದಿ ಸರಕಾರವೇ ಹೊಣೆ. ಮಹಾಮಾರಿ ಹತೋಟಿಯಲ್ಲಿದೆ, ಬೇರೆ ಹಲವು ದೇಶಗಳಿಗೆ ಹೋಲಿಸಿದರೆ ಭಾರತ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ವಿಚಾರವನ್ನು ಅದು ಸತತತವಾಗಿ ಹರಡಿಸಲು ಪ್ರತ್ನಿಸುತ್ತಿದೆ. ಸೋಂಕಿನ ದರ ತೀವ್ರ ಪ್ರಮಾಣದಲ್ಲಿ ಏರುತ್ತಲೇ ಇದೆ, ಲಾಕ್‌ಡೌನ್ ಮುಗಿದಾಗ ಒಮ್ಮೆಲೆ ಹೆಚ್ಚಾಗಬಹುದಾದ ಪ್ರಕರಣಗಳನ್ನು ಎದುರಿಸಲು ನಾವು ಸಿದ್ಧತೆಯನ್ನೇ ಮಾಡಿಕೊಂಡಿಲ್ಲ. ಆರಂಭದಲ್ಲಿ, ಮಾರ್ಚ್ 25ರಂದು ಈ ಮಹಾಭಾರತವನ್ನು 21 ದಿನಗಳಲ್ಲಿ ಗೆಲ್ಲಲಾಗುವುದು, ಇದರಲ್ಲಿ ತಾನೇ ವಿಜಯಶಾಲಿ ಎಂದು ಎಷ್ಟು ಬೇಗನೇ ತೋರಿಸಿಕೊಳ್ಳಬಹುದು ಎಂಬುದಷ್ಟೇ ಅದರ ಕಾಳಜಿ.

ಆದ್ದರಿಂದ, ಒಂದು ವಿಸ್ತರಿತ ಹಾಗೂ ಚೈತನ್ಯ ತುಂಬಿದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಪ್ರಶ್ನೆ, ಒಂದು ಪರ್ಯಾಯ ಅಜೆಂಡಾದಲ್ಲಿ ಉನ್ನತ ಆದ್ಯತೆಯನ್ನು ಹೊಂದಿರಬೇಕು. ಇಂತಹ ಒಂದು ಆರೋಗ್ಯ ವ್ಯವಸ್ಥೆಗಾಗಿ ಹೋರಾಡುವುದು, ಭಾರತದ ಜನತೆಯ ಯೋಗಕ್ಷೇಮಕ್ಕೆ ಸಂಬಂಧಪಟ್ಟ ಒಂದು ರಾಜಕೀಯ ಪ್ರಶ್ನೆಯಾಗಿದೆ.

ಮೋದಿ ಕೊವಿಡ್ ಮದ್ದು: ಕಾಯಿಲೆಯನ್ನೂ ಗುಣಪಡಿಸದ, ಜನಗಳ ಸಮಸ್ಯೆಗಳನ್ನೂ ಪರಿಹರಿಸದ ಪಥ್ಯ–ಯೆಚುರಿ

5 ದಿನಗಳು ಪ್ರತಿದಿನ ಒಂದು–ಒಂದೂವರೆ ಗಂಟೆಗಳ ಕಾಲ ಮಾತಾಡುತ್ತ ಹಣಕಾಸು ಮಂತ್ರಿಗಳು ಪ್ರಕಟಿಸಿರುವ "ಆತ್ಮ ನಿರ್ಭರತಾ ಭಾರತ್" ಪ್ಯಾಕೇಜ್ ಪ್ರಧಾನ ಮಂತ್ರಿಗಳು ಆಡಂಬರದಿಮದ ಪ್ರಕಟಿಸಿದ 20 ಲಕ್ಷ ಕೋಟಿ ಉತ್ತೇಜನಾ ಪ್ಯಾಕೇಜಿನ ವಿವರಗಳನ್ನು ಕೊಟ್ಟಿದೆ. ಇದು ಲಾಕ್ ಡೌನ್ ಜನಗಳಿಗೆ ಉಂಟು ಮಾಡಿರುವ ಸಂಕಟಗಳನ್ನೂ ಪರಿಹರಿಸುವುದಿಲ್ಲ, ಸ್ವಾವಲಂಬನೆಯನ್ನೂ ಸಾಧಿಸುವುದಿಲ್ಲ, ಆರ್ಥಿಕ ಪುನರುಜ್ಜೀವನಕ್ಕೂ ನೆರವಾಗುವುದಿಲ್ಲ. ವಾಸ್ತವಾಗಿ ದಾಸ್ಯ ಮನೋಭಾವವನ್ನು ಪ್ರದರ್ಶಿಸಿರುವ ಈ ಪ್ಯಾಕೇಜನ್ನು ಮೋದಿ ಕೊವಿಡ್ ಮದ್ದು ಎಂದು ಪ್ರದರ್ಶಿಸಲಾಗುತ್ತಿದೆ. ಆದರೆ ಇದು ಕಾಯಿಲೆಯನ್ನೂ ಗುಣಪಡಿಸುವುದಿಲ್ಲ, ಜನಗಳಿಗೆ ಪರಿಹಾರಗಳನ್ನೂ ನೀಡುವುದಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ಇದು ವ್ಯಾಪಕ ಖಾಸಗೀಕರಣದ, ಮೂಲಕ ಶ್ರೀಮಂತರನ್ನು ಹೆಚ್ಚು ಶ್ರೀಮಂತರಾಗಿಸುವ, ಬಡವರನ್ನು ಮತ್ತಷ್ಟು ದಾರಿದ್ರ್ಯಕ್ಕೆ ತಳ್ಳುವ ಪಥ್ಯ ಎಂದು ಅವರು ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ,

ಮೋದಿ ಮತ್ತು ಬಿಜೆಪಿ ಕೇಂದ್ರ ಸರಕಾರ ಕೊವಿಡ್–19 ಮಹಾಮಾರಿಯನ್ನು ಮತ್ತು ರಾಷ್ಟ್ರೀಯ ಲಾಕ್‌ಡೌನನ್ನು ತನ್ನ ಹಿಂದುತ್ವ ಅಜೆಂಡಾ ಮತ್ತು ಅದರೊಂದಿಗೇ ನವ–ಉದಾರವಾದಿ ಆರ್ಥಿಕ ಸುಧಾರಣೆಗಳನ್ನು ಆಕ್ರಮಣಕಾರೀ ರೀತಿಯಲ್ಲಿ ಅನುಸರಿಸುವುದಕ್ಕೇ ಬಳಸುತ್ತಿದೆ. ರಾಷ್ಟ್ರೀಯ ಲಾಕ್‌ಡೌನಿನ ಅವಧಿಯನ್ನು ಮಹಾಮಾರಿ ವಿರುದ್ಧ ಸಮರದ ಹೆಸರಲ್ಲಿ ಆರೆಸ್ಸೆಸ್/ಬಿಜೆಪಿ ಮೊದಲನೆಯದಾಗಿ, ಕೋಮುಧ್ರುವೀಕರಣವನ್ನು ಮತ್ತಷ್ಟು ತೀಕ್ಷ್ಣಗೊಳಿಸಲು, ಎರಡನೆಯದಾಗಿ, ಸಿಎಎ/ಎನ್ಆರ್‌ಸಿ/ಎನ್‌ಪಿಆರ್–ವಿರೋಧಿ ಪ್ರತಿಭಟನಾಕಾರರನ್ನು ಗುರುತಿಸಿ ಬಂಧಿಸಲು, ಮೂರನೆಯದಾಗಿ, ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿರುವವರ ನಾಗರಿಕ ಹಕ್ಕುಗಳು ಹಾಗೊಟ್ಟಾರೆಯಾಗಿ ದುಡಿಯುವ ಜನಗಳ ಹಕ್ಕುಗಳ ಮೇಲೆ ದಾಳಿ ಮಾಡಲು ಮತ್ತು ನಾಲ್ಕನೆಯದಾಗಿ, ಒಕ್ಕೂಟತತ್ವವನ್ನುಮೂಲೆಗುಂಪು ಮಾಡಿ ಅಧಿಕಾರದ ವಿಪರೀತ ಕೇಂದ್ರೀಕರಣಕ್ಕೆ ಬಳಸುತ್ತಿವೆ.

ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸುತ್ತ ಈ ಪ್ಯಾಕೇಜ್, ಸ್ವಾವಲಂಬನೆಯ ಬದಲು ಪರಾವಲಂಬನೆಯನ್ನೇ ಹೆಚ್ಚಿಸುವಂತದ್ದು, ಆದ್ದರಿಂದ ಇದು ಮೋದಿ ಸರಕಾರದ ಇನ್ನೊಂದು ಜುಮ್ಲಾ, ಅಂದರೆ ಟೊಳ್ಳು ಘೋಷಣೆ ಎಂದು ಬಣ್ಣಿಸಿದರು.

20 ಲಕ್ಷ ಕೋಟಿ ರೂ.ಗಳ ಪ್ಯಾಕೇಜಿನಲ್ಲಿ ಇರುವುದು 2ಲಕ್ಷ ಕೋಟಿ ರೂ.ಗಳ, ಅಂದರೆ ಜಿಡಿಪಿಯ 1ಶೇ.ಕ್ಕಿಂತಲೂ ಕಡಿಮೆ ಪರಿಹಾರವಷ್ಟೇ ಇದೆ. ಉಳಿದವೆಲ್ಲ ಈಗಾಗಲೇ ಸುಸ್ತಿ ಸಾಲಗಳಿಂದ



ನರಳುತ್ತಿರುವ ಬ್ಯಾಂಕುಗಳು ತಮ್ಮ ಶೇವಣಿಗಳಿಂದ ಕೊಡಬೇಕಾದ ಸಾಲಗಳು ಅಥವ ಈಗಾಗಲೇ ಬಜೆಟಿನಲ್ಲಿ ಪ್ರಕಟಿಸಿರುವ ಕ್ರಮಗಳು ಮತ್ತು ಮೊದಲೇ ಪ್ರಕಟಿಸಿರುವ ಕಾರ್ಯಕ್ರಮಗಳು, ಇವೆಲ್ಲವನ್ನೂ ಹೊಸ ಪೊಟ್ಟಣಗಳಲ್ಲಿ ಕಟ್ಟಿ ಕೊಡಲಾಗಿದೆಯಷ್ಟೇ.

ಇವು ಲಾಕ್‌ಡೌನಿನಿಂದ ಉಂಟಾದ ಜನಗಳ ತಕ್ಷಣದ ಸಮಸ್ಯೆಗಳನ್ನು ಪರಿಹರಿಸಲು ಏನೇನೂ ಸಾಲುವುದಿಲ್ಲ. ಸಿಪಿಐ(ಎಂ) ಇದನ್ನು ವಿರೋಧಿಸುತ್ತದೆ, ಇತರ ಪಕ್ಷಗಳೂ ಈ ವಿರೊಧದಲ್ಲಿ ಸೇರಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತದೆ ಎಂದು ಯೆಚುರಿ ತಿಳಿಸಿದರು.

ಈ ಪ್ಯಾಕೇಜಿನಲ್ಲಿ ದೇಶದ ಆರೋಗ್ಯ ವ್ಯವಸ್ಥೆಯನ್ನು ಉತ್ತಮ ಪಡಿಸುವ ಒಂದೇ ಒಂದು ಕ್ರಮದ ಪ್ರಸ್ತಾಪವೂ ಇಲ್ಲ ಎಂಬ ಸಂಗತಿಯತ್ತ ಯೆಚುರಿ ಗಮನ ಸೆಳೆದರು. 2020–21ರ ಬಜೆಟಿನಲ್ಲಿ 30.48 ಲಕ್ಷ ಕೋಟಿ ರೂ.ಗಳ ವೆಚ್ಚವನ್ನು ಪ್ರಸ್ತಾವಿಸಲಾಗಿತ್ತು.

ಪುಟ 14 ಕ್ಕೆ



ನಿಯಂತ್ರಣ-ಮುಕ್ತ ಲೂಟಿಗಾಗಿ
‘ಎಪಿಎಂಸಿ ತಿದ್ದುಪಡಿ ಕಾಯ್ದೆ-2020’

ಯು. ಬಸವರಾಜ

ಕರ್ನಾಟಕ ರಾಜ್ಯ ಸರಕಾರ ಮೇ 15, 2020 ರಂದು, “ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ-1966”ಕ್ಕೆ ಸುಗ್ರೀವಾಜ್ಞೆಯನ್ನು ಹೊರಡಿಸುವ ಮೂಲಕ ತಿದ್ದುಪಡಿ ಮಾಡಿದೆ. ಅದನ್ನು “ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ಕಾಯ್ದೆ-2020” ಎಂದು ಕರೆದಿದೆ. ಈ ತಿದ್ದುಪಡಿಯನ್ನು ಕೇಂದ್ರ ಸರಕಾರದ ಕೋರಿಕೆ ಅಥವಾ ಒತ್ತಾಯದ ಮೇರೆಗೆ, ಅದರ ಪೂರ್ವಾಪರ ಯೋಚಿಸದೇ ಪೂರ್ವಾಗ್ರಹ ಪೀಡಿತರಾಗಿ ತರಲಾಗಿದೆ. ರಾಜ್ಯದ ರೈತರ ಹಾಗೂ ಪ್ರಗತಿಪರರ ವಿರೋಧದ ನಡುವೆ ಏಕಾಏಕಿಯಾಗಿ ಮಂತ್ರಿಮಂಡಲದಲ್ಲಿ ನಿರ್ಧರಿಸುವ ಮೂಲಕ ಕೈಗೊಳ್ಳಲಾಗಿದೆ. ಇದು ರೈತರು ಮತ್ತು ವ್ಯವಸಾಯವನ್ನು ಸರ್ವನಾಶ ಮಾಡಲಿದೆ ಎಂದು ರಾಜ್ಯದ ಬಹುತೇಕ ರೈತ ಸಂಘಗಳು ಟೀಕಿಸಿವೆ.

ಕೃಷಿ ಮಾರುಕಟ್ಟೆಯಲ್ಲಿ ಕಾರ್ಯ ನಿರ್ವಹಿಸುವ ದಲ್ಲಾಲರು, ವರ್ತಕರು, ಕಾರ್ಮಿಕರು, ಹಮಾಲರು ಮತ್ತು ನೌಕರರು, ಈ ತಿದ್ದುಪಡಿಯು ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಗಳ ವ್ಯವಸ್ಥೆಯನ್ನು ಮತ್ತು ತಮ್ಮ ಉದ್ಯೋಗಗಳನ್ನು ಕಳೆಯಲಿದೆಯೆಂದು ಭೀತಿ ಪಟ್ಟಿದ್ದಾರೆ. ಈ ಎಲ್ಲರೂ ಸದರಿ ತಿದ್ದುಪಡಿ ಕಾಯ್ದೆಯನ್ನು ವಾಪಾಸು ಪಡೆಯಬೇಕೆಂದು ಪ್ರತಿಭಟನೆಗಳನ್ನು ನಡೆಸುವ ಮೂಲಕ ಸರಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ.

ವಿರೋಧ ಪಕ್ಷದ ನಾಯಕರಾದ ಸಿದ್ಧರಾಮಯ್ಯನವರು ಮತ್ತು ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ.ದೇವೇಗೌಡರು ಸದರಿ ತಿದ್ದುಪಡಿ ಕಾಯ್ದೆ ಬೇಡವೆಂದಿದ್ದಾರೆ. ಇವುಗಳಿಗೆ ವ್ಯತಿರಿಕ್ತವಾಗಿ, ಮುಖ್ಯಮಂತ್ರಿ ಯಡೆಯೂರಪ್ಪನವರು ಈ ತಿದ್ದುಪಡಿ ಕಾಯ್ದೆಯು ರೈತರಿಗೆ ವರದಾನವಾಗಲಿದೆ ಎಂದಿದ್ದಾರೆ. ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಶಕ್ತಿಗಳು ಈ ಅನಿಯಂತ್ರಿತ ಮುಕ್ತ ಮಾರುಕಟ್ಟೆಯನ್ನು ಮತ್ತಷ್ಟು ವ್ಯಾಪಕವಾಗಿ ಪ್ರವೇಶಿಸುವ ಮೂಲಕ, ಕೃಷಿ ಉತ್ಪನ್ನಗಳನ್ನು ಕೊಂಡುಕೊಳ್ಳುವ ವ್ಯಾಪಾರಿಗಳ ನಡುವೆ ಸ್ಪರ್ಧೆ ಹೆಚ್ಚಿ, ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಏರಿಕೆಯಾಗಿ ರೈತರಿಗೆ ಲಾಭವಾಗಲಿದೆ ಎಂಬ ತರ್ಕವನ್ನು ಮುಂದಿಡುತ್ತಾರೆ. ಅಷ್ಟಕ್ಕೂ ವರ್ತಕರು, ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಪ್ರಾಂಗಣಗಳಾಚೆ, ಸ್ಥಳೀಯವಾಗಿಯೇ ನೇರವಾಗಿ ರೈತರಿಂದ ಖರೀದಿಸಲು ಈ ಹಿಂದಿನ ಸರಕಾರಗಳು ಅವಕಾಶ ನೀಡಿವೆ. ನಾವು ಇನ್ನಷ್ಟು ಅವಕಾಶ ಕಲ್ಪಿಸುವ ಕ್ರಮ ಕೈಗೊಂಡಿದ್ದೇವೆ. ನಾವೇನು ಹೊಸದಾಗಿ ಇದನ್ನು ರೂಪಿಸಿಲ್ಲವೆಂದು, ಅದರಲ್ಲಿ ತಮ್ಮದೇನು ತಪ್ಪಿಲ್ಲವೆಂದು ಸಮರ್ಥಿಸಿಕೊಂಡಿದ್ದಾರೆ!

ಇವೆಲ್ಲವೂ ರೈತರ ಹಾಗೂ ರಾಜ್ಯದ ನಾಗರೀಕರ ನಡುವೆ ಯಾವುದು ಸರಿ, ಯಾವುದು ತಪ್ಪು ಎಂಬ ಕುರಿತು ಗೊಂದಲವನ್ನುಂಟು ಮಾಡಿದೆ. ಒಟ್ಟಾರೆಯಾಗಿ, ಇದು ರಾಜ್ಯದ ಗಮನ ಸೆಳೆದ ಪ್ರಮುಖ ಚರ್ಚೆಯ ವಿಚಾರವಾಗಿದೆ.

ಕಾಯ್ದೆಯ ತಿದ್ದುಪಡಿಯ ಅಂಶವೇನು? ಅದರ ಪರಿಣಾಮಗಳೇನು?:

ಕರ್ನಾಟಕ ಕೃಷಿ ಉತ್ಪನ್ನಗಳ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿ ನಿಯಮ 1966 ರ ಪ್ರಕರಣ 8 ಕ್ಕೆ ಈಗ ತಿದ್ದುಪಡಿಯನ್ನು ತರಲಾಗಿದೆ. ಅದರ 2 ನೇ ಉಪ-ಪ್ರಕರಣಕ್ಕೆ ಈ ರೀತಿಯಲ್ಲಿ ಸೇರ್ಪಡೆ ಮಾಡಲಾಗಿದೆ.

"2. ಮಾರುಕಟ್ಟೆ ಸಮಿತಿಯು ಮಾರುಕಟ್ಟೆ ಪ್ರಾಂಗಣಗಳಲ್ಲಿ ಮತ್ತು ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಹಾಗೂ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟವನ್ನು ನಿಯಂತ್ರಿಸತಕ್ಕದ್ದು " ಎಂದಿದೆ.

ಅಂದರೇ, ಇದು ಬಹಳ ಸ್ಪಷ್ಟವಾಗಿ ಮಾರುಕಟ್ಟೆ ಪ್ರಾಂಗಣಗಳ ಹೊರಗೆ ನಡೆಯುತ್ತಿದ್ದ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯವಹಾರದ ಮೇಲೆ ಇದ್ದ ನಿಯಂತ್ರಣವನ್ನು ಈ ಮೂಲಕ ತಗೆದು ಹಾಕಿದೆ. ಇದು ಮಾರುಕಟ್ಟೆ ಪ್ರಾಂಗಣದ ಆಚೆ ನಡೆಯುವ ವ್ಯವಹಾರಕ್ಕೂ ಮತ್ತು ಮಾರುಕಟ್ಟೆ ಸಮಿತಿಗೂ ಇದ್ದ ಸಂಬಂಧಗಳನ್ನು ಕಳಚಿ ಹಾಕಿ, ಮಾರುಕಟ್ಟೆ ಪ್ರಾಂಗಣದಾಚೆಗಿನ ವ್ಯವಹಾರಕ್ಕೆ ಮುಕ್ತ ಅವಕಾಶವನ್ನು ಮಾಡಿ ಕೊಟ್ಟಂತಾಗಿದೆ.

> **ವ್ಯವಸಾಯದಲ್ಲಿ ತೊಡಗಿದವರೆಲ್ಲಾ ತಮ್ಮ ವ್ಯವಸಾಯದ ಹಾಗೂ ಕುಟುಂಬದ ಬದುಕಿನ ವೆಚ್ಚಕ್ಕಾಗಿ, ಬಹುತೇಕ ಭೂಮಾಲಕ ಬಂಡವಾಳದಾರರನ್ನೇ ಅವಲಂಬಿಸಿದ್ದಾರೆ. ಅವರಿಲ್ಲದೆ ಇವರಿಗೆ ಬಹುತೇಕ ಜೀವನವಿಲ್ಲವೆಂಬಂತಾಗಿದೆ. ಈ ಪರಾವಲಂಬಿತನವು ಅವರ ಕೃಷಿ ಉತ್ಪನ್ನಗಳನ್ನು ಅವರು ಸ್ವತಂತ್ರವಾಗಿ ತಮಗೆ ಬೇಕಾದಲ್ಲಿ ಮಾರಾಟ ಮಾಡಿಕೊಳ್ಳಲು ಅವಕಾಶ ನೀಡುತ್ತಿಲ್ಲ. ರೈತರ ಈ ದಯನೀಯ ಸ್ಥಿತಿಯು, ಅವರ ಕೃಷಿ ಉತ್ಪನ್ನಗಳನ್ನು ಗ್ರಾಮೀಣ ಶ್ರೀಮಂತರ ಕಾಲ ಬುಡಕ್ಕೆ ತಳ್ಳಿವೆ. ರೈತರ ಇಂತಹ ಸ್ಥಿತಿಯು ಮುಖ್ಯಮಂತ್ರಿಗಳು ಹೇಳುವ ಎಂತಹ ಸ್ಪರ್ಧೆಯನ್ನು ಬಳಸಿಕೊಂಡೀತು!**

ಮಾರುಕಟ್ಟೆ ಪ್ರಾಂಗಣದಾಚೆಯ ವ್ಯವಹಾರದಿಂದಾಗಿ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗೆ ಬರುತ್ತಿದ್ದ ಆದಾಯವು ಸಂಪೂರ್ಣ ನಿಂತು ಹೋಗುವ ಅಪಾಯ ಬಂದಿದೆ. ಎಪಿಎಂಸಿಯು ಮುಖ್ಯವಾಗಿ ಮೂರು ರೀತಿಯಲ್ಲಿ ಆದಾಯವನ್ನು ಪಡೆಯುತ್ತಿತ್ತು. ಒಂದನೆಯದಾಗಿ, ವ್ಯವಹಾರ ನಡೆಸಲು ಮಾರುಕಟ್ಟೆ ಸಮಿತಿಯ ಅನುಮತಿಯ ಲೈಸೆನ್ಸ್ ಗಳಿಂದ ಮತ್ತು ಎರಡನೆಯದಾಗಿ, ಮಾರುಕಟ್ಟೆ ಸಮಿತಿಯು, ವ್ಯವಹಾರದಿಂದಾಗಿ, ವರ್ತಕರಿಂದ ಪಡೆಯುತ್ತಿದ್ದ ಕಮಿಷನ್ ಹಣ.

ಈ ಎರಡೂ ಆದಾಯದ ಮೂಲಗಳನ್ನು ಇನ್ನು ಮುಂದೆ ಅದು ಕಳೆದುಕೊಳ್ಳಲಿದೆ.

ಅದೇ ರೀತಿ, ಮಾರುಕಟ್ಟೆಯ ಪ್ರಾಂಗಣದಾಚೆಯೇ ವ್ಯವಹಾರ ವ್ಯಾಪಕವಾಗಿ ಯಾವುದೇ ರೀತಿಯ ಪರವಾನಿಗಿ ಇಲ್ಲದೇ ನಡೆಯುವಾಗ ಮತ್ತು ಹೊರಗಿನ ವ್ಯವಹಾರಕ್ಕೆ ಕಮಿಷನ್ ನೀಡುವ ಅಗತ್ಯವಿಲ್ಲದಿರುವಾಗ, ಬಹುತೇಕ ದೊಡ್ಡ ವರ್ತಕರು, ಎಪಿಎಂಸಿಗಳ ವರ್ತಕರು ನೇರವಾಗಿ ಸ್ಥಳೀಯ ಮಧ್ಯವರ್ತಿಗಳ ಮೂಲಕ ವ್ಯವಹಾರಕ್ಕೆ ಮುಂದಾಗುತ್ತಾರೆ. ಇದು ಈಗಾಗಲೇ ರಾಜ್ಯದಾದ್ಯಂತ ಅನಧಿಕೃತವಾಗಿ, ಕಾನೂನು ಬಾಹಿರವಾಗಿ ನಡೆಯುತ್ತಿದೆ. ಈಗ ಇದನ್ನು ಈ ತಿದ್ದುಪಡಿಯ ಮೂಲಕ ಕಾಯ್ದೆ ಸಮ್ಮತಗೊಳಿಸಲಾಗಿದೆ. ಈ ಮೂಲಕ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿದ್ದ ವ್ಯವಹಾರವು ತಕ್ಷಣದಿಂದಲೇ ಕಡಿತಗೊಳ್ಳುತ್ತಾ ನಿಧಾನವಾಗಿ, ಮುಂದೆ ಕೆಲ ದಿನಗಳಲ್ಲಿ ಬಹುತೇಕ ನಿಂತು ಹೋಗಲಿದೆ. ಇದರಿಂದಾಗಿಯೂ ಮಾರುಕಟ್ಟೆ ಪ್ರಾಂಗಣದಲ್ಲಿನ ವ್ಯವಹಾರದಿಂದ ಮಾರುಕಟ್ಟೆ ಸಮಿತಿಗಳು ಪಡೆದುಕೊಳ್ಳುತ್ತಿದ್ದ ಆದಾಯಕ್ಕೂ ಚ್ಯುತಿ ಬರಲಿದೆ. ಮುಂದೆ, ಈ ಮುಕ್ತ ವ್ಯವಹಾರವು ಮಾರುಕಟ್ಟೆ ಪ್ರಾಂಗಣಗಳನ್ನು ನಿರುಪಯುಕ್ತಗೊಳಿಸುತ್ತದೆ. ನಂತರ ರಾಜ್ಯದ ಎಲ್ಲಾ 177 ಮಾರುಕಟ್ಟೆ ಪ್ರಾಂಗಣಗಳು, ನೂರಾರು ಉಪ ಮಾರುಕಟ್ಟೆ ಪ್ರಾಂಗಣಗಳು, ಉಪ ಪ್ರಾಂಗಣಗಳ ಲಕ್ಷಾಂತರ ಎಕರೆ ಜಮೀನು ಮತ್ತು ಉಗ್ರಾಣ ಮತ್ತಿತರೇ ಕಟ್ಟಡಗಳು ನಿಧಾನವಾಗಿ ದೊಡ್ಡ ವರ್ತಕರು ಕಾರ್ಪೋರೇಟ್ ಕೈಗಳಿಗೆ ವರ್ಗಾವಣೆಯಾಗಲಿವೆ.

ಈ ಎಲ್ಲಾ ಬೆಳವಣಿಗೆಗಳು ಮಾರುಕಟ್ಟೆಯ ಪ್ರಾಂಗಣದಲ್ಲಿ ದುಡಿಯುತ್ತಿರುವ ಲಕ್ಷಾಂತರ ಹಮಾಲರು, ಕಾರ್ಮಿಕರು ಹಾಗೂ ಕಮಿಷನ್ ಏಜೆಂಟರು, ಸಣ್ಣ ವ್ಯಾಪಾರಿಗಳು ಮತ್ತು ನೌಕರರು ಮತ್ತು ಇವರನ್ನು ಆಧರಿಸಿದ್ದ ಪ್ರಾಂಗಣಗಳ ಇತರೆ ಸಣ್ಣ ವ್ಯಾಪಾರಿಗಳ ಮಿಲಿಯಾಂತರ ಕುಟುಂಬಗಳು ತಮ್ಮ ಉದ್ಯೋಗಗಳನ್ನು ಕಳೆದುಕೊಂಡು ಬೀದಿಗೆ ಬೀಳುವಂತೆ ಮಾಡುತ್ತವೆ.




ಆದರೇ, ಮುಂದೆ ಪೆಡಂಭೂತವಾಗಿ ಕಾಡಲಿರುವ ಈ ಅವಾಂತರಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ದುರುದ್ದೇಶದಿಂದಲೇ ಜನರಿಂದ ಮರೆ ಮಾಚಿದಂತೆ ಕಾಣುತ್ತಿದೆ ಮತ್ತು ರೈತರ ಕೃಷಿ ಉತ್ಪನ್ನಗಳಿಗೆ ಮುಕ್ತ ಸ್ಪರ್ಧೆಯಿಂದಾಗಿ ಉತ್ತಮ ಬೆಲೆಗಳು ದೊರೆತು ಅವರ ಆದಾಯ ಹೆಚ್ಚಾಗಲಿದೆ ಎಂಬುದು ಕೂಡಾ ಸುಳ್ಳಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ.

ಯಾಕೆಂದರೇ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಕಾರಣದಿಂದ ರೈತಾಪಿ ಜನ ಅಥವಾ ವ್ಯವಸಾಯ ಈಗಾಗಲೇ ನೆಲ ಕಚ್ಚಿದೆ. ವ್ಯವಸಾಯದಲ್ಲಿ ತೊಡಗಿದ ರೈತರಿಗೆ, ಕೂಲಿಕಾರರಿಗೆ ಅಥವಾ ಗೇಣಿ/ಗುತ್ತಿಗೆ ಬೇಸಾಯದಲ್ಲಿ ತೊಡಗಿರುವ ಬಹುತೇಕರಿಗೆ, ಸಾರ್ವಜನಿಕ ರಂಗದ ಸಾಲ ದೊರೆಯದಾಗಿದೆ. ಹೂಡಿಕೆಗಳ ಕೃಷಿ ಲಾಗುವಾಡುಗಳ ಬೆಲೆಗಳು ಸಹಾಯಧನಗಳ ಕಡಿತದಿಂದಾಗಿ ಗಗನಮುಖಿಯಾಗಿವೆ, ಮಾತ್ರವಲ್ಲಾ, ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆಯೆಂಬುದು

ಪುಟ 10 ಕ್ಕೆ

ಕೊವಿಡ್–19 : ಬರಿಯ ಪ್ರಾಕೃತಿಕ ಆಕಸ್ಮಿಕವೇ? ಅಥವಾ ಬಂಡವಾಳಶಾಹಿಯ ಕೂಸೆ?



ಕೊವಿದ್–19 ಹೇಗೆ ಹುಟ್ಟಿತು? ಏಕೆ ಇಷ್ಟು ವೇಗವಾಗಿ ಹರಡುತ್ತಿದೆ? ಇದು ಒಂದು ಬಾರಿಯ ಆಕಸ್ಮಿಕ ಪ್ರಾಕೃತಿಕ ವಿದ್ಯಮಾನ ಮಾತ್ರವೇ? ಕಳೆದ ಎರಡು ದಶಕಗಳಲ್ಲಿ 15ಕ್ಕೂ ಹೆಚ್ಚು ಇಂತಹ ವೈರಾಣು ಸಾಂಕ್ರಾಮಿಕಗಳು ಬಂದಿದ್ದು, ಇದರಲ್ಲಿ ಆಯಾ ದೇಶಗಳ ಮತ್ತು ಜಾಗತಿಕ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ಪಾತ್ರವಿದೆಯೇ? ಇಂತಹ ಸಾಂಕ್ರಾಮಿಕಗಳನ್ನು ಎದುರಿಸಲು ತಡೆಗಟ್ಟಲು ನಮ್ಮ ಇಂದಿನ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ಚೌಕಟ್ಟಿನೊಳಗೆ ಸಾಧ್ಯವೇ? ಇಂತಹ ಮಹಾಪಿಡುಗುಗಳು ಮುಂದಿನ ದಿನಗಳಲ್ಲಿ 'ಸಾಮಾನ್ಯ'ವಾಗಲಿವೆಯೇ? ಈಗಿನ ಹಾಗೂ ಮುಂದಿನ ಇಂತಹ ಮಹಾಪಿಡುಗುಗಳ ವಿರುದ್ಧ ಹೋರಾಡಲು ಮತ್ತು ಅವುಗಳನ್ನು ತಡೆಯಲು ಅಗತ್ಯವಾಗಿರುವ ಈ ಪ್ರಶ್ನೆಗಳಿಗೆ ಸ್ಥೂಲ ಉತ್ತರಗಳನ್ನಾದರೂ ಹುಡುಕುವುದು ಈ ಬರಹದ ಗುರಿ.

– ಟಿ.ಎಲ್. ಕೃಷ್ಣೆಗೌಡ

ಕರೋನ ವೈರಾಣುವಿನ 2019 ರ ಅವತಾರ ಕೊವಿಡ್ ಸಾಂಕ್ರಾಮಿಕ ರೋಗ ಜಾಗತಿಕ ಮಹಾಪಿಡುಗಾಗಿ ಮಾರ್ಪಟ್ಟಿದೆ. 2019 ಡಿಸೆಂಬರ್ ತಿಂಗಳಲ್ಲಿ ಚೀನಾದ ವುಹಾನ್‌ನಲ್ಲಿ ಕಾಣಿಸಿಕೊಂಡು ಈಗ ಜಗತ್ತಿನ ಬಹುತೇಕ ರಾಷ್ಟ್ರಗಳನ್ನು ಆವರಿಸಿದೆ. ಮಾರ್ಚ್ 12 ರಂದು ವಿಶ್ವ ಆರೋಗ್ಯ ಸಂಸ್ಥೆ (WHO) ಕೊವಿಡ್–19ನ್ನು ಜಾಗತಿಕ ಮಹಾಪಿಡುಗು ಎಂದು ಅಧಿಕೃತವಾಗಿ ಘೋಷಣೆ ಮಾಡಿದೆ.

ಡಿಸೆಂಬರ್ ಕೊನೆಯಲ್ಲಿ ಆರಂಭವಾದ ಈ ಮಹಾಪಿಡುಗು ಅತ್ಯಂತ ವೇಗವಾಗಿ (ಕೇವಲ 2 ತಿಂಗಳುಗಳಲ್ಲಿ) ಜಗತ್ತಿನ ಎಲ್ಲಾ ದೇಶಗಳಿಗೆ ಹಬ್ಬಿತ್ತು. ಐದು ತಿಂಗಳುಗಳಲ್ಲಿ (ಮೇ 3ನೇ ವಾರದ ಹೊತ್ತಿಗೆ) ಇಡೀ ಜಗತ್ತಿನಲ್ಲಿ ಸೋಂಕು ತಗಲಿದವರ ಸಂಖ್ಯೆ 50 ಲಕ್ಷ ದಾಟಿದೆ. ಸೋಂಕಿನಿಂದ ಸಾವಿಗೀಡಾದವರ ಸಂಖ್ಯೆ 3.3 ಲಕ್ಷ ದಾಟಿದೆ. 5–10 ಕೋಟಿ ಜನರನ್ನು ಬಲಿ ತೆಗೆದುಕೊಂಡ 1918ರ ಸ್ಪಾನಿಷ್ ಫ್ಲೂ ನಂತರ ಇದು ಅತ್ಯಂತ ಮಾರಕ ಮಹಾಪಿಡುಗಾಗಿದೆ ಮತ್ತು ಅತ್ಯಂತ ವೇಗದಿಂದ ಹರಡಿದೆ. ಜಾಗತಿಕವಾಗಿ ಸೋಂಕು ತಗಲಿದವರಲ್ಲಿ ಉತ್ತರ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಅಭಿವೃದ್ಧ ದೇಶಗಳ ಪ್ರಮಾಣ ಶೇ.50ಕ್ಕಿಂತಲೂ ಹೆಚ್ಚು. ಜಾಗತಿಕವಾಗಿ ಸೋಂಕಿನಿಂದ ಸಾವಿಗೀಡಾದವರಲ್ಲೂ ಅತ್ಯಂತ ಆಧುನಿಕ ಸುಸಜ್ಜಿತ ವೈದ್ಯಕೀಯ ವ್ಯವಸ್ಥೆ ಹೊಂದಿರುವ ಈ ಅಭಿವೃದ್ಧ ದೇಶಗಳ ಪ್ರಮಾಣ ಮೂರನೇ ಎರಡು ಭಾಗದಷ್ಟು (ಶೇ. 66.6). ಒಟ್ಟು ಸೋಂಕಿತರಲ್ಲೂ ಸತ್ತವರಲ್ಲೂ ಉತ್ತರ ಅಮೆರಿಕದ ಪಾಲು ಶೇ. 30ಕ್ಕಿಂತಲೂ ಹೆಚ್ಚು, ಎಂಬುದು ದಂಗು ಬಡಿಸುವ ವಿಚಾರ. ಈಗ ರಶ್ಯಾ, ಬ್ರೆಜಿಲ್ ಗಳಲ್ಲಿ ವ್ಯಾಪಕವಾಗಿ ಹರಡುತ್ತಿದ್ದು, ಸೋಂಕಿತರ ಸಂಖ್ಯೆಯಲ್ಲಿ ಅವು 2ನೆಯ ಮತ್ತು 3ನೆಯ ಸ್ಥಾನಕ್ಕೆ ಬಂದಿವೆ.


WHO ವರದಿಯ ಪ್ರಕಾರ ಮುಂದಿನ ಮೂರರಿಂದ ಆರು ತಿಂಗಳಲ್ಲಿ ಆಫ್ರಿಕಾದ ಹತ್ತು ದಶಲಕ್ಷ ಜನರಿಗೆ ಸೋಂಕು ಹರಡುವ ಸಾಧ್ಯತೆಗಳಿದ್ದು ಮೂರು ಲಕ್ಷ ಜನರು ಸಾವಿಗೀಡಾಗುವ ಆತಂಕವಿದೆ. ಈಗಾಗಲೇ ಕಷ್ಟ ಕೋಟಲೆಗಳಲ್ಲಿರುವ ಆಫ್ರಿಕಾದ 29 ಜನರು ಕೊವಿಡ್–19 ರ ಕಾರಣದಿಂದ ತೀವ್ರ ಬಡತನದ ಬೆಂಕಿಗೆ ಬೀಳಲಿದ್ದಾರೆ. ಶೇಕಡ 36 ಜನರಿಗೆ ಮನೆಗಳಲ್ಲಿ ಶುಚಿಗೊಳ್ಳುವ ಅವಕಾಶವೇ ಇಲ್ಲದ ಆಫ್ರಿಕನ್ ಜನತೆಯನ್ನು ಈ ರೋಗ ಇನ್ನಿಲ್ಲದಂತೆ ಕಾಡಲಿದೆ. ಪ್ರತಿ ಸಾವಿರ ಜನರಿಗೆ 5.8 ಆಸ್ಪತ್ರೆ ಹಾಸಿಗೆ ವ್ಯವಸ್ಥೆ ಹೊಂದಿರುವ ಫ್ರಾನ್ಸ್‌ನಂತಹ ದೇಶವೇ ನಡುಗಿ ಹೋಗಿರುವ ಈ ಹೊತ್ತಿನಲ್ಲಿ ಸಾವಿರ ಜನರಿಗೆ ಕೇವಲ 1.8 ಆಸ್ಪತ್ರೆ ಹಾಸಿಗೆ ಹೊಂದಿರುವ ಆಫ್ರಿಕನ್ ದೇಶಗಳಲ್ಲಿ 2.9 ಕೋಟಿ ಜನರು ಆಸ್ಪತ್ರೆಗೆ ಎಡತಾಕಲಿದ್ದಾರೆ ಎಂಬುದು ಊಹೆಗೂ ನಿಲುಕದ ಸಂಗತಿಯಾಗಿದೆ.

ಕೊವಿಡ್–19 ವೈರಾಣುವು ಹುಟ್ಟಿ ಹರಡಿದ್ದು ಹೇಗೆ?

2002 ರ ಸಾರ್ಸ್ ಸಾಂಕ್ರಾಮಿಕ ಪಿಡುಗಿನ ನಂತರ ಕೊವಿಡ್–19 ಕರೋನಾ ವೈರಾಣುವಿನಿಂದಲೇ ಬಂದ ಎರಡನೇ ಜಾಗತಿಕ ಸಾಂಕ್ರಾಮಿಕ ಪಿಡುಗಾಗಿದೆ. ಕೊವಿದ್–19 ಶ್ವಾಸಕೋಶ ಮುಂತಾದ ಉಸಿರಾಟದ ವ್ಯವಸ್ಥೆಯ ಅಂಗಗಳ ಮೇಲೆ ದಾಳಿ ಮಾಡಿ ತೀವ್ರ ಉಸಿರಾಟದ ತೊಂದರೆ ಉಂಟು ಮಾಡಿ ಸಾವಿಗೆ ಕಾರಣವಾಗುವುದರಿಂದ, ಮತ್ತು ಸೋಂಕಿತರ ಸೀಮು–ಕೆಮ್ಮುಗಳಿಂದ ಹೊಮ್ಮಿದ ದ್ರವದ ಹನಿಗಳ ಜತೆ ಸಂಪರ್ಕಕ್ಕೆ ಬಂದವರಲ್ಲಿ ಅತ್ಯಂತ ವೇಗವಾಗಿ ಹರಡುವುದರಿಂದ, ತೀವ್ರವಾಗಿ ಅಪಾಯಕಾರಿಯಾಗಿದೆ. ಸೋಂಕು ವೇಗವಾಗಿ ಹರಡುವುದು, ಹೆಚ್ಚಿನ ಸರಾಸರಿ ಸಾವಿನ ದರ (ಶೇ. 6.4) ಮತ್ತು ಈ ವರೆಗೆ ಅದನ್ನು ತಡೆಯಲು ಲಸಿಕೆಯಾಗಲಿ, ಗುಣಪಡಿಸಲು ಔಷಧಿಯಾಗಲಿ ಲಭ್ಯವಿಲ್ಲದಿರುವುದರಿಂದ ಇದು ಒಂದು ಕಡೆ ಅಭೂತಪೂರ್ವ ಸಾರ್ವಜನಿಕ ವೈದ್ಯಕೀಯ ತುರ್ತುಪರಿಸ್ಥಿತಿಯನ್ನು ಸೃಷ್ಟಿಸಿದೆ. ಇನ್ನೊಂದು ಕಡೆ ಲಾಕ್ ಡೌನ್ ನಂತಹ ಕಟು ಕ್ರಮಗಳಿಗೆ ಕಾರಣವಾಗಿ ಅಭೂತಪೂರ್ವ ಗಂಭೀರ ಸಾಮಾಜಿಕ–ಆರ್ಥಿಕ ಬಿಕ್ಕಟ್ಟನ್ನು ಸೃಷ್ಟಿಸಿದೆ.

ಈ ವೈರಾಣು ಕರೋನ ಸರಣಿಯಲ್ಲಿ ಹನ್ನೆರಡನೆಯದಾಗಿದ್ದು ಇದು ಮೊದಲನೆಯದ್ದೂ ಅಲ್ಲ, ಕೊನೆಯದ್ದೂ ಅಲ್ಲ ಎನ್ನಲಾಗಿದೆ. ಆದ್ದರಿಂದ ಕೊವಿದ್–19 ಹೇಗೆ ಹುಟ್ಟಿತು? ಏಕೆ ಇಷ್ಟು ವೇಗವಾಗಿ ಹರಡುತ್ತಿದೆ? ಇದು ಒಂದು ಬಾರಿಯ ಆಕಸ್ಮಿಕ ಪ್ರಾಕೃತಿಕ ವಿದ್ಯಮಾನ ಮಾತ್ರವೇ? ಕಳೆದ ಎರಡು ದಶಕಗಳಲ್ಲಿ 15ಕ್ಕೂ ಹೆಚ್ಚು ಇಂತಹ ವೈರಾಣು ಸಾಂಕ್ರಾಮಿಕಗಳು ಬಂದಿದ್ದು, ಇದರಲ್ಲಿ ಆಯಾ ದೇಶಗಳ ಮತ್ತು ಜಾಗತಿಕ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ಪಾತ್ರವಿದೆಯೇ? ಇಂತಹ ಮಹಾಪಿಡುಗುಗಳು ಮುಂದಿನ ದಿನಗಳಲ್ಲಿ 'ಸಾಮಾನ್ಯ'ವಾಗಲಿವೆಯೇ? ಈಗಿನ ಹಾಗೂ ಮುಂದಿನ ಇಂತಹ ಮಹಾಪಿಡುಗುಗಳ ವಿರುದ್ಧ ಹೋರಾಡಲು ಮತ್ತು ಅವುಗಳನ್ನು ತಡೆಯಲು ಅಗತ್ಯವಾಗಿರುವ ಈ ಪ್ರಶ್ನೆಗಳಿಗೆ ಸ್ಥೂಲ ಉತ್ತರಗಳನ್ನಾದರೂ ಹುಡುಕುವುದು ಈ ಬರಹದ ಗುರಿ.

ಈ ವೈರಾಣುವಿನ ಮೂಲ ಚೀನಾದ ಹುಬೆ ಪ್ರಾಂತ್ಯದ ವುಹಾನಿನ ಮಾಂಸದ ಮಾರುಕಟ್ಟೆ ಎಂದು ಅಭಿಪ್ರಾಯ ಪಡಲಾಗಿದೆ. ಪಾಶ್ಚಾತ್ಯ ಮಾಧ್ಯಮಗಳು ಅದನ್ನು ಹಸಿ ಮಾಂಸದ ಮಾರುಕಟ್ಟೆ ಎಂದು ಕರೆಯುತ್ತವೆಯಾದರೂ ಮಾಂಸದ ಮಾರುಕಟ್ಟೆಗಳಲ್ಲಿ ಬಿಸಿ ಮಾಂಸವನ್ನು ಎಲ್ಲಿ ಮಾರುತ್ತಾರೆ ಎಂದು ಅವರನ್ನೇ ಕೇಳಬೇಕಾಗಿದೆ. ಸದರಿ ವೈರಾಣು ಚೀನಾದಲ್ಲೇ ಪ್ರಾಣಿಯಿಂದ ಮನುಷ್ಯರಿಗೆ ಹರಡಲು ಆರಂಭವಾಗಿದ್ದರೂ ಅದರ ಹುಟ್ಟನ್ನು ಚೀನಾದ ತಲೆಗೆ ಕಟ್ಟುವುದು ಒಂದು ಕುತ್ಸಿತ ರಾಜಕಾರಣದ ಹತಾಶ ಪ್ರಯತ್ನ. ಈ ದಿಕ್ಕಿನಲ್ಲಿ ಇನ್ನಿಲ್ಲದ ಪ್ರಯತ್ನ ಮತ್ತು ಪ್ರಚಾರ ನಡೆಯುತ್ತಿದೆ. ಸ್ವತಃ ಅಮೆರಿಕದ ಅಧ್ಯಕ್ಷ ಟ್ರಂಪ್ ಇದಕ್ಕೊಂದು ಜನಾಂಗೀಯ ರೂಪ ಕೊಡುವ ಪ್ರಯತ್ನ ಮಾಡಿ ಮುಖ ಭಂಗ ಎದುರಿಸಿ ಚೀನಾ ದೇಶವೇ ಈ ವೈರಸ್ಸನ್ನು ಸೃಷ್ಟಿಸಿದೆ ಎಂಬ ನಿಲುವಿಗೆ ಅಂಟಿಕೊಂಡು ಚೀನಾದಿಂದ ಪರಿಹಾರ ಪಡೆಯುವ ನವರಂಗಿ ಆಟದ ಮರೆಯಲ್ಲಿ ತನ್ನ ಆಡಳಿತದ ವೈಫಲ್ಯ ಮತ್ತು ವಿಕೃತಿಯನ್ನು ಮರೆಮಾಚಲು ಇನ್ನಿಲ್ಲದ ಕಸರತ್ತು ಪ್ರದರ್ಶಿಸುತ್ತಿದ್ದಾರೆ. ಈ ವೈರಾಣುವಿನ ಸೃಷ್ಟಿಯು ನೈಸರ್ಗಿಕವಾಗಿ ಸಂಭವಿಸಿದೆ ಮತ್ತು ಯಾವುದೇ ಪ್ರಯೋಗಾಲಯದಲ್ಲಿ ಸೃಷ್ಟಿಸಲಾಗಿಲ್ಲ ಎಂದು ಪ್ರಖ್ಯಾತ "ದಿ ನೇಚರ್" ಪತ್ರಿಕೆ ಸೇರಿದಂತೆ ಅನೇಕ ವೈರಾಣು ತಜ್ಞರು ಹೇಳಿದ್ದಾರೆ. ಅಮೆರಿಕದ ರೋಗ ನಿಯಂತ್ರಣ ಕೇಂದ್ರದ ಮುಖ್ಯಸ್ಥರೇ ಇದು ಮಾನವನ ಸೃಷ್ಟಿ ಎಂಬುದಕ್ಕೆ ಯಾವುದೇ ಆಧಾರಗಳು ಇಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.



ಕೋವಿದ್–19 ಬಂಡವಾಳಶಾಹಿಯ ಕೂಸು

ನಾವಿಂದು ಬದುಕುತ್ತಿರುವ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ವ್ಯವಸ್ಥೆಯ ಚಾಲಕ ಶಕ್ತಿಯೇ ದುರ್ಲಾಭ. ಹೀಗಿರುವಾಗ ನಿಸ್ಸಂದೇಹವಾಗಿ ಲಾಭಕ್ಕಾಗಿನ ದಾಹವು ಹೊಸ, ಹೊಸ ಪ್ರದೇಶ ಮತ್ತು ಪರಿಸರದಲ್ಲಿ ಮನುಷ್ಯನ ಹಸ್ತಕ್ಷೇಪವನ್ನು ವಿಪರೀತಗೊಳಿಸಿವೆ. ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿ ಪರಿಸರದ ವಿವಿಧ ವಲಯಗಳಲ್ಲಿ ಮಾನವ ಹಸ್ತಕ್ಷೇಪದ ತೀವ್ರತೆ, ಕೊಳ್ಳೆಹೊಡೆಯುವ ಪ್ರಮಾಣ, ವನ್ಯಜೀವಿಗಳನ್ನು ಸರಕಾಗಿ ಮಾರ್ಪಡಿಸಿ ಲಾಭ ಹೊಡೆಯುವ ಧಾವಂತ, ಉತ್ಪಾದನೆ ಹೆಚ್ಚಿಸುವ ಭರದಲ್ಲಿ ವೈವಿಧ್ಯತೆಯನ್ನು ನಾಶಗೊಳಿಸಿ ವಿಕೃತಿಗೊಳಿಸುವುದು ಶರವೇಗದಿಂದ ನಡೆದಿದೆ.

ಬಂಡವಾಳಶಾಹಿಯ ಲಾಭದ ಭರಾಟೆಯು ಎಲ್ಲವನ್ನೂ ನುಂಗಿ ನೊಣೆಯುತ್ತಿದೆ. ಅರಣ್ಯಗಳು ನಾಶವಾಗುತ್ತಿವೆ. ಹೊಳೆ ಕೊಳಗಳು ಬತ್ತಿಹೋಗುತ್ತಿವೆ. ಅಮೆಜಾನ್ ಮಳೆಕಾಡುಗಳಿಗೆ ಬೆಂಕಿಯಿಟ್ಟು ಅಲ್ಲಿನ ಪ್ರಾಕೃತಿಕ ಸಂಪತ್ತನ್ನು ದೋಚುವುದನ್ನು ನೋಡಿದ್ದೇವೆ. ಬಂಡವಾಳಶಾಹಿಯ ಲಾಭದ ಬೇಟೆಗೆ ಸಿಲುಕಿ ಪಲ್ಲಟಗೊಂಡ ವನ್ಯ ಜೀವಿಗಳು ನಾಡನ್ನು, ನಗರಗಳನ್ನು ಆಶ್ರಯಿಸುತ್ತವೆ, ತಮ್ಮಲ್ಲಿರುವ ರೋಗಾಣುಗಳನ್ನು, ವೈರಾಣುಗಳನ್ನು ನರರಿಗೂ, ನಾಡಿಗೂ, ನಗರಗಳಿಗೂ ಹಂಚುತ್ತವೆ.

ಈಗ ಮನುಷ್ಯರ ಶ್ವಾಸಕೋಶದ ಮೇಲೆ ದಾಳಿ ಮಾಡಿ ರುದ್ರ ನರ್ತನ ಮಾಡುತ್ತಿರುವ ಕರೋನ ವೈರಾಣು ಕೂಡ ಹೀಗೆ ಆಕಸ್ಮಿಕವಾಗಿ ಬಂದಿರುವಂತಹದ್ದು. ವನ್ಯಜೀವಿಗಳನ್ನು ಆಶ್ರಯಿಸಿದ್ದ ವೈರಾಣುವೊಂದು ಮನುಷ್ಯರಿಗೆ ಹರಡಿದ ಕೇವಲ ಕೆಲವೇ ತಿಂಗಳುಗಳಲ್ಲಿ ಉಂಟುಮಾಡಿದ ಕ್ಷೋಭೆಯನ್ನು ನಾವಿನ್ನೂ ಅರಗಿಸಿಕೊಳ್ಳಬೇಕಿದೆ. ವುಹಾನಿನ ಯಾವುದೋ ಮೂಲೆಯಿಂದ ಯಾವುದೋ ಒಂದು ಪ್ರಾಣಿಯಿಂದ ಮತ್ತೊಂದಕ್ಕೆ, ಅದರಿಂದ ಮನುಷ್ಯನಿಗೆ ಹಾಗೂ ಮನುಷ್ಯನಿಂದ ಮನುಷ್ಯನಿಗೆ ಹರಡಲು ಆರಂಭಿಸಿ, ಅಲ್ಲಿಂದ ರೈಲು, ವಿಮಾನಗಳ ಮೂಲಕ, ಇಡೀ ಜಗತ್ತಿನ ದೊಡ್ಡ ನಗರಗಳಿಂದ ಸಣ್ಣ ಪಟ್ಟಣ, ಹಳ್ಳಿಗಳಿಗೆ ಹರಡಿಕೊಂಡಿದೆ.

ಇಂತಹ ಬಲೆಯಲ್ಲಿ ಮನುಷ್ಯ ಸಿಕ್ಕಿ ಹಾಕಿಕೊಂಡ ಬಗೆಯನ್ನು ಸ್ವಲ್ಪ ವಿಸ್ತರಿಸಿ ನೋಡೋಣ. ಕೆಲವು ರೋಗಾಣುಗಳು ಅವುಗಳ ಮೂಲ ನೆಲೆಗಳಿಂದಲೇ ಅಂದರೆ ಆ ವೈರಾಣುಗಳನ್ನು ಹೊತ್ತ ಪ್ರಾಣಿಗಳು ವಾಸಿಸುವ ನೆಲೆಗಳಿಂದಲೇ ಹುಟ್ಟಿಕೊಳ್ಳುತ್ತವೆ. ಆದರೆ ಕೊವಿಡ್–19 ನಂತಹ ವೈರಾಣುಗಳು ಬಂಡವಾಳದ ಉತ್ಪಾದನಾ ಕೇಂದ್ರಗಳಲ್ಲಿ, ಅಂದರೆ ಮಹಾನಗರಗಳಲ್ಲಿ ಮಹಾಪಿಡುಗಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ವೈರಾಣುಗಳಲ್ಲಿ ಶೇ.60 ರಷ್ಟು ವನ್ಯಜೀವಿಗಳು ಮನುಷ್ಯರ ಮೇಲೆ ಚೆಲ್ಲುವ ಎಂಜಲಿನಿಂದಲೇ ಹರಡುತ್ತವೆ. ಅವುಗಳಲ್ಲಿ ಶಕ್ತಿಶಾಲಿಯಾದ ವೈರಾಣುಗಳು ಮನುಷ್ಯನಿಂದ ಮನುಷ್ಯನಿಗೆ ಹರಡುತ್ತಾ ಜಗತ್ತನ್ನೇ ಆವರಿಸುತ್ತವೆ.

ಮಾರಕ ವೈರಾಣುಗಳನ್ನು ನಿಯಂತ್ರಿಸುವ ಸ್ವಯಂ ವ್ಯವಸ್ಥೆಯನ್ನು ಹೊಂದಿರುವ ಉಷ್ಣವಲಯದ ಕಾಡುಗಳನ್ನು ಬಂಡವಾಳಶಾಹಿ ವ್ಯವಸ್ಥೆ ಅಲ್ಲಿರುವ ಸಂಪತ್ತನ್ನು ದೋಚಲು ಆ ಕಾಡುಗಳನ್ನು ಹೇಳ ಹೆಸರಿಲ್ಲದಂತೆ ಮಾಡುತ್ತಿದೆ. ಇದರಿಂದಾಗಿ ಹಲವಾರು ರೋಗಕಾರಕ ವೈರಾಣುಗಳು ತಮ್ಮ ಆಶ್ರಯದಾತರಿಲ್ಲದೆ ನಾಶವಾಗುತ್ತಿದ್ದರೆ, ಕೆಲವು ಆಶ್ರಯ ಹುಡುಕಿ ಜನವಸತಿ ಪ್ರದೇಶಗಳಲ್ಲಿ ಬಂದು ಮನುಷ್ಯರನ್ನು ಸೇರಿಕೊಳ್ಳುತ್ತಿವೆ. ನಗರಗಳು, ಜನಸಂದಣಿಯ ಪ್ರದೇಶಗಳು ಈ ರೋಗಾಣುಗಳಿಗೆ ಪ್ರಶಸ್ತ ತಾಣಗಳಾಗುತ್ತಿವೆ.

"ಊಸಿದವಳು ಯಾರು ಎಂದರೆ ಮಾಸಲು ಸೀರೆಯವಳು" ಎಂಬಂತೆ ಇಂತಹ ಯಾವುದೇ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಾಗ ಮೂರನೇ ಜಗತ್ತಿನ, ಚೀನಾ, ಭಾರತ, ಆಫ್ರಿಕಾ, ದೇಶಗಳತ್ತಲೇ ಬೆರಳು ತೋರಿಸಲಾಗುತ್ತದೆ. ಆದರೆ ಈ ರೀತಿ ಮಾಡುವಾಗಲೆಲ್ಲ ರೋಗಶಾಸ್ತ್ರಗಳನ್ನು ನಿರ್ಣಯಿಸುವ ಜಾಗತಿಕ ಆರ್ಥಿಕ ಅಂಶಗಳನ್ನು ಮರೆಮಾಚುತ್ತಾರೆ. ಬಂಡವಾಳಶಾಹಿ ಹಿತದ ಅಭಿವೃದ್ಧಿ ಮತ್ತು ಉತ್ಪಾದನಾ ವಿಧಾನವು ಭೂಮಿ ಬಳಕೆಯಲ್ಲಿ ಮಾಡಿರುವ ಬದಲಾವಣೆಗಳನ್ನು ನಿರ್ಲಕ್ಷಿಸಿ ಮೂರನೇ ಜಗತ್ತಿನ ದೇಶಗಳ ಕೊಳಕು ಜೀವನ ಶೈಲಿ ರೋಗ ಹರಡಲು ಕಾರಣ ಎಂದು ಪ್ರತಿಪಾದಿಸುತ್ತಾರೆ.ವನ್ಯಜೀವಿಗಳ ಮಾಂಸದ ಸೇವನೆ ಮತ್ತು ಸತ್ತವರನ್ನು ಮನೆಯ ಬಳಿ ಸಮಾಧಿ ಮಾಡುವುದೇ ರೋಗಾಣು ಉಂಟಾಗಲು ಕಾರಣ ಎಂದು ಬಿಂಬಿಸಲಾಗುತ್ತದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಜಾಗತಿಕ ಬಂಡವಾಳದ ಕೇಂದ್ರಗಳಾದ ನ್ಯೂಯಾರ್ಕ್, ಲಂಡನ್ ಮತ್ತು ಹಾಂಕಾಂಗ್‌ಗಳೇ ಸಾಂಕ್ರಾಮಿಕ ರೋಗದ ಹಾಟ್ ಸ್ಪಾಟ್‌ಗಳಾಗಿವೆ.

ಎಗ್ಗಿಲ್ಲದೆ ಮಹಾನಗರಗಳು, ಸ್ಲಂಗಳು, ಉಪನಗರಗಳು ಬೆಳೆಯುವುದು ಕೂಡ ಬಂಡವಾಳಶಾಹಿ ಉತ್ಪಾದನಾ ವಿಧಾನದ

ಪುಟ 10 ಕ್ಕೆ

ಕೊವಿಡ್–19: ಬರಿಯ ಪ್ರಾಕೃತಿಕ ಆಕಸ್ಮಿಕವೇ? ಅಥವಾ.......... ಪುಟ 9 ರಿಂದ

ಬಹುಮುಖ್ಯ ಕೊಡುಗೆ. ಸಾರಿಗೆ ವೆಚ್ಚ, ಸಾಗಾಣಿಕಾ ವೆಚ್ಚ ಉಳಿಸಲು, ಆಮದು ರಫ್ತು ಸರಳಗೊಳಿಸಲು ಉತ್ಪಾದನೆಯನ್ನು ಸುಸಂಘಟಿಸಿ ಲಾಭದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಯೋಜನಾ ರಹಿತವಾಗಿ ನಗರಗಳಿಗೆ ಹಳ್ಳಿಗಳಿಂದ ರೈತರನ್ನು, ಅರಣ್ಯಗಳಿಂದ ಆದಿವಾಸಿಗಳನ್ನು, ವಲಸಿಗರನ್ನು ತಂದು ನಗರಗಳಿಗೆ ತುಂಬುತ್ತದೆ. ಅವರನ್ನು ವಿಪರೀತ ಜನಸಾಂದ್ರತೆಯ ಅನಾರೋಗ್ಯಕರ ಕೊಳೆಗೇರಿಗಳಲ್ಲಿ ವಾಸ ಮಾಡುವ ಪರಿಸ್ಥಿತಿ ಎಲ್ಲೆಡೆ ಇದೆ. ಇದರ ಫಲವಾಗಿ ಜಾಗತಿಕ ತಿರುಗಾಟ, ಸಾಗಾಣಿಕೆ ವಿಪರೀತವಾಗಿ ಹೆಚ್ಚಿದೆ. ಸಾಂಕ್ರಾಮಿಕಗಳು ವೇಗವಾಗಿ ಜಾಗತಿಕವಾಗಿ ಹರಡಲು ಇದು ಪ್ರಶಸ್ತ ಪರಿಸ್ಥಿತಿ ನಿರ್ಮಾಣ ಮಾಡಿದೆ. ಜನಗಳು ತಿರುಗಾಡಲು ತಿಣುಕಬೇಕಾದ ಜಾಗಗಳಲ್ಲಿ ವೈರಾಣುಗಳು ಸ್ವಚ್ಛಂದವಾಗಿ ವಿಹರಿಸುತ್ತವೆ. ಭಾರತದ ಮಹಾನಗರಗಳಿಂದ ತಮ್ಮ ಊರುಗಳಿಗೆ ತೆರಳಲು ಕನಿಷ್ಠ ಸಾರಿಗೆ ವ್ಯವಸ್ಥೆ ಕಲ್ಪಿಸದಿರುವುದೂ ಕೂಡ ನಗರಗಳ, ಶ್ರೀಮಂತರ ಜೀತದಾಳುಗಳಂತೆ ದುಡಿಯುತ್ತಿರುವ ವಲಸಿಗರು ತಮ್ಮ ಊರುಗಳಿಗೆ ವಾಪಸ್ಸು ಹೋದರೆ ಮರಳಿ ಬರುವಷ್ಟು ಕಾಲ ಉತ್ಪಾದನೆಗೆ, ಆ ಮೂಲಕ ಲಾಭಕ್ಕೆ ಧಕ್ಕೆ ಬರುತ್ತದೆ ಎಂಬ ಅಮಾನವೀಯ ಭಯ..

ಸಾಂಕ್ರಾಮಿಕ ರೋಗಗಳನ್ನು ಹುಟ್ಟು ಹಾಕುವ ಕೇಂದ್ರಗಳು ಯಾವ ನಿಯಂತ್ರಣಕ್ಕೂ ಸಿಗದಂತೆ ಬೆಳೆಯುತ್ತಿವೆ. ಬಂಡವಾಳಶಾಹಿ ಸರ್ಕಾರಗಳೇ ಪ್ರೋತ್ಸಾಹಿಸಿ ಬೆಳೆಸುತ್ತಿರುವ ಸಾಮ್ರಾಜ್ಯಶಾಹಿಯು ಸ್ಥಳೀಯ ವೈವಿಧ್ಯತೆಗಳನ್ನು ನಾಶ ಪಡಿಸುತ್ತಾ ಪರಿಸರದಲ್ಲಿ ಅಸಮಾನ, ಆತಂಕಕಾರಿ ಬದಲಾವಣೆಗಳನ್ನು ಮಾಡುತ್ತಿದೆ. ಬಹು ಮುಖ್ಯವಾಗಿ ದೈತ್ಯಗಾತ್ರದ ವ್ಯಾಪಾರಿ ಕೃಷಿಯು ತನ್ನ ಲಾಭಕ್ಕಾಗಿ ವಿವಿಧ ಪ್ರದೇಶಗಳ ತುಂಡರಿಯದ ಸರಣಿಯೊಂದನ್ನು ಪುನರ್ ರೂಪಿಸಿಕೊಳ್ಳುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು "ಸೋಯಾಬಿನ್ ರಿಪಬ್ಲಿಕ್" ಎಂಬ ಬೊಲಿವಿಯಾ, ಪರುಗ್ವೆ, ಅರ್ಜೆಂಟೀನಾ ಮತ್ತು ಬ್ರೆಜಿಲ್ ದೇಶಗಳನ್ನೊಳಗೊಂಡ ಒಂದು ಸರಣಿಯನ್ನೇ ಏರ್ಪಡಿಸಿಕೊಂಡಿವೆ. ಭಾರತದಲ್ಲಿ ಸಹ ದೊಡ್ಡ ಪ್ರಮಾಣದಲ್ಲಿ ಕಂಪನಿ ಕೃಷಿಗೆ ತೆರೆದುಕೊಳ್ಳಲಾಗಿದೆ. ಕಂಪನಿಗಳ ಕೃಷಿ ಜನರ ಅಗತ್ಯವನ್ನು ಆಧರಿಸಿ ನಡೆಯುವುದಿಲ್ಲ. ಕಂಪನಿ ಕೃಷಿ ಬೆಳೆಗಳನ್ನು ಬೆಳೆಯುವುದಿಲ್ಲ. ಬದಲಾಗಿ ಸರಕನ್ನು ಬೆಳೆಯುತ್ತದೆ. ಯಾವ ಸರಕಿಗೆ ಗರಿಷ್ಠ ಲಾಭ ಸಿಗುತ್ತದೆಯೋ ಅದನ್ನು ಬೆಳೆಯಲಾಗುತ್ತದೆ. ನಮ್ಮ ರಾಗಿ, ಜೋಳ, ಭತ್ತದ ಗದ್ದೆಗಳನ್ನು, ಅವರೆ, ತೊಗರಿ , ಹಲಸಂದೆಯ ಹೊಲಗಳನ್ನು ಸೋಯಾಬೀನಿನಂತಹ, ಶುಂಠಿಯಂತಹ ಏಕ ರೂಪದ ಸರಕು ಬೆಳೆಯುವ ಮೈದಾನಗಳನ್ನಾಗಿಸುತ್ತದೆ. ತೋಡ, ನರಿ, ಮೊಲ, ಜಿಂಕೆ, ನವಿಲುಗಳು ನಿರಾಶ್ರಿತವಾಗಿ ಊರು, ಕೇರಿಗಳಲ್ಲಿ ಅಂಡಲೆಯುತ್ತಾ ನಮಗೆ ಗೊತ್ತಿಲ್ಲದ, ತಾವು ಹೊತ್ತು ತಿರುಗುತ್ತಿದ್ದ ರೋಗಾಣುಗಳನ್ನು ಊರಲ್ಲೆಲ್ಲಾ ಚೆಲ್ಲಿ ಹೋಗುತ್ತವೆ. ಸರಕು ಉತ್ಪಾದಕ ದೇಶಗಳು ಮತ್ತು ಕಂಪನಿಗಳು ಎಲ್ಲಾ ರಾಷ್ಟ್ರೀಯ, ಪ್ರಾದೇಶಿಕ ಗಡಿಗಳನ್ನು ಮೀರುತ್ತಾ, ರಾಜಕೀಯ ಮತ್ತು ಪರಿಸರ ವೈವಿಧ್ಯತೆಗಳನ್ನು ಕಡೆಗಣಿಸುತ್ತಾ ಬೆಳವಣಿಗೆ ಸಾಧಿಸುತ್ತಿವೆ. ಈ ಹಾದಿಯು ನವ ನವೀನ ಸಾಂಕ್ರಾಮಿಕ ರೋಗಗಳ ಹುಟ್ಟಿಗೆ ಕಾರಣವಾಗುತ್ತಿದೆ.

ಮಹಾಪಿಡುಗು ನಿಯಂತ್ರಣ–ನಿಭಾಯಿಸುವಿಕೆಗಳಲ್ಲಿ ವೈಫಲ್ಯ

ಸಮಕಾಲೀನ ಬಂಡವಾಳಶಾಹಿ ಉತ್ಪಾದನೆಯ ಸಂಘಟನಾ ವಿಧಾನದ ಪರಿಣಾಮ ವ್ಯಾಪಕವಾಗಿ ಮತ್ತು ತೀವ್ರವಾಗಿ ರೋಗ ಹರಡುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಲಾಭವಿಲ್ಲದ ವ್ಯವಹಾರದಲ್ಲಿ ಸಂಪನ್ಮೂಲ ತೊಡಗಿಸಲು ನಿರಾಕರಿಸುವ ಬಂಡವಾಳಶಾಹಿಯ ಗುಣದಿಂದಾಗಿ ರೋಗವನ್ನು ನಿರ್ವಹಿಸಲು ಯೋಜನೆ ಮತ್ತು ಸಿದ್ಧತೆ ಮಾಡಿಕೊಳ್ಳದ ಬಂಡವಾಳಶಾಹಿ ವ್ಯವಸ್ಥೆಯ ಅಸಾಮರ್ಥ್ಯವನ್ನು ಪ್ರಸ್ತುತ ಕರೋನ ಬಿಕ್ಕಟ್ಟು ಅನಾವರಣಗೊಳಿಸಿದೆ.

ಬಂಡವಾಳಶಾಹಿಯ ಮುಕುಟ ಅಮೇರಿಕಾ ಈ ಕೊವಿಡ್–19 ಮಹಾಪಿಡುಗನ್ನು ನಿಯಂತ್ರಿಸುವಲ್ಲಿ ದಯನೀಯವಾಗಿ ವಿಫಲವಾಗಿದೆ. ಬರಬಹುದಾದ ಮಹಾಪಿಡುಗೊಂದನ್ನು ಎದುರಿಸಲು ಇದು ಗೊತ್ತಾದ ಡಿಸೆಂಬರ್ ತಿಂಗಳಿನಿಂದಲೇ ತಯಾರಾಗಬೇಕಿತ್ತು. ಆದರೆ ಡೊನಾಲ್ಡ್ ಟ್ರಂಪ್ ಅಮೆರಿಕದ ರಾಷ್ಟ್ರೀಯ ರಕ್ಷಣಾ ತಂಡದ ಸಾಂಕ್ರಾಮಿಕ ಸಿದ್ಧತಾ ತಂಡವನ್ನೇ ದುರ್ಬಲಗೊಳಿಸಿದರು, ರೋಗ ನಿಯಂತ್ರಣ ಮಂಡಳಿಯ 700 ಹುದ್ದೆಗಳನ್ನು ಖಾಲಿ ಕೆಡವಿದರು. ರಾಯಿಟರ್ಸ್ ಸುದ್ದಿ ಸಂಸ್ಥೆ ಹೇಳುವಂತೆ ಕೊವಿಡ್ ಮಹಾಪಿಡುಗು ಆರಂಭಗೊಳ್ಳುವ ಮೊದಲೇ ಚೀನಾದಲ್ಲಿನ ಅಮೆರಿಕದ ರೋಗ ನಿಯಂತ್ರಣ ಮಂಡಳಿಯ ತಜ್ಞರನ್ನು ಕಿತ್ತು ಹಾಕಲಾಯಿತು, ಇದರಿಂದಾಗಿ ಚೀನಾದಿಂದ ನೇರವಾಗಿ ಸಿಗಬಹುದಾಗಿದ್ದ ಮಾಹಿತಿಗಳು ಲಭ್ಯವಾಗದೆ ರೋಗ ಎದುರಿಸಲು ತಯಾರಿ ಮಾಡಿಕೊಳ್ಳುವುದು ತಡವಾಯಿತು. ಜೊತೆಗೆ ಈಗಾಗಲೇ ವಿಶ್ವ ಆರೋಗ್ಯ ಸಂಸ್ಥೆ **(WHO)** ನೀಡಿದ್ದ ಪರಿಕ್ಷಾ ಕಿಟ್‌ಗಳನ್ನು ಬಳಸಲು ನಿರಾಕರಿಸುವ ಅಹಂಕಾರ ಪ್ರದರ್ಶಿದ ಅಮೆರಿಕ ರೋಗ ಪತ್ತೆಯನ್ನೂ ವಿಳಂಬ ಮಾಡಿತು. ಇವತ್ತು ಅಮೇರಿಕಾ ಎದುರಿಸುತ್ತಿರುವ ಅರೋಗ್ಯ ವಿಪತ್ತಿಗೆ ಇವು ನಿಜವಾದ ಕಾರಣಗಳು.

ಜಗತ್ತಿನಲ್ಲೇ ಆರ್ಥಿಕವಾಗಿ ಅತಿಹೆಚ್ಚು ಅಭಿವೃದ್ಧಿ ಹೊಂದಿದ ಮತ್ತು ವೈದ್ಯಕೀಯ ಕ್ಷೇತ್ರವೂ ಸೇರಿದಂತೆ ಅತ್ಯಂತ ಸುಧಾರಿತ ವೈಜ್ಞಾನಿಕ ತಿಳುವಳಿಕೆ ಹೊಂದಿರುವ ಅಮೇರಿಕಾ ಕೇವಲ ಇಪ್ಪತ್ನಾಲ್ಕು ಗಂಟೆಯಲ್ಲಿ ಎರಡು ಸಾವಿರ ಜನರ ಸಾವಿನ ದುರಂತಕ್ಕೆ ಸಾಕ್ಷಿಯಾದ ಮೊದಲ ದೇಶವಾಯಿತು. ಈ ವೈರುಧ್ಯವನ್ನು ಪತ್ರಿಕೆಯೊಂದು "ಕೊವಿಡ್–19, ಜಗತ್ತಿನ ಅತ್ಯುತ್ತಮ ವ್ಯವಸ್ಥೆಗಳಲ್ಲಿ ಒಂದಾದ ಅಮೆರಿಕಾದ ವೈದ್ಯಕೀಯ ವ್ಯವಸ್ಥೆ ತೀವ್ರ ಒತ್ತಡದಲ್ಲಿ ಸಿಲುಕಿದೆ" ಎಂದು ಬಣ್ಣಿಸಿತು(PTI 2020). ರೋಗದಿಂದ ಅತಿಹೆಚ್ಚು ಸಾವುಗಳನ್ನು ಕಂಡ ಇಟಲಿ, ಸ್ಪೇನ್ ಅಥವಾ ಫ್ರಾನ್ಸನ್ನೂ ಒಳಗೊಂಡಂತೆ ಎರಡು ಮೂರು ಯೂರೋಪಿಯನ್ ದೇಶಗಳಿಂದ ಇಂತಹದ್ದೇ ದುಃಖಕರ ಸುದ್ದಿಗಳು ಹೊರಬೀಳುತ್ತಿವೆ

ಈಗ ಎದುರಿಸುತ್ತಿರುವ ಸಮಸ್ಯೆಗಳು ಸೃಷ್ಟಿಯಾಗಲು ದಶಕಗಳ ಹಿಂದಿನಿಂದ ಅನುಸರಿಸಿದ ನೀತಿಗಳು ಕಾರಣ. ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ಹಣಕಾಸಿನ ನೆರವನ್ನು ನಿರಾಕರಿಸಲಾಯಿತು. ಪರಿಣಾಮವಾಗಿ ಅಗತ್ಯವಿರುವ ಹಾಸಿಗೆಗಳನ್ನಾಗಲಿ, ವೈಯಕ್ತಿಕ ಸುರಕ್ಷತಾ ಕಿಟ್‌ಗಳನ್ನಾಗಲಿ ಕನಿಷ್ಠ ಮಾಸ್ಕ್‌ಗಳನ್ನು ಸಕಾಲಕ್ಕೆ ಒದಗಿಸಲಾಗಲಿಲ್ಲ. ವೈದ್ಯರು ಮತ್ತು ನರ್ಸ್‌ಗಳು ಪ್ಲಾಸ್ಟಿಕ್ ಚೀಲಗಳನ್ನು ರಕ್ಷಣೆಗೆ ಬಳಸಿಕೊಳ್ಳಬೇಕಾಯಿತು. ನೋಮ್ ಚಾಮ್ಸ್ಕೀ ಹೇಳುವಂತೆ ಅಮೆರಿಕದ ಮುಂದೆ ಲಾಭ ಮತ್ತು ಜನ ಎಂಬ ಆಯ್ಕೆ ಬಂದರೆ ಅದು ಲಾಭವನ್ನೇ ಆರಿಸಿಕೊಳ್ಳುತ್ತದೆ. ಸಾರ್ಸ್ ಬಿಕ್ಕಟ್ಟಿನ ಸಮಯದಲ್ಲಿ ಕಡಿಮೆ ದರದಲ್ಲಿ ವೆಂಟಿಲೇಟರ್ ಉತ್ಪಾದಿಸಲು ಅಮೆರಿಕದ ಚಿಕ್ಕ ಕಂಪನಿಯೊಂದು ಗುತ್ತಿಗೆ ಪಡೆದುಕೊಂಡಿತ್ತು. ಆ ಕಂಪನಿಯನ್ನೇ ಖರೀದಿಸಿದ ಬಹುರಾಷ್ಟ್ರೀಯ ಕಂಪನಿಯೊಂದು ಸರ್ಕಾರದಿಂದ ಹೆಚ್ಚಿನ ದರ ಕೇಳಿತು. ಆಗ ಸರ್ಕಾರ ವೆಂಟಿಲೇಟರ್ ತಯಾರಿಯನ್ನೇ ಕೈಬಿಟ್ಟಿತು. ಕಂಪನಿಯನ್ನು ನಿರ್ಬಂಧಿಸಿ ವೆಂಟಿಲೇಟರ್ ತಯಾರಿಸಲು ಸರ್ಕಾರ ಹೇಳಲೇ ಇಲ್ಲ. ಅದರ ಪರಿಣಾಮ ಈಗ ಅಮೇರಿಕದಲ್ಲಿ ವೆಂಟಿಲೇಟರ್‌ಗಳ ತೀವ್ರ ಕೊರತೆ ಉಂಟಾಗಿದೆ ಎನ್ನುತ್ತಾರೆ ನೋಮ್ ಚಾಮ್ಸ್ಕಿ...

ಒಟ್ಟಿನಲ್ಲಿ, ಕೋವಿಡ್–19 ಮಹಾಪಿಡುಗು ಒಂದು ಬಾರಿಯ ಆಕಸ್ಮಿಕ ಪ್ರಾಕೃತಿಕ ವಿದ್ಯಮಾನ ಮಾತ್ರವಲ್ಲ. ಇಂತಹ ಭೀಕರ ವೈರಾಣುಗಳು ಹುಟ್ಟುವ, ವೇಗವಾಗಿ ಹರಡಿ ಇಂತಹ ಮಹಾಪಿಡುಗು ಆಗಾಗ ಉಂಟಾಗುವ ಪರಿಸ್ಥಿತಿಯನ್ನು ಇಂದಿನ ಸಾಮಾಜಿಕ–ಆರ್ಥಿಕ ವ್ಯವಸ್ಥೆ ಅಂದರೆ ಬಂಡವಾಳಶಾಹಿ ನಿರ್ಮಿಸಿದೆ. ಅದರ ಗಂಭೀರ ವೈದ್ಯಕೀಯ, ಸಾಮಾಜಿಕ–ಆರ್ಥಿಕ ದುಷ್ಪರಿಣಾಮಗಳನ್ನು ನಿಭಾಯಿಸಿ ಹೋಗಲಾಡಿಸುವ ಇಚ್ಛೆಯನ್ನಾಗಲಿ ಸಾಮರ್ಥ್ಯವನ್ನಾಗಲಿ ಅದು ಹೊಂದಿಲ್ಲ ಎಂಬುದನ್ನು ಕಳೆದ ಐದು ತಿಂಗಳುಗಳಿಂದ ಜಗತ್ತನ್ನು ಆವರಿಸಿರುವ ಸರ್ವತೋಮುಖ ಬಿಕ್ಕಟ್ಟು ಸ್ಪಷ್ಟವಾಗಿ ಬಿಚ್ಚಿಟ್ಟಿದೆ. ಗರಿಷ್ಠ ಲಾಭದ ದಾಹವೇ ಚಾಲಕಶಕ್ತಿಯಾಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವತ್ತ ಚಲಿಸದೆ ಈ ಬಿಕ್ಕಟ್ಟನ್ನು ಎದುರಿಸುವುದು ಪರಿಹರಿಸುವುದು ಸಾಧ್ಯವಿಲ್ಲ. ಲಾಭದ ದಾಹದ ಬದಲು, ಸಾರ್ವತ್ರಿಕ ಒಳಿತು ಮತ್ತು ಸಮೃದ್ಧಿಗೆ ವಿಜ್ಞಾನ–ತಂತ್ರಜ್ಞಾನಗಳ ಬಳಕೆ, ಮಾನವ ಸಮಾಜ ಮತ್ತು ಪ್ರಕೃತಿಯ ನಡುವೆ ಸಮತೋಲಿತ ಯೋಜಿತ ಸುಸ್ಥಿರ ಬೆಳವಣಿಗೆಗಳ ಮೂಲಕ ಮಾನವನನ್ನು ಕೇಂದ್ರವಾಗಿರಿಸುವ ವ್ಯವಸ್ಥೆಯನ್ನು ರೂಪಿಸದೆ ಇದು ಸಾಧ್ಯವಿಲ್ಲ. ಇಂತಹ ವ್ಯವಸ್ಥೆಯೆಂದರೆ ಸಮಾಜವಾದಿ ವ್ಯವಸ್ಥೆ. ಈ ಬಿಕ್ಕಟ್ಟಿನ ಸಂದರ್ಭದಲ್ಲೂ ತೀವ್ರ ಅಂತರ್ರಾಷ್ಟ್ರೀಯ/ರಾಷ್ಟ್ರೀಯ ವ್ಯವಸ್ಥೆಯ ನಿರ್ಬಂಧಗಳ ನಡುವೆಯೂ ಜಾಗತಿಕವಾಗಿ ಚೀನಾ, ಕ್ಯೂಬಾ, ವಿಯೆಟ್ನಾಂ ಮತ್ತು ಭಾರತದಲ್ಲಿ ಕೇರಳ ತೋರಿದ ಬದಲಿ ಹಾದಿ ಈ ನಿಟ್ಟಿನಲ್ಲಿ ಆಶಾಕಿರಣಗಳಾಗಿವೆ. ●

ನಿಯಂತ್ರಣ–ಮುಕ್ತ ಲೂಟಿಗಾಗಿ 'ಎಪಿಎಂಸಿ ತಿದ್ದುಪಡಿ ಕಾಯ್ದೆ–2020'.......... ಪುಟ 8 ರಿಂದ

ಮರೀಚಿಕೆಯಾಗಿದೆ. ಇದು ವ್ಯವಸಾಯದ ಉತ್ಪಾದನಾ ವೆಚ್ಚವನ್ನು ವ್ಯಾಪಕವಾಗಿ ಹೆಚ್ಚಿಸಿದೆ. ಆದರೆ, ಅದೇ ಸಂದರ್ಭದಲ್ಲಿ ಅದರ ಆದಾಯವನ್ನು ಕುಗ್ಗಿಸಿದೆ. ಹೀಗಾಗಿ, ರೈತರು ಸಾಲಗಾರರಾಗಿ, ಸಾಲದ ಬಾಧೆಯಿಂದಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಅದಾಗಲೇ ಆತ್ಮಹತ್ಯೆಯೆಂಬ ಸರಕಾರಗಳ ಕಗ್ಗೊಲೆಗೆ ತುತ್ತಾಗಿದ್ದಾರೆ.

ವ್ಯವಸಾಯದಲ್ಲಿ ತೊಡಗಿದವರೆಲ್ಲಾ ತಮ್ಮ ವ್ಯವಸಾಯದ ಹಾಗೂ ಕುಟುಂಬದ ಬದುಕಿನ ವೆಚ್ಚಕ್ಕಾಗಿ, ಬಹುತೇಕ ಭೂಮಾಲಕ ಬಂಡವಾಳದಾರರನ್ನೇ ಅವಲಂಬಿಸಿದ್ದಾರೆ. ಅವರಿಲ್ಲದೆ ಇವರಿಗೆ ಬಹುತೇಕ ಜೀವನವಿಲ್ಲವೆಂಬಂತಾಗಿದೆ. ಈ ಪರಾವಲಂಬಿತನವು ಅವರ ಕೃಷಿ ಉತ್ಪನ್ನಗಳನ್ನು ಅವರು ಸ್ವತಂತ್ರವಾಗಿ ತಮಗೆ ಬೇಕಾದಲ್ಲಿ ಮಾರಾಟ ಮಾಡಿಕೊಳ್ಳಲು ಅವಕಾಶ ನೀಡುತ್ತಿಲ್ಲ. ರೈತರ ಈ ದಯನೀಯ ಸ್ಥಿತಿಯು, ಅವರ ಕೃಷಿ ಉತ್ಪನ್ನಗಳನ್ನು ಗ್ರಾಮೀಣ ಶ್ರೀಮಂತರ ಕಾಲ ಬುಡಕ್ಕೆ ತಳ್ಳಿವೆ. ರೈತರ ಇಂತಹ ಸ್ಥಿತಿಯು ಮುಖ್ಯಮಂತ್ರಿಗಳು ಹೇಳುವ ಎಂತಹ ಸ್ಪರ್ಧೆಯನ್ನು ಬಳಸಿಕೊಂಡೀತು!

ಈ ತಿದ್ದುಪಡಿಯು, ಗ್ರಾಮೀಣ ವ್ಯವಹಾರದ ಮೂಲಕ ನೀಡಬೇಕಿದ್ದ ಮಾರುಕಟ್ಟೆ ಸಮಿತಿಯ ಆದಾಯವನ್ನು ಅವರಲ್ಲಿಯೇ ಉಳಿಸಿಕೊಂಡು ಮತ್ತಷ್ಟು ಬಂಡವಾಳ ಕ್ರೋಡೀಕರಿಸಿಕೊಳ್ಳಲು ಈ ಶ್ರೀಮಂತರಿಗೆ ಹಾಗೂ ಕಾರ್ಪೋರೇಟ್ ಕಂಪನಿಗಳಿಗೆ ಸಹಾಯ ಮಾಡಲಿದೆ. ಬಹಳವೆಂದರೆ, ಗ್ರಾಮೀಣ ಶ್ರೀಮಂತರ ಜೊತೆ ಈ ಮುಕ್ತ ವ್ಯಾಪಾರದ ವಲಯಕ್ಕೆ ಕಾರ್ಪೋರೇಟ್ ಕಂಪನಿಗಳು ಪ್ರವೇಶಿಸಿ, ಕಂಪನಿ ಕೃಷಿ, ಗುತ್ತಿಗೆ ಕೃಷಿ ಮತ್ತು ಈ ವ್ಯವಹಾರದ ಮೂಲಕ ಗ್ರಾಮೀಣ ಪ್ರದೇಶಕ್ಕೆ ನುಗ್ಗಿ, ಇಡೀ ವ್ಯವಸಾಯವನ್ನು ತನ್ನ ವಶ ಪಡಿಸಿಕೊಳ್ಳಲು ಅನುವು ಮಾಡಿಕೊಡಲಿದೆ. ಈ ಮೂಲಕ ಕಾರ್ಪೋರೇಟ್ ಕಂಪನಿಗಳಿಗೆ, ಆಹಾರ ಧಾನ್ಯಗಳ ಮತ್ತು ಇತರೇ ಕೃಷಿ ಉತ್ಪನ್ನಗಳ ಮೇಲೆ ಭಾರೀ ಗುತ್ತೇದಾರಿಕೆಗೆ ದಾರಿ ಮಾಡಿಕೊಡಲಿದೆ. ಹಾಗೇ ಅದು ದೇಶದ ಆಹಾರದ ಸ್ವಾವಲಂಬನೆಗೆ ಆ ಮೂಲಕ ಸ್ವಾತಂತ್ರ್ಯಕ್ಕೆ ಮಾರಕವಾಗಲಿದೆ. ಅದು ದೇಶದ ಹಾಗೂ ರಾಜ್ಯದ ಗ್ರಾಹಕರ ತೀವ್ರ ಕೊಳ್ಳೆಗೆ ನೆರವಾಗಲಿದೆ.

ಈ ತಿದ್ದುಪಡಿ ಕಾಯ್ದೆಯ ಇನ್ನೊಂದು ತಿದ್ದುಪಡಿಯನ್ನು ಪ್ರಕರಣ 117 ಕ್ಕೆ ತಂದಿದೆ.

ಅದು, ಮೂಲ ಅಧಿನಿಯಮದ 117ನೆಯ ಪ್ರಕರಣದಲ್ಲಿ

"ಅಥವಾ 8ನೆಯ ಪ್ರಕರಣದ (2)ನೆಯ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿಗಾಗಿ, ಅಥವಾ ಮಾರಾಟಕ್ಕಾಗಿ ಬಳಸುವ ಯಾವುದೇ ವ್ಯಕ್ತಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಬಿಟ್ಟು ಬಿಡತಕ್ಕದ್ದು. ಎಂದು ಹೇಳುತ್ತದೆ.

ಅಂದರೇ, ಈ ಹಿಂದಿನ ಕಾಯ್ದೆಯಂತೆ ಯಾವುದೇ ವ್ಯಕ್ತಿಯು ಮಾರುಕಟ್ಟೆಯಾಚೆಗೆ ವ್ಯವಹಾರದಲ್ಲಿ ತೊಡಗಿರುವವನು, ಮಾರುಕಟ್ಟೆ ನಿಯಮದಂತೆ ನಡೆದುಕೊಳ್ಳಬೇಕು. ಅವನು ಎಪಿಎಂಸಿ ಗಳಿಂದ ಲೈಸೆನ್ಸ್ ಹೊಂದಿರಬೇಕು. ವ್ಯವಹಾರದ ಕಮಿಷನ್ ಅನ್ನು ಮಾರುಕಟ್ಟೆ ಸಮಿತಿಗೆ ಕ್ರಮಬದ್ಧವಾಗಿ ನೀಡಬೇಕು. ನಿಯಮ ಮೀರಿ ರೈತರ ಜೊತೆ ವ್ಯವಹರಿಸ ಬಾರದು. ಖರೀದಿಸಿದ ಮರುದಿನದೊಳಗೆ ಹಣವನ್ನು ರೈತರಿಗೆ ಪಾವತಿಸಬೇಕು. ಮುಂತಾಗಿ ನಿಬಂಧನೆಗಳಿದ್ದವು.

ಮಾತ್ರವಲ್ಲಾ, ಅಂತಹ ನಿಯಮಗಳನ್ನು ಮೀರಿದ/ಉಲ್ಲಂಘಿಸಿದ ವ್ಯಕ್ತಿಯು ಪ್ರಕರಣ 117 ರ ಕಾನೂನಿನಂತೆ ದಂಡನೆಗೊಳಗಾಗುತ್ತಿದ್ದನು. ಅದರಂತೆ ಆರು ತಿಂಗಳ ಸಜಾ ಇಲ್ಲವೇ, 5,000 ರೂಗಳ ದಂಡ ಇಲ್ಲವೇ ಈ ಎರಡನ್ನು ವಿಧಿಸಿ ಆತನು ದಂಡಿಸಲ್ಪಡುತ್ತಿದ್ದನು

ಈಗ ಈ ತಿದ್ದುಪಡಿಯು ವರ್ತಕರ ಇಂತಹ ನಿಯಮ ಉಲ್ಲಂಘನೆಯ ದಂಡನೆಯನ್ನು, ಕೇವಲ ಮಾರು ಕಟ್ಟೆ ಪ್ರಾಂಗಣ, ಉಪ ಪ್ರಾಂಗಣ ಮತ್ತು ಉಪ ಮಾರು ಕಟ್ಟೆಯ ಪ್ರಾಂಗಣಗಳ ವ್ಯವಹಾರಕ್ಕೆ ಸೀಮಿತ ಗೊಳಿಸುತ್ತದೆ.

ಹೀಗಾಗಿ, ಇವುಗಳಾಚೆ ಮುಕ್ತ ವ್ಯವಹಾರ ನಡೆಸುವ ಯಾವುದೇ ವ್ಯಕ್ತಿಯು ಈ ಕಾಯ್ದೆ ವ್ಯಾಪ್ತಿಗೊಳಪಡಲಾರ ಮಾತ್ರವಲ್ಲಾ, ದಂಡನೆಗೂ ಒಳಪಡಲಾರ.

ಈ ರೀತಿಯ ದಂಡನೆ ಇಲ್ಲದ ವ್ಯವಹಾರ ಈ ತಿದ್ದುಪಡಿ ಕಾಯ್ದೆ ಪೂರ್ವದಲ್ಲಿ ಅನಧಿಕೃತವಾಗಿ ಬಹುತೇಕ ಕಡೆ ಜಾರಿಯಲ್ಲಿತ್ತು. ಅದರಿಂದಾಗಿ ರಾಜ್ಯದಾದ್ಯಂತ ಈ ವರ್ತಕರು ಹಾಗೂ ಕಾರ್ಪೋರೇಟ್ ಕಂಪನಿಗಳ ಶೋಷಣೆಗೆ ಮೆಕ್ಕೆಜೋಳ, ಹತ್ತಿ, ಮೆಣಸಿನಕಾಯಿ, ಭತ್ತ, ಶೇಂಗಾ, ಮತ್ತಿತರೆ ಕೃಷಿ ಉತ್ಪನ್ನಗಳನ್ನು ಬೆಳೆದ ಲಕ್ಷಾಂತರ ರೈತರು ತುತ್ತಾಗಿದ್ದಾರೆ. ನಿಯಮಗಳನ್ನು ಮೀರಿ, ಅಂದರೆ ಒಪ್ಪಂದದಂತೆ ಬೆಲೆ ನೀಡದೆ ವಂಚಿಸಿರುವುದು ಮತ್ತು ಮಾರಾಟದ ಉತ್ಪನ್ನಗಳ ಹಣ ನೀಡದೆ ಪರಾರಿಯಾಗಿರುವುದು ಇದೆ. ಹೀಗೆ ರೈತರು ಈ ವರ್ತಕರ ಲೂಟಿಗೊಳಗಾಗಿರುವುದು ಇತಿಹಾಸವಾಗಿದೆ.

ಆದರೇ, ಅಲ್ಲಲ್ಲಿ ರೈತರು ಈ ಕಾಯ್ದೆಯನ್ನು ಬಳಸುವ ಮೂಲಕ ಲೂಟಿಯ ವಿರುದ್ಧ ನಿಂತಿದ್ದಾರೆ. ಮಾತ್ರವಲ್ಲಾ, ಅದನ್ನು ಬಳಸಿ ಅಲ್ಲಲ್ಲಿ ಸ್ವಲ್ಪ ಪರಿಹಾರಗಳನ್ನು ಪಡೆದಿದ್ದಾರೆ. ಈಗಲೂ ಇಂತಹ ವಂಚನೆಯ ವಿರುದ್ಧದ ನೂರಾರು ಕ್ರಿಮಿನಲ್ ದಾವೆಗಳು ರಾಜ್ಯದಾದ್ಯಂತ ಬಹುತೇಕ ಜಿಲ್ಲೆಗಳ ನ್ಯಾಯಾಲಯಗಳಲ್ಲಿವೆ.

ಈಗ ಈ ತಿದ್ದುಪಡಿಯು, ತಮ್ಮನ್ನು ಲೂಟಿಗೆ ಅಥವಾ ಶೋಷಣೆಗೊಳಪಡಿಸುವ ವರ್ತಕರಿಂದ ನ್ಯಾಯ ಪಡೆಯಲು ರೈತರ ಜೊತೆ ಇದ್ದ ಈ ಅಸ್ತ್ರವನ್ನು ದುರ್ಬಲಗೊಳಿಸಿದೆ.

ಹೀಗಾಗಿ, ಈ ಕಾಯ್ದೆಯು ರೈತರಿಗಲ್ಲಾ, ಬದಲಿಗೆ, ಗ್ರಾಮೀಣ ಶ್ರೀಮಂತರಿಗೆ, ದೊಡ್ಡ ವರ್ತಕರಿಗೆ ಮುಖ್ಯವಾಗಿ, ಲೂಟಿಕೋರ ಕಾರ್ಪೋರೇಟ್ ಕಂಪನಿಗಳಿಗೆ ವರದಾನವಾಗಿದೆ. ಇದರಿಂದ ದೇಶದ ಆಹಾರದ ಸ್ವಾವಲಂಬನೆ ಗಂಭೀರ ಅಪಾಯಕ್ಕೀಡಾಗಲಿದೆ. ಕೋಟ್ಯಾಂತರ ಕುಟುಂಬಗಳ ಆದಾಯವು ಶೋಷಣೆಯಿಂದ ಮತ್ತು ಉದ್ಯೋಗ ಕಳೆದುಕೊಳ್ಳುವವರಿಂದ ತೀವ್ರವಾಗಿ ಕುಸಿಯಲಿದೆ. ಇದರಿಂದ ರಾಜ್ಯ ಮತ್ತು ದೇಶ ಮತ್ತಷ್ಟು ಆಳವಾದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಲಿದೆ. ಗ್ರಾಹಕ ಮಾರುಕಟ್ಟೆ ತೀವ್ರ ಕೊಳ್ಳೆಗೆ ಒಳಗಾಗಲಿದೆ.

ಆದ್ದರಿಂದ ಈ ತಿದ್ದುಪಡಿ ಕಾಯ್ದೆಯನ್ನು ತುರ್ತಾಗಿ ವಾಪಾಸು ಪಡೆಯುವಂತೆ ಒತ್ತಡ ಹೇರುವುದು ಅಗತ್ಯವಾಗಿದೆ. ■

ಶತಮಾನೋತ್ಸವ ಲೇಖನ ಮಾಲೆ-27

ಪುನ್ನಪ್ರ-ವಯಲಾರ್ ವೀರಗಾಥೆ

ಕತ್ತದ ಉದ್ದಿಮೆ ಕಾರ್ಮಿಕರು ಅವರ ಮಾಲೀಕರ ವಿರುದ್ಧ, ಮತ್ತು ತಿರುವಾಂಕೂರಿನ ದಿವಾನರ ಸರ್ವಾಧಿಕಾರೀ ಆಳ್ವಿಕೆಯ ವಿರುದ್ಧ ಹಾಗೂ ಜವಾಬ್ದಾರಿಯುತ ಸರ್ಕಾರಕ್ಕಾಗಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ 1946ರಿಂದ ನಡೆಸಿದ ವೀರೋಚಿತ ಹೋರಾಟದ ಗಾಥೆಯಿದು. ಅಳಪುಜಾ ಮತ್ತು ಸುತ್ತಲ ಪ್ರದೇಶಗಳಲ್ಲಿನ ಕಾರ್ಮಿಕ ವರ್ಗದ ಕಟ್ಟಾಳುಗಳು ತಿರುವಾಂಕೂರು ಈ ಹಿಂದೆಂದೂ ಕಂಡಿರದಂತಹ ಧೀರತನವನ್ನು ಪ್ರದರ್ಶಿಸಿದರು. ಈ ಅಸಮಾನ ಕದನದಲ್ಲಿ, ಕಾರ್ಮಿಕ ವರ್ಗದ ಸ್ವಯಂಸೇವಕರು ಅಳಪುಜಾ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ತಮ್ಮ ಒಡ್ಡೊಡ್ಡಾದ ಆಯುಧಗಳೊಂದಿಗೆ ಮಿಲಿಟರಿ ಮತ್ತು ಪೋಲಿಸರು ಹಾಗೂ ತಿರುವಾಂಕೂರು ಸರ್ಕಾರದ ಕುಮ್ಮಕ್ಕು ಪಡೆದ ಸಮಾಜಘಾತುಕ ಶಕ್ತಿಗಳ ವಿರುದ್ಧ ಹೋರಾಡಿದರು. ಇದರಲ್ಲಿ ಕಾರ್ಮಿಕ ವರ್ಗ ಸೋಲುಂಡರೂ ಕೂಡ, ರಾಜ್ಯದ ಇಡೀ ರಾಜಕೀಯ ವಾತಾವರಣ ಸಂಪೂರ್ಣ ಬದಲಾಯಿತು. ಈ ಹೋರಾಟದಿಂದ ಎದ್ದುಬಂದ ಘೋಷಣೆ: 'ವಯಲಾರಿನ ರಕ್ತ ನಮ್ಮ ರಕ್ತ' ಒಂದು ವರ್ಷದ ಒಳಗೇ, ಜನರ ರಾಜಕೀಯ ಬೇಡಿಕೆಗಳನ್ನು ಒಪ್ಪಿರುವುದಾಗಿ ಮಹಾರಾಜ ಘೋಷಣೆ ಮಾಡಿದ



ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಪುನ್ನಪ್ರ ಮತ್ತು ವಯಲಾರ್ ಕೇರಳದ ಅಲೆಪ್ಪಿ(ಅಲಪುಜಾ) ಜಿಲ್ಲೆಯ ಎರಡು ಹಳ್ಳಿಗಳು. ಪುನ್ನಪ್ರ ಮತ್ತು ವಯಲಾರ್ ಹೋರಾಟವು ಭೂಮಾಲಕರ ಮಧ್ಯಯುಗೀನ ದಬ್ಬಾಳಿಕೆಯ ವಿರುದ್ಧ ರೈತರು ಮತ್ತು ಕೃಷಿ ಕಾರ್ಮಿಕರ ಪ್ರತಿರೋಧದ ಚಳುವಳಿ, ಕತ್ತದ ಉದ್ದಿಮೆ ಕಾರ್ಮಿಕರು ಅವರ ಮಾಲೀಕರ ವಿರುದ್ಧ, ಮತ್ತು ತಿರುವಾಂಕೂರಿನ ದಿವಾನರ ಸರ್ವಾಧಿಕಾರೀ ಆಳ್ವಿಕೆಯ ವಿರುದ್ಧ ಹಾಗೂ ಜವಾಬ್ದಾರಿಯುತ ಸರ್ಕಾರಕ್ಕಾಗಿ ನಡೆದ ವೀರೋಚಿತ ಹೋರಾಟದ ಕತೆ. ಚಳುವಳಿ ಪ್ರಾರಂಭವಾಗಿದ್ದು ಅಕ್ಟೋಬರ್ 1946ರಲ್ಲಿ.

1938ರಲ್ಲಿ ತಿರುವಾಂಕೂರಿನಲ್ಲಿ ನಡೆದ ಮೊದಲ ರಾಜಕೀಯ ಸಾರ್ವತ್ರಿಕ ಮುಷ್ಕರದ ಪ್ರಬಲ ಹೋರಾಟದ ಕೇಂದ್ರಗಳಾಗಿದ್ದ ಆ ಜಿಲ್ಲೆ ಮತ್ತು ಆ ಎರಡು ಹಳ್ಳಿಗಳು 1946ರಲ್ಲಿ ಮತ್ತೆ ಮಹಾರಾಜ ಮತ್ತು ಅವನ ದಿವಾನನ ನಿರಂಕುಶಾಧಿಕಾರದ ವಿರುದ್ಧ ಪ್ರಮುಖ ಹೋರಾಟದ ಕೇಂದ್ರಗಳಾದವು. ಅಲ್ಲಿಯ ಸಮರಶೀಲ ಕಾರ್ಮಿಕರು ಮತ್ತು ಸಶಸ್ತ್ರ ಸೇನೆಯ ನಡುವಿನ ಯೋಜಿತ ಯುದ್ಧಗಳಿಂದಾಗಿ ಈ ಎರಡು ಹಳ್ಳಿಗಳು ಎಲ್ಲರ ಗಮನವನ್ನು ಸೆಳೆದಿದ್ದವು. ಅಲ್ಲಿಯ ಕಾರ್ಮಿಕರ ಬಳಿ ಯಾವುದೇ ಶಸ್ತ್ರಗಳಿರಲಿಲ್ಲ, ಬದಲಿಗೆ ಒರಟಾದ ಮರದ ಬಾಣಗಳನ್ನು ಹೊಂದಿದ್ದರು.

ಎರಡನೇ ವಿಶ್ವ ಮಹಾ ಯುದ್ಧದ ಕೊನೆಯಲ್ಲಿ ಅದರ ಹಿಂದೆಯೇ ವ್ಯಾಪಕ ನಿರುದ್ಯೋಗ ಮತ್ತು ಹಸಿವಿನಿಂದ ಸಾಯುವ ಸ್ಥಿತಿ ಬಂತು. ಆಹಾರ, ಅಕ್ಕಿ, ಬಟ್ಟೆ, ಸಕ್ಕರೆ, ಸೀಮೆಎಣ್ಣೆ ಮುಂತಾವುಗಳ ತೀವ್ರ ಅಭಾವ ಇತ್ತು, ಕಾಳಸಂತೆಯಲ್ಲಿ ಮಾತ್ರ ಅವು ದೊರೆಯುತ್ತಿದ್ದವು. ಈ ಪ್ರದೇಶದ ಭೂಮಾಲಕರಿಂದ ಗೇಣಿದಾರರು ಮತ್ತು ಕೃಷಿ ಕಾರ್ಮಿಕರ ಮೇಲೆ ಬಡಿತ ಮತ್ತು ಕಿರುಕುಳಗಳು, ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಮನೆಗಳ ಧ್ವಂಸಗಳು ನಡೆದವು. ಜೀತದ ಗುಲಾಮರಂತೆ ಅವರನ್ನು ನೋಡಿಕೊಂಡರು. ಕೃಷಿ ಕಾರ್ಮಿಕ ಯುವತಿಯೊಬ್ಬಳು ಭೂಮಾಲಕನ ಲೈಂಗಿಕ ತೃಷೆ ತಣಿಸಲು ನಿರಾಕರಿಸಿದ್ದಕ್ಕೆ ಅವಳನ್ನು ಹಿಡಿದು ಹಗ್ಗದಿಂದ ಕಟ್ಟಿ ಅವನ ಮನೆಯ ತನಕ ಎಳೆದುಕೊಂಡು ಹೋಗಿ ಅಲ್ಲಿ ಅವಳ ಮೇಲೆ ಅತ್ಯಾಚಾರ ಮಾಡಿ, ಹಿಂಸಿಸಿ ಕುತ್ತಿಗೆಯವರೆಗೂ ಹೂತುಹಾಕಿ ತಲೆಗೆ ಒದ್ದಿದ್ದ.

ಆ ಪ್ರದೇಶದ ಜನರು ಮುಖ್ಯವಾಗಿ ಕಾರ್ಮಿಕರು, ಕೃಷಿ ಕೂಲಿಗಾರರು ಮತ್ತು ಗೇಣಿದಾರರು ಕತ್ತದ ಕಾರ್ಮಿಕರ ಸಂಘ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸಂಘಟಿತರಾಗಿ ಪ್ರತಿರೋಧದ ಚಳುವಳಿಗೆ ಸಿದ್ಧರಾದರು. ಇತರ ಕಾರ್ಮಿಕರನ್ನೂ ಸಂಘಟಿಸಲಾಯಿತು. 1944-45ರಲ್ಲಿ ಅದಾಗಲೇ ಕೃಷಿ ಕಾರ್ಮಿಕರು ಚೇರ್ತಾಲಾ ತಾಲೂಕಿನಾದ್ಯಂತ ವಾರ್ಡ್ ಸಮಿತಿಗಳನ್ನು ರಚಿಸಿಕೊಂಡಿದ್ದರು.



ಪುನ್ನಪ್ರ ವಯಲಾರ್ ಹೋರಾಟಗಾರ

ತಿರುವಾಂಕೂರಿನ ರಾಜ ಮತ್ತು ದಿವಾನರು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ತಿರಸ್ಕರಿಸಿದ್ದಷ್ಟೇ ಅಲ್ಲ, ಸ್ವತಂತ್ರ ಭಾರತದ ಭಾಗವಾಗದೆ ಸ್ವತಂತ್ರ ರಾಜ್ಯವಾಗಿ ಉಳಿಯುವುದಾಗಿ ಘೋಷಿಸಿದರು. ಆಗ ಜವಾಬ್ದಾರಿ ಸರ್ಕಾರಕ್ಕಾಗಿನ ಹೋರಾಟವು ಈ ಹೋರಾಟದ ಜತೆ ಬೆರೆತು ಸ್ವತಂತ್ರ ತಿರುವಾಂಕೂರಿನ ವಿರುದ್ಧದ ಹೋರಾಟವಾಗಿ ತಿರುಗಿತು.

ತಿರುವಾಂಕೂರು ಆಡಳಿತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ವಿರೋಧದ ನಡುವೆ ಇದ್ದ ಮತ್ತೊಂದು ವಿವಾದ "ಅಮೆರಿಕಾ ಮಾದರಿ" ಎಂಬುದಾಗಿತ್ತು. ಒಬ್ಬ ಕಾರ್ಯಕಾರಿ ಅಧ್ಯಕ್ಷ ಇರುವ ಅಮೆರಿಕಾ ಮಾದರಿಯನ್ನು ದಿವಾನ ಬೆಂಬಲಿಸಿದ. ದಿವಾನನ ಈ ಪ್ರಸ್ತಾಪವು ಪುನ್ನಪ್ರ-ವಯಲಾರ್ ಸಮರಶೀಲ ಕಾರ್ಮಿಕ ವರ್ಗದಿಂದ ತೀವ್ರ ಪ್ರತಿರೋಧಕ್ಕೆ ಕಾರಣವಾಯಿತು. ಅಲೆಪ್ಪಿಯ ಸಮರಶೀಲ ಕಾರ್ಮಿಕ ವರ್ಗ ಮತ್ತು ಕಮ್ಯುನಿಸ್ಟ್ ಪಕ್ಷವು 'ಅಮೆರಿಕಾ ಮಾದರಿ ಅರಬ್ಬೀ ಸಮುದ್ರಕ್ಕೆ' ಎಂಬ ಘೋಷಣೆ ನೀಡಿತು.

1945ರ ಜುಲೈ-ಆಗಸ್ಟ್‌ನಲ್ಲಿ, ಅಲೆಪ್ಪಿ, ಚೇರ್ತಾಲಾ ಹಾಗೂ ಮುಹಮ್ಮಾ ದ ಕಾರ್ಮಿಕರು ನ್ಯಾಯ ಬೆಲೆಯಲ್ಲಿ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಿ ಎಂದು ಬೇಡಿಕೆ ಮುಂದಿಟ್ಟು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು. ಆರಂಭದಲ್ಲಿ ತಿರುವಾಂಕೂರು ರಾಜ್ಯ ಸರ್ಕಾರವು ಅವುಗಳ ವಿತರಣೆಗೆ ಒಂದು ಕಾರ್ಯಪಡೆ ರಚಿಸುವುದಾಗಿ ಒಪ್ಪಿತು. ಆದರೆ ಯಾವಾಗ ಕಾರ್ಮಿಕರು ನಿರುದ್ಯೋಗ ಹಾಗೂ ಹಸಿವಿನ ಸಾವಿನ ವಿರುದ್ಧ ಹೋರಾಟ ಮಾಡಿದರೋ ಆ ಚಳುವಳಿಯನ್ನು ಬಗ್ಗುಬಡಿಯಲು ಸರ್ಕಾರ ಮುಂದಾಯಿತು. ಸೈನ್ಯಾಡಳಿತ ಘೋಷಿಸಲಾಯಿತು. ಪೋಲಿಸರನ್ನು ಮನಸೋಯಿಚ್ಛೆ ಏನು ಮಾಡಲೂ ಹರಿಬಿಡಲಾಯಿತು. ಕೊಯಿಲಾನ್, ಅಲೆಪ್ಪಿ, ಕೊಟ್ಟಾಯಂ, ಪುನಲೂರು ಮುಂತಾದೆಡೆ ರಾಜ್ಯದ ಸೇನೆ ಮತ್ತು ಸಶಸ್ತ್ರ ಪೋಲಿಸ್ ಪಡೆಗಳನ್ನು ಸನ್ನದ್ಧಗೊಳಿಸಲಾಯಿತು.

ಎಲ್ಲಾ ಪ್ರತಿಭಟನೆಗಳು ಮತ್ತು ಮುಷ್ಕರಗಳನ್ನು ನಿಷೇಧಿಸಲಾಯಿತು. ಪೋಲಿಸರ ಪಾಶವೀಕೃತ್ಯ ಮತ್ತು ಭಯೋತ್ಪಾದಕ ವರ್ತನೆಗಳ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸದಂತೆ ಆದೇಶ ನೀಡಲಾಯಿತು. ಪೋಲಿಸ್ ಮತ್ತು ಗೂಂಡಾ ದಾಳಿಗಳು ಅತಿರೇಕವಾದವು. ಕಾರ್ಮಿಕ ಕಛೇರಿಗಳ ಮೇಲೆ ದಾಳಿಗಳಾದವು, ಅವನ್ನು ಸುಟ್ಟು ಧ್ವಂಸ ಮಾಡಲಾಯಿತು. ಚಳುವಳಿಯ ಮುಖಂಡರನ್ನು ಬಂಧಿಸಿ ಜೈಲಿಗೆ ತಳ್ಳಲಾಯಿತು. ಈ ಭಯೋತ್ಪಾದಕ ದಾಳಿಗಳಲ್ಲಿ ಭೂಮಾಲಕರು ಸಕ್ರಿಯ ಪಾತ್ರ ವಹಿಸಿದ್ದರು.

ಅಖಿಲ ತಿರುವಾಂಕೂರು ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು, 1946 ಅಕ್ಟೋಬರ್ 22 ರಂದು ಮುಷ್ಕರ ಪ್ರಾರಂಭವಾಯಿತು. ಭಾರಿ ಸಂಖ್ಯೆಯಲ್ಲಿ ಕಾರ್ಮಿಕರು ತಮ್ಮ ಪ್ರತಿಭಟನೆಗಳನ್ನು ಶುರುಮಾಡಿದರು ಮತ್ತು ವಿಮೋಚನೆಗಾಗಿ ಒತ್ತಾಯಿಸಿ ಪುನ್ನಪ್ರದಲ್ಲಿನ ಸಶ್ಯಸ್ತ್ರ ಪೋಲಿಸ್ ಕ್ಯಾಂಪುಗಳತ್ತ ಮೆರವಣಿಗೆ ಹೋದರು. ಕ್ಯಾಂಪಿನ ಮೇಲಧಿಕಾರಿ ಪ್ರತಿಭಟನಾಕಾರರ ಮೇಲೆ ಗುಂಡಿನ ಮಳೆಗರೆಯಲು ಆದೇಶ ನೀಡಿದ. ಹಲವಾರು ಪ್ರತಿಭಟನಾಕಾರರು ಪೋಲಿಸರ ಗುಂಡುಗಳಿಂದ ಹತರಾದರು, ಅದೇ ಸಮಯದಲ್ಲಿ ಆ ಅಧಿಕಾರಿ ಮತ್ತವನ ಐದು ಜನರು ಆ ಕಾದಾಟದಲ್ಲಿ ತಮ್ಮ ಜೀವ ಕಳೆದುಕೊಂಡರು. ಪುನ್ನಪ್ರ ಕಾದಾಟವಾದ 24 ಗಂಟೆಯೊಳಗೆ, ಅಂಬಳಪುಜ ಮತ್ತು ಚೇರ್ತಾಲಾ ತಾಲೂಕುಗಳನ್ನು ಸೇನೆಗೆ ವಹಿಸಲಾಯಿತು. ಹಳ್ಳಿಗಳಲ್ಲಿ ಜನರ ಬೇಟೆಯಾಯಿತು. ಜನರನ್ನು ಹಿಡಿದು ಕೊಂದರು ಅಥವಾ ಬಡಿದು ಕೊಂದರು. ಪೋಲಿಸರ ದಾಳಿಗಳನ್ನು ಎದುರಿಸಲು ವಯಲಾರಿನಲ್ಲಿ ಒಂದು ಶಿಬಿರವನ್ನು ಏರ್ಪಡಿಸಲಾಗಿತ್ತು. 1946 ಅಕ್ಟೋಬರ್ 27ರ ಮಧ್ಯಾಹ್ನ ಶಿಬಿರದಲ್ಲಿದ್ದವರು ಊಟ ಮಾಡುತ್ತಿದ್ದಾಗ ಹಠಾತ್ತನೆ ಸೇನೆಯು ಅವರನ್ನು ಸುತ್ತುವರಿಯಿತು, ಮನಬಂದಂತೆ ಗೋಲಿಬಾರ್ ಮಾಡಿ ಹಲವರನ್ನು ಹತ್ಯೆಮಾಡಿತು(ಇವತ್ತಿವರೆಗೂ ಎಷ್ಟು ಜನ ಎಂಬುದು ಪತ್ತೆಯಾಗಲಿಲ್ಲ). ಗುಂಡುಮದ್ದುಗಳು ಇರುವ ತನಕವೂ ಗೋಲಿಬಾರ್ ನಡೆಯಿತು, ನಂತರವೂ ಬದಕುಳಿದವರನ್ನು ಬಂದೂಕಿನ ತುದಿಯ ಬಾಯೊನೆಟ್‌ಗಳಿಂದ ಸಾಯಿಸಿದರು.

ಜನ ಹೇಳತೀರದ ಪೋಲಿಸ್ ಮತ್ತು ಮಿಲಿಟರಿ ದೌರ್ಜನ್ಯಗಳಿಗೆ ಒಳಗಾದರು. ಅನೇಕರು ತಮ್ಮ ಮನೆ ಮಾರುಗಳನ್ನು ತೊರೆದು ತಿರುವಾಂಕೂರಿನ ಹೊರಗಡೆ ಉಳಿಯಬೇಕಾಯಿತು. ಜಿಲ್ಲೆಯಾದ್ಯಂತ ನಡೆದ ಈ ಕಾರ್ಯಾಚರಣೆಯಲ್ಲಿ ನೂರಾರು ಸಮರಶೀಲ ಕಾರ್ಮಿಕರು ಪ್ರಾಣ ತೆತ್ತರು, ಬಹಳ ಜನ ಗಾಯಗೊಂಡರು; ನೂರಾರು ಮನೆಗಳು ಸುಟ್ಟು ಭಸ್ಮವಾದವು, ಇಡೀ ಪ್ರದೇಶ ಮರುಭೂಮಿಯಂತಾಯಿತು. ಅಲೆಪ್ಪಿಯ ಕಮ್ಯುನಿಸ್ಟರೆಲ್ಲರನ್ನು ಹೊಸಕಿ ಹಾಕಿಬಿಟ್ಟೆವೆಂದು ಸರ್ವಶಕ್ತ ದಿವಾನ ಕೊಚ್ಚಿಕೊಂಡ. ಈ ಎಲ್ಲಾ ದಾರುಣ ಸಂಗತಿಗಳ ನಡುವೆಯೂ, ಅಳಪುಜಾ ಮತ್ತು ಸುತ್ತಲ ಪ್ರದೇಶಗಳಲ್ಲಿನ ಕಾರ್ಮಿಕ ವರ್ಗದ ಕಟ್ಟಾಳುಗಳ ತಿರುವಾಂಕೂರು ಈ ಹಿಂದೆಂದೂ ಕಂಡಿರದಂತಹ ಧೀರತನವನ್ನು ಪ್ರದರ್ಶಿಸಿದರು.

ಈ ಅಸಮಾನ ಕದನದಲ್ಲಿ, ಕಾರ್ಮಿಕ ವರ್ಗದ ಸ್ವಯಂಸೇವಕರು ಅಳಪುಜಾ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ತಮ್ಮ ಒಡ್ಡೊಡ್ಡಾದ ಆಯುಧಗಳೊಂದಿಗೆ ಮಿಲಿಟರಿ ಮತ್ತು ಪೋಲಿಸರು ಹಾಗೂ ತಿರುವಾಂಕೂರು ಸರ್ಕಾರದ ಕುಮ್ಮಕ್ಕು ಪಡೆದ ಸಮಾಜಘಾತುಕ ಶಕ್ತಿಗಳ ವಿರುದ್ಧ ಹೋರಾಡಿದರು. ವಸ್ತುಶಃ ಯಾವ ಶಸ್ತ್ರಾಸ್ತ್ರಗಳಿಲ್ಲದೇ ಸರ್ಕಾರದ ದಾಳಿಗಳನ್ನು ಎದುರಿಸಿದ ಹೆಗ್ಗಳಿಕೆ ತಿರುವಾಂಕೂರಿನ ಕಮ್ಯುನಿಸ್ಟ್ ಪಕ್ಷದ ಮುಖಂಡರಿಗೆ ಸಲ್ಲುತ್ತದೆ.

ಕಾರ್ಮಿಕ ವರ್ಗ ಸೋಲುಂಡರೂ ಕೂಡ, ರಾಜ್ಯದ ಇಡೀ ರಾಜಕೀಯ ವಾತಾವರಣ ಸಂಪೂರ್ಣ ಬದಲಾಗಿತ್ತು. ಈ ಹೋರಾಟದಿಂದ ಎದ್ದುಬಂದ ಘೋಷಣೆ: 'ವಯಲಾರಿನ ರಕ್ತ ನಮ್ಮ ರಕ್ತ' ಮತ್ತು ಅವರ ತ್ಯಾಗಗಳು ವ್ಯರ್ಥವಾಗಲಿಲ್ಲ.

ಕಾರ್ಮಿಕ ವರ್ಗ ಮಾತ್ರವೇ ಆ ಪ್ರತಿರೋಧದ ವಿರುದ್ಧ ತನ್ನ ವ್ಯವಹಾರ ಕೌಶಲ್ಯವನ್ನು ಮತ್ತು ಧೀರತನವನ್ನು ಪ್ರದರ್ಶನ ಮಾಡಿದ್ದರೂ, ವ್ಯಾಪಕ ಜನ ವಿಭಾಗಗಳು ನಿರಂಕುಶ ಪ್ರಭುತ್ವದ ವಿರುದ್ಧ ಸ್ಪಷ್ಟ ನಿಲುವು ತಳೆದಿದ್ದರು. ಆ ಹೋರಾಟವನ್ನು ನಡೆಸಿದ ಅಲೆಪ್ಪಿಯ ಸಂಘಟಿತ ಕಾರ್ಮಿಕ ವರ್ಗ ಮತ್ತು ಕಮ್ಯುನಿಸ್ಟ್ ಪಕ್ಷದ ಬಗ್ಗೆ ತಿರುವಾಂಕೂರಿನ ಮತ್ತು ಭಾರತದಾದ್ಯಂತ ಪ್ರಜಾಸತ್ತಾತ್ಮಕ ಚಳುವಳಿಯ ಸಹಾನುಭೂತಿ ಮತ್ತು ಸದಾಶಯಗಳಿದ್ದವು. ತಿರುವಾಂಕೂರಿನಲ್ಲಿ, ಎಲ್ಲಾ ಜನರೂ(ಮೇಲ್ಜಾತಿಯ ಸ್ವಲ್ಪ ಜನರನ್ನು ಹೊರತುಪಡಿಸಿ), ದಿವಾನರ ಆಳ್ವಿಕೆಯನ್ನು ಸಂಪೂರ್ಣವಾಗಿ ವಿರೋಧಿಸಿದರು. ಇದರಲ್ಲಿ ಸವರ್ಣೀಯರಲ್ಲದ ಹಿಂದೂಗಳ ದೊಡ್ಡ ಸಮುದಾಯ, ಗಣನೀಯ ಸಂಖ್ಯೆಯ ಅಲ್ಪಸಂಖ್ಯಾತ ಕ್ರಿಶ್ಚಿಯನ್ನರು ಹಾಗೂ ಅಲ್ಪಸಂಖ್ಯಾತ ಮುಸ್ಲಿಮರ ಸ್ವಲ್ಪ ಜನರೂ ಇದ್ದರು. ಹೀಗಾಗಿ ಈ ಹೋರಾಟವು ಸ್ವಾತಂತ್ರ್ಯಾನಂತರ ಭಾರತದ ಐಕ್ಯತೆಯನ್ನು ಕಾಪಾಡಲು ಭಾರತೀಯ ಜನರು ನಡೆಸಿದ ಹೋರಾಟದ ಅವಿಭಾಜ್ಯ ಅಂಗವಾಗಿತ್ತು. ಈ ಹೋರಾಟ ನಡೆದ ಒಂದು ವರ್ಷದ ಒಳಗೇ, 'ಕಮ್ಯುನಿಸ್ಟ್ ಪಕ್ಷದ ಬಂಡಾಯ'ವನ್ನು ಮಟ್ಟಹಾಕಿದೆ ಎಂದು ಬೀಗುತ್ತಿದ್ದ ದಿವಾನ ದೇಶದಿಂದ ಮಾನ-ಮರ್ಯಾದೆ ಕಳಕೊಂಡು ಹೊರ ಹೋಗಬೇಕಾಯಿತು. ಜನರ ರಾಜಕೀಯ ಬೇಡಿಕೆಗಳನ್ನು ಒಪ್ಪಿರುವುದಾಗಿ ಅವನ ನಿರ್ಗಮನದ ನಂತರ ಮಹಾರಾಜ ಘೋಷಣೆ ಮಾಡಿದ. ವಯಸ್ಕ ಮತದಾನದ ಆಧಾರದಲ್ಲಿ ಚುನಾವಣೆಗಳನ್ನು ನಡೆಸಲು ಮತ್ತು ಚುನಾಯಿತ ಶಾಸಕರಿಗೆ ಉತ್ತರದಾಯಿಯಾದ ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಲು ಸಿದ್ಧತೆಗಳಾದವು.

ತಿರುವಾಂಕೂರಿನ ಪುನ್ನಪ್ರ-ವಯಲಾರ್‌ನ ಉಗ್ರ ಪ್ರತಿರೋಧವು ಅಪರೂಪದ ಬೆಳವಣಿಗೆಯಲ್ಲ. ಆ ಅವಧಿಯಲ್ಲಿ ಕೇರಳದ ಉದ್ದಕ್ಕೂ ಬೀಸಿದ ಹಲವಾರು ರೀತಿಯ ಮತ್ತು ಪ್ರಖರ

ಪುಟ 14ಕ್ಕೆ



ಜೈಲಿನಿಂದ ಬಿಡುಗಡೆಯಾಗಿ ಬಂದ ಹೋರಾಟಗಾರರು

‘ಶ್ರಮ ಸುಧಾರಣೆ ‘ಎಂಬ ಪದವನ್ನು ನಮ್ಮ ದೇಶದ ಆಳುವ ಮಂದಿ ನವ-ಉದಾರೀಕರಣ ಧೋರಣೆಗಳನ್ನು ಅನುಸರಿಸಲು ಆರಂಭಿಸಿದಂದಿನಿಂದಲೂ ಕೇಳುತ್ತಿದ್ದೇವೆ. ಆಳುವವರ ಮಟ್ಟಿಗೆ ಇದರ ಅರ್ಥ ಕಾರ್ಮಿಕ ಕಾನೂನುಗಳು ಕೈಗಾರಿಕಾ ಅಭಿವೃದ್ಧಿಗೆ ಒಂದು ದೊಡ್ಡ ಅಡ್ಡಿ. ಆದ್ದರಿಂದ ಅವನ್ನು ‘ಸುಧಾರಿಸ’ಬೇಕು, ಅಂದರೆ ಮಾಲಕರ ಪರವಾಗಿ ಸಡಿಲಗೊಳಸಬೇಕು. ಇದಕ್ಕೆ ದೇಶದ ಕಾರ್ಮಿಕ ಆಂದೋಲನ ಪ್ರತಿರೋಧವನ್ನು ಒಡ್ಡುತ್ತಲೇ ಬಂದಿದೆ. ಆದರೆ ಮೋದಿ ನೇತೃತ್ವದ ಸರಕಾರ ಬಂದ ಮೇಲೆ ಈ ದಿಕ್ಕಿನಲ್ಲಿ ಬಿರುಸಿನ ಪ್ರಯತ್ನಗಳು ಆರಂಭವಾದವು. ಕಾರ್ಮಿಕ ಕಾನೂನುಗಳನ್ನು ತರ್ಕಬದ್ಧಗೊಳಸುವ ಹೆಸರಿನಲ್ಲಿ ಈ ಕಾನೂನುಗಳನ್ನೆಲ್ಲ ನಾಲ್ಕು ಸಂಹಿತೆಗಳಾಗಿ ಮಾಡುವ ಪ್ರಕ್ರಿಯೆಯಲ್ಲಿ ಈಗಿರುವ ಕಾನೂನುಗಳನ್ನು ಮಾಲಕರ ಪರವಾಗಿ ಉದಾರಗೊಳಸುವ ಪ್ರಯತ್ನ ನಡೆದಿದೆ.

ಈ ನಡುವೆ ಕೋವಿಡ್ ಮಹಾಮಾರಿ ಆಳುವ ಮಂದಿಗೆ ವರದಾನವಾಗಿ ಬಂದಂತೆ ಕಾಣುತ್ತಿದೆ. ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಮಹಾಮಾರಿಯನ್ನು ಎದುರಿಸಲು ಹಾಕಿರುವ ಲಾಕ್‌ಡೌನನ್ನು ಜಾರಿಗೊಳಸಿದ ರೀತಿಯಿಂದ ಅರ್ಥವ್ಯವಸ್ಥೆಗೆ ಬಂದಿರುವ ಕುತ್ತನ್ನು ನಿವಾರಿಸಲು ಕಾರ್ಮಿಕ ಕಾನೂನುಗಳು ಅಡ್ಡಿಯಾಗುತ್ತವೆ, ಅವನ್ನು ಕೈಬಿಡಬೇಕು ಎಂದು ನಂಬಿಸುವ ಪ್ರಯತ್ನ ಆರಂಭವಾಗಿದೆ. ಆಳುವ ಪಕ್ಷದ ಪರವಾಗಿ ಉತ್ತರಪ್ರದೇಶ ರಾಜ್ಯಸರಕಾರ ಈ ದಿಕ್ಕಿನಲ್ಲಿ ಮುಂದಡಿಯಿಟ್ಟಿದೆ. ಅದೇ ಪಕ್ಷದ ಮಧ್ಯಪ್ರದೇಶ ಮತ್ತು ಗುಜರಾತ್ ಸರಕಾರಗಳು ಹಿಂಬಾಲಿಸಿವೆ. ಮತ್ತು ಈಗ ಕರ್ನಾಟಕ ಸರಕಾರವೂ ಆ ಸಾಲಿಗೆ ಸೇರುತ್ತಿದೆ.

ಆದರೆ ನಿಜವಾಗಿಯೂ ಇದು ಆರ್ಥಿಕ ಪುನಶ್ಚೇತನ ತರುವ ಕ್ರಮವೇ? ಕಾರ್ಮಿಕ ಕಾನೂನುಗಳು ನಿಜವಾಗಿಯೂ ಆರ್ಥಿಕ ಅಭಿವೃದ್ಧಿಗೆ ಕಂಟಕವಾಗಿವೆಯೇ? ಇಲ್ಲ ಎಂಬುದೇ ವಸ್ತುನಿಷ್ಟವಾಗಿ ವಿಶ್ಲೇಷಿಸುವ ಅರ್ಥಶಾಸ್ತ್ರಜ್ಞರು, ಅಧ್ಯಯನಕಾರರಲ್ಲಿ ಹೆಚ್ಚಿನವರ ಅಭಿಮತ. ಈ ಎರಡು ಪುಟಗಳಲ್ಲಿ ನಮ್ಮ ಓದುಗರಿಗಾಗಿ ಎರಡು ಲೇಖನಗಳನ್ನು ಪ್ರಕಟಿಸುತ್ತಿದ್ದೇವೆ. ಈ ಪುಟದಲ್ಲಿರುವ ಲೇಖನದಲ್ಲಿ ಕೊಲ್ಕತಾದ ಪಶ್ಚಿಮ ಬಂಗಾಲ ನ್ಯಾಯಶಾಸ್ತ್ರಗಳ ರಾಷ್ಟ್ರೀಯ ವಿಶ್ವವಿದ್ಯಾಯದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಸೌರಭ್ ಭಟ್ಟಾಚಾರ್ಜಿಯವರು ಒಂದು ಜಾಗರೂಕತೆಯಿಂದ ನಿರ್ವಹಿಸಬೇಕಾದ ಶ್ರಮ ಸುಧಾರಣೆಗಳನ್ನು, ಸಂಪೂರ್ಣವಾಗಿ ನಿಯಂತ್ರಣರ ಹಿತಗೊಳಸುವುದರೊಂದಿಗೆ ಬೆರೆಸಬಾರದು ಎನ್ನುತ್ತಾರೆ. ಉತ್ತರ ಪ್ರದೇಶ ಸರ್ಕಾರವು ಹೊರಡಿಸಿರುವ ಸುಗ್ರೀವಾಜ್ಞೆ ಮಾಡಿರುವಂತೆ ಕಾರ್ಮಿಕ ಕಾನೂನುಗಳನ್ನು ಸಾರಾಸಗಟು ನಿರಾಕರಿಸುವುದು ಹೂಡಿಕೆಗಳನ್ನು ಹೆಚ್ಚಿಸುವ ಬದಲು ಔದ್ಯೋಗಿಕ ಅಶಾಂತಿ ಮತ್ತು ಪ್ರಭುತ್ವದ ದಬ್ಬಾಳಕೆಯ ಜಾರುದಾರಿಯತ್ತ ಒಯ್ಯಬಹುದು ಎಂದು ಅವರು ಎಚ್ಚರಿಸುತ್ತಾರೆ.

“ಶ್ರಮ ಸುಧಾರಣೆ” ಎಂದರೆ ನಿಯಂತ್ರಣರಹಿತತೆ ಆಗಬಾರದು

ಸೌರಭ್ ಭಟ್ಟಾಚಾರ್ಜಿ ಅನು: ಎನ್.ವಿಜಯಕುಮಾರ್

ಕೋವಿಡ್ 19 ಇಡೀ ದೇಶದ ಮೇಲೆ ಎರಗುತ್ತಿದ್ದಂತೆ, ಅದೊಂದು ಕೇವಲ ಸಾರ್ವಜನಿಕ ಆರೋಗ್ಯ ಇಕ್ಕಟ್ಟನ್ನು ಮಾತ್ರ ಸೃಷ್ಟಿಸಲಿಲ್ಲ. ದೇಶದಾದ್ಯಂತ ಹೇರಲಾದ ಲಾಕ್‌ಡೌನ್‌ನ ಫಲಿತವಾದ ಹಿಂದೆಂದೂ ಕೇಳರಿಯದ ಮಾನವ ದುರಂತವನ್ನೂ ಬಿಚ್ಚಿಟ್ಟಿದೆ. ಬೀದಿಗೆ ಬಿದ್ದ ಕಾರ್ಮಿಕರ ಕ್ರಿಯಾಜಾಲ (SWAN)ದ ಸಮೀಕ್ಷೆಗಳಲ್ಲಿ ತಿಳಿಸಿರುವಂತೆ ದೇಶದ 90% ಕಾರ್ಮಿಕರು ಅನಿಶ್ಚಿತ ಕೆಲಸಗಳಲ್ಲಿ ತೊಡಗಿದ್ದವರಾಗಿದ್ದು, ಲಕ್ಷಾಂತರ ಕಾರ್ಮಿಕರು ಆಹಾರ, ಆಶ್ರಯಗಳಿಲ್ಲದೇ ಬೀದಿಗೆ ತಳ್ಳಲ್ಪಟ್ಟಿದ್ದಾರೆ. ಗಣನೀಯ ಅಪಾಯಗಳ ನಡುವೆಯೂ ಮಹಾನಗರಗಳಿಂದ ದೇಶದ ಒಳನಾಡುಗಳ ತಮ್ಮ ಮನೆಗಳಿಗೆ ತೆರಳಲು ತೀರ್ಮಾನಿಸಿದ ಕಾರ್ಮಿಕರ ಸಾಮೂಹಿಕ ನಿರ್ಗಮನವು ಅವರ ಜೀವನ ನಿರ್ವಹಣೆಯ ಮೇಲೆ ಲಾಕ್‌ಡೌನ್ ಉಂಟುಮಾಡಿದ ಅನಾಹುತಗಳನ್ನು ಅನಾವರಣಗೊಳಿಸಿದೆ.

ಈ ಸಾಮೂಹಿಕ ನಿರ್ಗಮನದಿಂದ ಆಗಬಹುದಾದ ಇನ್ನೊಂದು ಪ್ರಭಾವ ಏನೆಂದರೆ ಲಾಕ್‌ಡೌನ್ ನಂತರ ಈ ಕಾರ್ಮಿಕರ ಮರುಬಳಕೆಯ ಸಾಧ್ಯತೆ. ಇದು ಇನ್ನೊಂದು ಆಯಾಮ. ಹಲವಾರು ರಾಜ್ಯ ಸರ್ಕಾರಗಳು ಈ ಸಮಸ್ಯೆಯ ಪರಿಹಾರಕ್ಕೆ ಜಾರಿಯಲ್ಲಿರುವ ಕಾರ್ಮಿಕ ಕಾನೂನುಗಳನ್ನು ಹಿಂಪಡೆಯುವ ಧಾವಂತದಲ್ಲಿದ್ದಾರೆ ಎಂದು ಗೋಚರಿಸುತ್ತಿದೆ. ತಮ್ಮ ಕಾರ್ಮಿಕ ಕಾನೂನಗಳನ್ನು ಸಡಿಲಗೊಳಿಸುವುದಾಗಿ ಹಲವು ರಾಜ್ಯಗಳು ಈಗಾಗಲೇ ಘೋಷಿಸಿದ್ದು ಉತ್ತರ ಪ್ರದೇಶ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿ ಕೈಗಾರಿಕೆಗಳಿಗೆ ಸುಮಾರಾಗಿ ಎಲ್ಲ ಕಾರ್ಮಿಕ ಕಾನೂನುಗಳಿಂದ ವಿನಾಯ್ತಿ ನೀಡುವ ಒಂದು ಅತ್ಯಂತ ನಾಟಕೀಯ ಹೆಜ್ಜೆಯಿಟ್ಟಿದೆ. ಈ ರೀತಿ ಕಾರ್ಮಿಕರನ್ನು ಬಾಗಿಸುವ ಮೂಲಕ ಕೈಗಾರಿಕೆಗಳು ಲಾಕ್‌ಡೌನ ಪರಿಣಾಮಗಳಿಂದ ಹೊರಬರುವಂತೆ ಮಾಡಲು ಮತ್ತು ಹೂಡಿಕೆಯನ್ನು ಆಕರ್ಷಿಸಲು ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿದೆ. ಭಾರತದಲ್ಲಿ ಕೆಲ ಕಠಿಣ ಕಾರ್ಮಿಕ ಕಾನೂನುಗಳನ್ನು ಸರಳೀಕರಿಸುವ ಪ್ರಕ್ರಿಯೆಗಳು ತಡವಾಗಿವೆ ಎಂದುಕೊಂಡರೂ ಉತ್ತರ ಪ್ರದೇಶ ಸರ್ಕಾರದ ಈ ಸುಗ್ರೀವಾಜ್ಞೆಯ ಬಗ್ಗೆ ಒಂದು ಎಚ್ಚರಿಕೆಯನ್ನೂ ಧ್ವನಿಸಬೇಕಾಗಿದೆ. ಭಾರತದಲ್ಲಿ ಕಾರ್ಮಿಕ ಕಾನೂನಿನ ನಿಬಂಧನೆಗಳು ಹೆಚ್ಚು ಗೊಂದಲಕಾರಿಯಾಗಿವೆ ಮತ್ತು ಕಾರ್ಮಿಕರಿಗಾಗಲಿ, ಮಾಲೀಕರಿಗಾಗಲಿ ಸಹಕಾರಿಯಾಗಿಲ್ಲ, ಬದಲಾಗಿ “ಲೈಸೆನ್ಸ್-ಇನ್ಸಪೆಕ್ಟರ್ ರಾಜ್” ವ್ಯವಸ್ಥೆಯನ್ನು ಬಲಪಡಿಸಿವೆ ಎಂಬ ಕುರಿತು ಹೆಚ್ಚಿನ ಸಂಶಯಗಳಿರಲಿಕ್ಕಿಲ್ಲ.

ಭಾರತದಲ್ಲಿ ಶ್ರಮ ನಿಯಂತ್ರಣ, ಒಂದೆಡೆಯಲ್ಲಿ 40 ಕ್ಕೂ ಹೆಚ್ಚು ಕೇಂದ್ರೀಯ ಕಾನೂನುಗಳು ಮತ್ತು ಜತೆಗೆ ರಾಜ್ಯಗಳ ಕಾನೂನುಗಳಿಂದ ಅತಿ-ನಿಯಂತ್ರಣಕ್ಕೊಳಗಾಗಿದ್ದರೆ, ಇನ್ನೊಂದೆಡೆಯಲ್ಲಿ ಕಡಿಮೆ ನಿಯಂತ್ರಣದ ವಿರೋಧಾಭಾಸದಿಂದ ಪೀಡಿತವಾಗಿದೆ. 90ಶೇ. ಕಾರ್ಮಿಕರು ಔಪಚಾರಿತ ಕಾರ್ಮಿಕ ಕಾನೂನುಗಳ ಪರಿಧಿಯಿಂದ ಆಚೆಯೇ ಇದ್ದಾರೆ. ಹೀಗಾಗಿ ಮಾಲೀಕರಿಗೆ ಶ್ರಮಶಕ್ತಿಯ ಬಳಕೆಯಲ್ಲಿ ಸುಗಮತೆಗಾಗಿ ಮತ್ತು ಕಾರ್ಮಿಕರಿಗೆ ಸಾರ್ವತ್ರಿಕ ಕಾನೂನಾತ್ಮಕ ರಕ್ಷಣೆಗಾಗಿ ಭಾರತದ ಸದ್ಯದ ಕಾರ್ಮಿಕ ಕಾನೂನುಗಳನ್ನು ತರ್ಕಬದ್ದಗೊಳಿಸುವ ಅವಶ್ಯಕತೆ ಇದೆ. ಅದೇ ವೇಳೆಗೆ ಶ್ರಮ ಸುಧಾರಣೆಗಳ ಕುರಿತು ಈಗಿರುವ ಕೆಲವು ಸೋಮಾರಿತನದ ಅಂದಾಜುಗಳು ಮತ್ತು ಸಾರಾಸಗಟು ಸಾಮಾನ್ಯೀಕರಣಗಳ ಕುರಿತು ಒಂದು ಸ್ಪಷ್ಟ ಕಣ್ಣೋಟದ ಅವಶ್ಯಕತೆಯೂ ಇದೆ.

ಪ್ರಾಯೋಗಿಕವಾಗಿ ಪರೀಶೀಲಿಸಲಾದ ಸಾಕ್ಷ್ಯಾಧಾರಗಳನ್ನು ಗಮನಿಸುವುದಾದರೆ ಕಾರ್ಮಿಕರು ದೊಡ್ಡ ಮಟ್ಟದಲ್ಲಿ ಅನೌಪಚಾರಿಕ ಶ್ರಮಕ್ಕೆ ತಳ್ಳಲ್ಪಡುವಲ್ಲಿ ಪ್ರಾಥಮಿಕವಾಗಿ ಕಠಿಣ ಶ್ರಮ ನಿಬಂಧನೆಗಳೇ ಕಾರಣ ಎನ್ನುವ ವಾದ ಸಮರ್ಥನಿಯವಲ್ಲ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ [ILO] ತನ್ನ “ಶಿಷ್ಟ ಕೆಲಸ ಮತ್ತು ಅನೌಪಚಾರಿಕ ಆರ್ಥಿಕತೆ” ಎನ್ನುವ ವರದಿಯಲ್ಲಿ ತಿಳಿಸಿರುವಂತೆ ಕಾರ್ಮಿಕ ನಿಬಂಧನೆಗಳು ಕಾರ್ಮಿಕರನ್ನು ಅನೌಪಚಾರಿಕ ಶ್ರಮಕ್ಕೆ ಒಳಪಡಿಸುವ ಹಲವಾರು ಇನ್ನಿತರ ಕ್ರಮಗಳ ಪೈಕಿ ಒಂದು ಮಾತ್ರ. ಉತ್ಪಾದನಾ ವಿಧಾನಗಳಲ್ಲಿ ಬದಲಾವಣೆ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಅಭಿವೃದ್ಧಿ ಹಾಗೆಯೇ ಜಾಗತಿಕ ಸ್ಪರ್ದೆಗಳೂ ಕೂಡ ಕೆಲಸದ ಅನೌಪಚಾರಿಕತೆ ಬೆಳೆಯಲು ವೇಗವರ್ಧಕದಂತೆ ಕಾರ್ಯ ನಿರ್ವಹಿಸಿವೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ [UNDP] ನೇಮಿಸಿದ “ಬಡವರ ಕಾನೂನಾತ್ಮಕ ಸಬಲೀಕರಣ ಆಯೋಗದ ತಜ್ಞರ ಕಾರ್ಯಕಾರೀ ಗುಂಪು” ಕೂಡ ಅನೌಪಚಾರಿಕ ಶ್ರಮ ಮತ್ತು ಶ್ರಮ ಮಾರುಕಟ್ಟೆಯ ಕಠಿಣ ನಿಯಂತ್ರಣ ಚೌಕಟ್ಟುಗಳ ಮಧ್ಯೆ ಕಾರ್ಯ-ಕಾರಣ ಸಂಬಂಧವಿದೆ ಎನ್ನುವ ಸಾಮಾನ್ಯ ವಾದಗಳಿಗೆ ನಿರ್ಣಾಯಕ ಸಾಕ್ಷ್ಯಗಳು ಸುಮಾರಾಗಿ ಇಲ್ಲ ಎಂದು ಕಂಡುಕೊಂಡಿದೆ. ಯುರೋಪ್ ನೇತೃತ್ವದ “ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ”(ಒಇಸಿಡಿ) ಯ ಭಾಗವಾಗಿರುವ ಹಲವಾರು ದೇಶಗಳು ಹೆಚ್ಚು ಮುಕ್ತವಾದ ಕಾರ್ಮಿಕ ನಿಬಂಧನೆಗಳನ್ನೂ ಹೊಂದಿಯೂ ಕಳೆದ 3 ದಶಕಗಳಲ್ಲಿ ಕೆಲಸಗಳು ಹೆಚ್ಚು ಅನೌಪಚಾರಿಕಗೊಂಡಿರುವುದನ್ನು ಕಂಡಿವೆ.

ಈ ಹಿಂದೆ ಹಲವಾರು ರಾಜ್ಯಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ ಪ್ರಯೋಗಗಳನ್ನು ನಡೆಸಲಾಗಿದೆ. ಇವುಗಳ ಅನುಭವವು ಶ್ರಮ ನಿಬಂಧನೆಗಳನ್ನು ಸುಗಮಗೊಳಿಸಿದ್ದರಿಂದ ಕಾರ್ಮಿಕರನ್ನು ಔಪಚಾರಿಕ ಶ್ರಮಕ್ಕೆ ಒಳಪಡಿಸುವ ಕ್ರಾಂತಿಕಾರಿ ತಿರುವು ನೀಡುತ್ತದೆ ಮತ್ತು ಉದ್ಯೋಗ ಸೃಷ್ಟಿಯಾಗುತ್ತದೆ ಎಂಬ ವಾದದ ಬಗ್ಗೆ ಇದ್ದ ಅನುಮಾನವನ್ನು ಪುಷ್ಟಿಕರಿಸುತ್ತದೆ. ವಿ.ವಿ ಗಿರಿ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ನಡೆಸಿದ ಒಂದು ಅಧ್ಯಯನದ ಪ್ರಕಾರ ರಾಜಸ್ಥಾನ, ಉತ್ತರಪ್ರದೇಶ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ಮಾಡಿದಾಗಲೂ “ದೊಡ್ಡ ಹೂಡಿಕೆಗಳು ಹರಿದು ಬರಲಿಲ್ಲ, ಕೈಗಾರೀಕರಣವನ್ನು ತೀವ್ರಗೊಳಿಸಲೂ ಇಲ್ಲ, ಹಾಗೆಯೇ ಉದ್ಯೋಗ ಸೃಷ್ಠಿಯೂ ಆಗಲಿಲ್ಲ”. ಭಾರತೀಯ ಅನುಭವದ ಸಮಾಶ್ರಯಣ ವಿಶ್ಲೇಷಣೆ(ರಿಗ್ರೆಶನ್ ಅನಾಲಿಸಿಸ್) ಅಧ್ಯಯನಗಳು “ಶ್ರಮ ಮಾರುಕಟ್ಟೆಯ ಸಡಿಲತೆಯಲ್ಲಿನ ಬೆಳವಣಿಗೆಯು ಉದ್ಯೋಗ ಸೃಷ್ಟಿಯಲ್ಲಿ ಸಂಖ್ಯಾತ್ಮಕವಾಗಿ ಗಮನಾರ್ಹವಾದ ಪ್ರಭಾವವನ್ನೇನೂ ಬೀರಿಲ್ಲ” ಎಂದು ಹೇಳುತ್ತವೆ.

ನಿಜ ಹೇಳಬೇಕೆಂದರೆ, ಕಾರ್ಮಿಕ ಕಾನೂನುಗಳು ಸಮರ್ಪಕ ಜಾರಿಯಾಗದೇ ಇರುವುದರಿಂದ ವಾಸ್ತವವಾಗಿ “ಭಾರತದ ಶ್ರಮ ಮಾರುಕಟ್ಟೆಯು ಸಾಕಷ್ಟು ಹೊಂದಿಕೊಳ್ಳುವಂತಿದೆ.” ರಾಜಸ್ತಾನದ ಈ ವರದಿಯು ದಾಖಲಿಸಿರುವಂತೆ ಉದ್ಯೋಗದಾತರಿಗೆ ಕೆಲಸಗಾರರನ್ನು ಕಿತ್ತುಹಾಕುವುದು ಕಷ್ಟದ ಕೆಲಸವೇನೂ ಆಗಿರಲಿಲ್ಲ, ಸಾಲದ ಮಿತಿಗಳು ಮತ್ತು ಮೂಲ ಸೌಕರ್ಯದ ಕೊರತೆಯೇ ಅವರು ಕೊಟ್ಟ ಕಾರಣಗಳು. ಹಾಗೆಂದು ಉದ್ಯೋಗ ಸೃಷ್ಟಿಗೆ ತಡೆಯಲ್ಲಿ ಶ್ರಮ ನಿಯಂತ್ರಣದ ಕಾಠಿಣ್ಯತೆಯ ಪಾತ್ರ ಇಲ್ಲವೇ ಇಲ್ಲ ಎಂದೇನೂ ಭಾವಿಸಬೇಕಾಗಿಲ್ಲ. ಆದರೆ, ವಿಶೇಷವಾಗಿ ಹಿಂದೆಂದೂ ಕಂಡರಿಯದ ಸಾರ್ವಜನಿಕ ಆರೋಗ್ಯದ ಬಿಕ್ಕಟ್ಟಿನ ಒಂದು ಸಂದರ್ಭದಲ್ಲಿ ರಾಜಕೀಯ ನೀತಿ ನಿರೂಪಣೆಗಳಲ್ಲಿ ಶ್ರಮ ನಿಬಂಧನೆಗಳ ಸಡಿಲಿಕೆ ಬೀರಬಹುದಾದ ಪ್ರಭಾವದ ಕುರಿತು ಇನ್ನೂ ಹೆಚ್ಚು ವಾಸ್ತವಿಕವಾದ ನಿಲುವಿನ ಅವಶ್ಯಕತೆಯಿದೆ.

ಇನ್ನೂ ಹೆಚ್ಚು ವಿಮರ್ಶಾತ್ಮಕವಾಗಿ ಹೇಳುವುದಾದರೆ, ಅತ್ಯಂತ ಅಡ್ಡಿಕಾರಕ ಮತ್ತು ಕಠಿಣ ಶ್ರಮ ನಿಬಂಧನೆಗಳ ನಿವಾರಣೆ, ಮತ್ತು ಬಹುಪಾಲು ನಮ್ಮ ಸಂವಿಧಾನದಿಂದ ಮತ್ತು ಭಾರತದ ಅಂತರ್ರಾಷ್ಟ್ರೀಯ ಬದ್ಧತೆಗಳಿಂದ ಹೊಮ್ಮಿರುವ ಕಾರ್ಮಿಕ ಕಾನೂನುಗಳ ಸಮಸ್ತ ರಚನೆಯನ್ನೇ ಅಮಾನತುಗೊಳಿಸುವ ಗದಾಪ್ರಹಾರದ ನಡುವೆ ವ್ಯತ್ಯಾಸವಿದೆ.

ಕನಿಷ್ಟ ಕೂಲಿಯನ್ನು ಕೊಡುವುದು ಸಂವಿಧಾನದ 23ನೇ ಅನುಚ್ಛೇದದಿಂದ ಹೊಮ್ಮಿರುವಂತದ್ದು, ಆದ್ದರಿಂದ ಅದನ್ನು ಕೊಡದೇ ಇರುವುದು ಬಲವಂತದ ಶ್ರಮವಾಗುತ್ತದೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯವು ಗುರುತಿಸಿದೆ. ಸಂವಿಧಾನದ ಅನುಚ್ಛೇಧ 21 ರ ಪ್ರಕಾರ ಸಮರ್ಪಕವಾದ, ಸುರಕ್ಷಿತವಾದ ಕೆಲಸದ ಪರಿಸ್ಥಿತಿಯನ್ನು ನೀಡುವುದು ಘನತೆಯಿಂದ ಬದುಕುವ ಮೂಲಭೂತ ಹಕ್ಕಿನ ಅಡಿಯಲ್ಲಿಯೇ ಬರುತ್ತದೆ. ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳುವ ಮತ್ತು ಸಾಮಾಜಿಕ ಭದ್ರತೆಯ ಹಕ್ಕುಗಳು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಜಾಗತಿಕ ಒಡಂಬಡಿಕೆಯ ಭಾಗವಾಗಿವೆ. ಈಗಿರುವ ಕಾರ್ಮಿಕ ಕಾನೂನುಗಳನ್ನು ಸಂಪೂರ್ಣವಾಗಿ ರದ್ದುಗೊಳಿಸುವುದೆಂದರೆ ಸಂವಿಧಾನ ಮತ್ತು ಮಾನವ ಹಕ್ಕುಗಳಿಗೆ ನಮ್ಮ ಬದ್ಧತೆಯನ್ನೇ ಕೈಬಿಟ್ಟಂತಾಗುತ್ತದೆ.

ಕಾರ್ಮಿಕ ಕಾನೂನುಗಳನ್ನು ಅತ್ಯಂತ ದುರ್ಬಲವಾಗಿ ಜಾರಿಗೆ ತಂದಿದ್ದರೂ, ಅವುಗಳಲ್ಲಿ ಹೇಳಲಾದ ಸುರಕ್ಷತೆಗಳು ಕಾರ್ಮಿಕರು,



ಕಾರ್ಮಿಕ ಕಾನೂನುಗಳನ್ನು ಹರಿದು ಹಾಕಿರುವುದು ನಿನ್ನ ಮನೋಬಲವನ್ನು ಹೆಚ್ಚಿಸಲು!

ವ್ಯಂಗ್ಯಚಿತ್ರ: ಆರ್. ಪ್ರಸಾದ್

ಕಾರ್ಮಿಕ ಸಂಘಟನೆಗಳಿಗೆ ಚೌಕಾಶಿ ಸಾಮರ್ಥ್ಯದ ಉಪಕರಣಗಳಾಗಿ, ಅವರ ಸಮರ್ಥ ಆಶಯಗಳಾಗಿ ಬಳಕೆಯಾಗುತ್ತವೆ. ಕಾರ್ಮಿಕರು ಮತ್ತು ಮಾಲೀಕರ ಮಧ್ಯೆ ನಮ್ಮ ವ್ಯವಸ್ಥೆಯಲ್ಲೇ ಅಡಕವಾಗಿರುವ ಅಸಮ ಚೌಕಾಶಿ ಬಲದ ಕಾರಣದಿಂದಾಗಿ ಕಾರ್ಮಿಕ ಕಾನೂನುಗಳನ್ನು ಸಂಪೂರ್ಣವಾಗಿ ಕಳಚುವುದು ಕೋಟ್ಯಾಂತರ ಕಾರ್ಮಿಕರನ್ನು ದುರ್ಬಲಗೊಳಿಸುತ್ತದೆ.

ಈಗಿರುವ ಕಾರ್ಮಿಕ ಕಾನೂನುಗಳನ್ನು ಖಂಡಿತವಾಗಿಯೂ ತರ್ಕಬದ್ಧಗೊಳಿಸಬೇಕಾಗಿದೆ. ಈಗಾಗಲೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ವೇತನ, ಔದ್ಯೋಗಿಕ ಸಂಬಂಧ, ಆರೋಗ್ಯ-ಸುರಕ್ಷತೆ ಮತ್ತು ಸಾಮಾಜಿಕ ಬದ್ಧತೆಗಳನ್ನು ಒಳಗೊಂಡ 4 ಸಂಹಿತೆಗಳನ್ನು ರಚಿಸುವ ಪ್ರಕ್ರಿಯೆಗೆ ಮುಂದಾಗಿದೆ. ವೇತನ ಕುರಿತಾದ ಸಂಹಿತೆ ಈಗಾಗಲೇ ಸಂಸತ್ತಿನಲ್ಲಿ ಪಾಸಾಗಿದೆ. ನಿಜ, ಈ ಸಂಹಿತೆಗಳಲ್ಲಿ ಇನ್ನೂ ಹೆಚ್ಚಿನ ಪರೀಕ್ಷಣೆ ನಡೆಸಬೇಕಾಗಿರುವ ಅಂಶಗಳಿವೆ, ವಿಶೇಷವಾಗಿ, ಕಾರ್ಮಿಕರ ಸಾಮೂಹಿಕ ಚೌಕಾಶಿ ಹಕ್ಕನ್ನು ದುರ್ಬಲಗೊಳಿಸುವಂಥ ಕ್ರಮಗಳು. ಈ ಸಂಹಿತೆಗಳನ್ನು ಕುರಿತು ಸಂಬಂಧಿತ ಆಸಕ್ತರ ಜೊತೆ ಒಂದು ವಿಶಾಲ ರಾಜಕೀಯ ಸಂವಾದದಲ್ಲಿ ತೊಡಗಬೇಕಾದ ಅಗತ್ಯವಿದೆ. ಈ ಮೂಲಕ ವಿವಿಧ ಆಸಕ್ತ ಗುಂಪುಗಳ ನಡುವೆ ಒಂದು ತರ್ಕಬದ್ಧ ರಾಜಿಯನ್ನು ವಿಕಾಸಗೊಳಿಸಬಹುದಾಗಿದೆ.

ಆದರೆ, ಒಂದು ಜಾಗರೂಕತೆಯಿಂದ ನಿರ್ವಹಿಸಬೇಕಾದ ಶ್ರಮ ಸುಧಾರಣೆಗಳನ್ನು, ಸಂಪೂರ್ಣವಾಗಿ ನಿಯಂತ್ರಣರಹಿತಗೊಳಿಸುವುದರೊಂದಿಗೆ ಬೆರೆಸಬಾರದು. ಉತ್ತರ ಪ್ರದೇಶ ಸರ್ಕಾರವು ಹೊರಡಿಸಿರುವ ಸುಗ್ರೀವಾಜ್ಞೆ ಮಾಡಿರುವಂತೆ ಕಾರ್ಮಿಕ ಕಾನೂನುಗಳನ್ನು ಸಾರಾಸಗಟು ನಿರಾಕರಿಸುವುದು ಹೂಡಿಕೆಗಳನ್ನು ಹೆಚ್ಚಿಸುವ ಬದಲು ಔದ್ಯೋಗಿಕ ಅಶಾಂತಿ ಮತ್ತು ಪ್ರಭುತ್ವದ ದಬ್ಬಾಳಿಕೆಯ ಜಾರುದಾರಿಯತ್ತ ಒಯ್ಯುಬಹುದು. ಪತ್ರಕರ್ತ ಟಿ ಎನ್ ನೈನನ್ ಎಚ್ಚರಿಸಿರುವಂತೆ ಕಾರ್ಮಿಕ ಕಾನೂನುಗಳನ್ನು ಮೂರು ವರ್ಷಗಳ ಕಾಲ ರದ್ದು ಮಾಡುವುದು ಕೊನೆಗೆ “ಕೊವಿಡ್-19 ರಿಂದಾಗಿ ಉಂಟಾಗಿರುವ ಅರಾಜಕತೆಯ ಮೇಲೆ ಹೊಸ ಅರಾಜಕತೆಗಳಿಗೆ ಆಹ್ವಾನವಾಗಬಹುದು”.

ಕಾರ್ಮಿಕರ ಹಕ್ಕುಗಳ ಮೇಲೆ ಯುದ್ಧವು ಇಡೀ ಅರ್ಥವ್ಯವಸ್ಥೆಯನ್ನೇ ಬೀಸಿ ಕೆಡವುತ್ತದೆ

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಜನಶಕ್ತಿ' ಓದುಗರಿಗೆ ಚಿರಪರಿಚಿತರಾದ ಪ್ರೊ. ಪ್ರಭಾತ್ ಪಟ್ನಾಯಕ್ ಇನ್ನೂ ನೇರವಾಗಿ ಇದು ಭಾರತದ ಕಾರ್ಮಿಕರ ಇಂದಿನ ಪರಿಸ್ಥಿತಿಯನ್ನು ಹತ್ತೊಂಭತ್ತನೆಯ ಶತಮಾನದ ಬ್ರಿಟಿಷ್ ಕೆಲಸಗಾರರು ಕೆಲಸ ಮಾಡುತ್ತಿದ್ದ ಭಯಾನಕ ಪರಿಸ್ಥಿತಿಗಳಿಗೆ ಹಿಂದಕ್ಕೊಯ್ಯುತ್ತದೆ ಎಂದು ಎಚ್ಚರಿಸುತ್ತಾರೆ. ಕಾರ್ಮಿಕರ ಹಕ್ಕುಗಳನ್ನು ಮೊಟಕು ಮಾಡುವುದರಿಂದ ಹೂಡಿಕೆ ಹೆಚ್ಚುತ್ತದೆ ಮತ್ತು ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ; ಅದರ ಜೊತೆಯಲ್ಲಿ, ಕೊರೋನಾ ಹಿನ್ನೆಲೆಯಲ್ಲಿ, ಚೀನಾದಿಂದ ಹೊರಹೋಗ ಬಯಸುವ ಕಂಪೆನಿಗಳನ್ನು ಭಾರತದತ್ತ ಆಕರ್ಷಿಸಲು ನೆರವಾಗುತ್ತದೆ ಎಂದು ಹೇಳಲಾಗುತ್ತಿದೆ. ಆದರೆ, ಈ ವಾದವು ಹಲವಾರು ಕಾರಣಗಳಿಂದಾಗಿ ದೋಷಪೂರ್ಣವಾಗಿದೆ. ವಾಸ್ತವವಾಗಿ ಇದು ಉತ್ಪಾದನೆ ಮತ್ತು ಉದ್ಯೋಗಗಳ ಹೆಚ್ಚಳಗಳ ನಿರೀಕ್ಷೆಯಲ್ಲಿ ನೀವು ಕಾರ್ಪೊರೇಟ್‌ಗಳನ್ನು ಎಷ್ಟು ಮುದ್ದು ಮಾಡುತ್ತೀರೋ ಅಷ್ಟೂ ಒಳ್ಳೆಯದೇ ಎಂಬ ಕಾರ್ಪೊರೇಟ್ ಪ್ರಭೃತಿಗಳಿಂದಲೇ ಪಡೆದ ಅಪಾಯಕಾರಿ ತಿಳುವಳಿಕೆ. ಒಂದು ಶತಮಾನದ ಹಿಂದೆಯೇ ಅಪಖ್ಯಾತಿಗೊಳಗಾಗಿದ್ದ ಈ ತಿಳುವಳಿಕೆ ಸಣ್ಣ ಬಂಡವಾಳಗರ ಮತ್ತು ಕಿರು ಉತ್ಪಾದಕರ ಉತ್ಪನ್ನಗಳ ಬೇಡಿಕೆಗಳು ಮತ್ತು ಅದರಿಂದಾಗಿ ಲಾಭಗಳೂ ಕುಗ್ಗುವಂತೆ ಮಾಡುತ್ತದೆ. ಆದ್ದರಿಂದ ಇದು ಕಾರ್ಪೊರೇಟ್ ವಲಯವೊಂದನ್ನು ಬಿಟ್ಟು ಇಡೀ ಸಮಾಜದ ಮೇಲೆ ಮಾಡುವ ದಾಳಿಯಾಗುತ್ತದೆ ಎನ್ನುತ್ತಾರೆ ಅವರು.

ಕೊರೋನಾ ಲಾಕ್‌ಡೌನ್ ಪರಿಸ್ಥಿತಿಯಲ್ಲಿ ಹಣವಿಲ್ಲದೆ, ಆಹಾರವಿಲ್ಲದೆ ಮತ್ತು ಆಶ್ರಯವಿಲ್ಲದೆ ನಗರಗಳಲ್ಲಿ ಒದ್ದಾಡುತ್ತಿದ್ದ ಲಕ್ಷಾಂತರ ವಲಸಿಗ ಕೆಲಸಗಾರರು ತಮ್ಮ ಮಡದಿ ಮಕ್ಕಳೊಂದಿಗೆ ಕಾಲ್ನಡಿಗೆಯಲ್ಲಿ, ಬಳಲಿ ಬಳಲಿ ಕಷ್ಟದಿಂದ ಹೆಜ್ಜೆ ಹಾಕುತ್ತಾ ತಮ್ಮ ತಮ್ಮ ಊರುಗಳಿಗೆ ಮರಳುತ್ತಿರುವ ಸಮಯದಲ್ಲಿ, ಅಥವಾ ಅದಕ್ಕೂ ಅಡ್ಡಿ ಮಾಡಿ ಅವರನ್ನು ಕ್ವಾರಂಟೈನ್ ಶಿಬಿರಗಳಲ್ಲಿ ಕೂಡಿಹಾಕಿರುವ ಸಮಯದಲ್ಲಿ, ಲಾಕ್‌ಡೌನ್ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು, ಕೇಂದ್ರ ಮತ್ತು ಹಲವು ರಾಜ್ಯ ಸರ್ಕಾರಗಳು ಕಾರ್ಮಿಕರ ಹಕ್ಕುಗಳ ಮೇಲೆ ಒಂದು ಯುದ್ಧವನ್ನೇ ಸಾರಿವೆ. ಒಂದು ರಾಜಕೀಯ ಪಕ್ಷವಾಗಿರುವ ಬಿಜೆಪಿಯು, ತನ್ನ ನಿಜ ರೂಪಕ್ಕನುಗುಣವಾಗಿ, ತನ್ನ ರಾಜ್ಯ ಸರ್ಕಾರಗಳ ಮೂಲಕ ಈ ವರ್ಗ ಯುದ್ಧವನ್ನು ಆರಂಭಿಸಿ ಮುನ್ನಡೆಸುತ್ತಿದೆ. ಅದರ ಉತ್ತರ ಪ್ರದೇಶ ಸರ್ಕಾರವು ಒಂದು ಸುಗ್ರೀವಾಜ್ಞೆಯ ಮೂಲಕ ಎಲ್ಲ ಕಾರ್ಮಿಕ ಕಾನೂನುಗಳನ್ನು (ಕೇವಲ ನಾಲ್ಕನ್ನು ಹೊರತುಪಡಿಸಿ) ಮೂರು ವರ್ಷಗಳ ಅವಧಿಗೆ ಅಮಾನತುಗೊಳಿಸಿದೆ. ಅದರ ಮಧ್ಯಪ್ರದೇಶ ಸರಕಾರವು, ಕಾರ್ಮಿಕ ಕಾನೂನುಗಳನ್ನು 1000 ದಿನಗಳ ಅವಧಿಗೆ ಹೊಸ ಘಟಕಗಳಿಗೆ ಅನ್ವಯಿಸದಂತೆ ಮಾಡಿದೆ. ಗುಜರಾತ್ ಸರ್ಕಾರವು ಇದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡಿದೆ. ಈ ಸರ್ಕಾರಗಳನ್ನೇ ಅನುಸರಿಸಲು ಕರ್ನಾಟಕ ಸರಕಾರವೂ ಹೊರಟಿದೆ. ಪಂಜಾಬ್ ಮತ್ತು ರಾಜಸ್ಥಾನದ ಕಾಂಗ್ರೆಸ್ ಸರಕಾರಗಳು ಇಲ್ಲಿಯವರೆಗೆ ಇನ್ನೂ ಆ ಮಟ್ಟಿಗೆ ಹೋಗದಿದ್ದರೂ, 8 ಗಂಟೆಗಳ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ವಿಸ್ತರಿಸಿವೆ.

ಕಾರ್ಮಿಕ ಕಾನೂನುಗಳನ್ನು ಅಮಾನತುಗೊಳಿಸುವುದು ಎಂದರೆ, ಉದ್ಯೋಗದಾತರು (ಮಾಲಿಕರು) ಕಾರ್ಮಿಕರನ್ನು ಕೆಲಸದಿಂದ ಕಿತ್ತೆಸೆಯಲು ಸ್ವತಂತ್ರರು ಎಂದರ್ಥ. ಕಾರ್ಮಿಕರಿಗೆ ಕನಿಷ್ಠ ಕೂಲಿ ಕೊಡುವ ಹೊಣೆಗಾರಿಕೆಯಿಂದ ಅವರು ಮುಕ್ತರು. ಕೆಲಸಗಾರರಿಗೆ "ಗಾಳಿ, ಬೆಳಕು, ಕುಡಿಯುವ ನೀರು, ಶೌಚಾಲಯ, ಕುಳಿತುಕೊಳ್ಳುವ ಅವಕಾಶ, ಪ್ರಥಮ-ಚಿಕಿತ್ಸೆ, ರಕ್ಷಣಾ ಉಡುಪು ಮತ್ತು ಸಲಕರಣೆಗಳು, ಕ್ಯಾಂಟೀನು, ಶಿಶು ವಿಹಾರ ಮತ್ತು ಕೆಲಸದ ಮಧ್ಯೆ ವಿಶ್ರಾಂತಿ" (ದಿ ಹಿಂದೂ, ಮೇ 8) ಇವುಗಳನ್ನು ಉದ್ಯೋಗದಾತರು ಒದಗಿಸಬೇಕಿಲ್ಲ ಎಂದರ್ಥ. ಕೇವಲ ಸಣ್ಣ ಸಣ್ಣ ಉದ್ದಿಮೆಗಳು ಕೆಲವು ಸೌಕರ್ಯಗಳನ್ನು ಒದಗಿಸದಿರಲು ಕೊಟ್ಟಿರುವ ವಿನಾಯ್ತಿಯಲ್ಲ ಇದು. ದೊಡ್ಡ ದೊಡ್ಡ ಕಾರ್ಖಾನೆಗಳೂ ಸಹ ಕಾರ್ಮಿಕರಿಗೆ ಎಲ್ಲ ಸೌಕರ್ಯ/ಸೌಲಭ್ಯಗಳನ್ನು ನಿರಾಕರಿಸುತ್ತವೆ. ಅರ್ಥಾತ್, ಭಾರತದ ಕಾರ್ಮಿಕರ ಇಂದಿನ ಪರಿಸ್ಥಿತಿಯನ್ನು ಹತ್ತೊಂಭತ್ತನೆಯ ಶತಮಾನದ ಬ್ರಿಟಿಷ್ ಕೆಲಸಗಾರರು ಕೆಲಸ ಮಾಡುತ್ತಿದ್ದ ಭಯಾನಕ ಪರಿಸ್ಥಿತಿಗಳಿಗೆ ಹಿಂದಕ್ಕೊಯ್ಯುತ್ತದೆ. ಶೋಷಣೆಯ ಈ ಆಯಾಮದ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ವಿಸ್ತೃತವಾಗಿ ಬರೆದಿದ್ದಾರೆ. ಹಾಗಾಗಿ, ಕಾರ್ಮಿಕ ಕಾನೂನುಗಳನ್ನು ಅಮಾನತುಗೊಳಿಸುವ ಈ ಕ್ರಮವು ಎರಡು ಶತಮಾನಗಳ ಕಾಲದ ದೀರ್ಘ ಹೋರಾಟಗಳ ಫಲವಾಗಿ ದುಡಿಯುವ ವರ್ಗವು ಗಳಿಸಿದ ಹಕ್ಕುಗಳನ್ನು ಅದೇ ಹಿಂದಿನ ಪರಿಸ್ಥಿತಿಗೇ ಇಳಿಸುತ್ತದೆ.

ಕಾರ್ಮಿಕರ ಹಕ್ಕುಗಳ ಮೇಲೆ ಸಾರಿರುವ ಈ ಯುದ್ಧವನ್ನು ಬೆಂಬಲಿಸುವ ಸಲುವಾಗಿ ಒಂದು ವಾದವನ್ನು ಮುಂದೊಡ್ಡಲಾಗುತ್ತಿದೆ. ಕಾರ್ಮಿಕರ ಹಕ್ಕುಗಳ ದಮನದಿಂದಾಗಿ ರಾಜ್ಯದಲ್ಲಿ ಹೂಡಿಕೆ ಹೆಚ್ಚುತ್ತದೆ ಮತ್ತು ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ ಎನ್ನುತ್ತದೆ ಈ ವಾದ. ಅದರ ಜೊತೆಯಲ್ಲಿ, ಅಮೇರಿಕಾ ಮತ್ತು ಚೀನಾದ ನಡುವಿನ ವ್ಯಾಪಾರ ಸಮರದ ಸನ್ನಿವೇಶದಲ್ಲಿ ಮತ್ತು ಕೊರೋನಾ ಉಗಮದ ಬಗ್ಗೆ ಎಬ್ಬಿಸಿರುವ ವಿವಾದಗಳ ಹಿನ್ನೆಲೆಯಲ್ಲಿ, ತಮ್ಮ ಉತ್ಪಾದನಾ ಘಟಕಗಳನ್ನು ಚೀನಾದಿಂದ ಬೇರೆ ದೇಶಗಳಿಗೆ ಸ್ಥಳಾಂತರಿಸಲು ಬಯಸುವ ಅನೇಕ ವಿದೇಶಿ ಕಂಪೆನಿಗಳು ಭಾರತದತ್ತ ನೋಡುತ್ತಿವೆ ಎಂಬ ಆಶಾವಾದವೂ ಹರಿದಾಡುತ್ತಿದೆ. ಆದರೆ, ಈ ವಾದವು ಹಲವಾರು ಕಾರಣಗಳಿಂದಾಗಿ ದೋಷಪೂರ್ಣವಾಗಿದೆ.

ಮೊದಲನೆಯದಾಗಿ, ಕೆಲಸ ಮಾಡಲು ಒಂದು ಹಿತಕರ ವಾತಾವರಣವನ್ನು ಬಯಸುವುದು ಕಾರ್ಮಿಕರ ಹಕ್ಕು. ಇದು ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಉಲ್ಲೇಖವಾಗದೇ ಇರಬಹುದು. ಆದರೆ, ಮೂಲಭೂತ ಹಕ್ಕುಗಳೆಂದು ಪಟ್ಟಿಮಾಡಲ್ಪಟ್ಟಿರುವ ಹಕ್ಕುಗಳಿಗಿಂತ ಕಡಿಮೆಯೇನಲ್ಲ. ಚೀನಾದಿಂದ ಗಂಟು ಮೂಟೆ ಕಟ್ಟಿ ಹೊರಡುತ್ತವೆ ಎಂದು ಹೇಳಲಾದ ವಿದೇಶಿ ಕಂಪೆನಿಗಳಿಗೆ ಭಾರತವನ್ನು ಹೆಚ್ಚು ಆಕರ್ಷಣೀಯ ತಾಣವನ್ನಾಗಿ ಮಾಡುವ ಸಲುವಾಗಿ ಕಾರ್ಮಿಕರ ಹಕ್ಕುಗಳನ್ನು ಬದಲಾಯಿಸಲಾಗದು. ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಸಲುವಾಗಿಯೇ ನಮ್ಮ ಮತದಾನದ ಹಕ್ಕು ಅಥವಾ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಹೇಗೆ ನಿರ್ಬಂಧಿಸಲಾಗದೋ, ಹಾಗೆಯೇ, ಕಾರ್ಮಿಕ ಹಕ್ಕುಗಳನ್ನೂ ನಿರಾಕರಿಸಲಾಗದು. ಕೆಲಸ ಮಾಡುವ ವಾತಾವರಣವು ದೇಶದಲ್ಲಿ ಹೇಗಿರಬೇಕೆಂದು ಬಯಸಿದ್ದ ದೃಷ್ಟಿಯ ಮೂಲಕವೇ ಕಾರ್ಮಿಕ ಕಾನೂನುಗಳನ್ನು ನಿರ್ಧರಿಸಲಾಗಿದೆ. ಆ ದೃಷ್ಟಿಯು ಬಂಡವಾಳವನ್ನು ಆಕರ್ಷಿಸುವ ಅವಕಾಶವಾದಿ ಎಣಿಕೆಯನ್ನು ಮೀರಬೇಕು. ಹಾಗಾಗಿ, ಅವುಗಳನ್ನು ಮನ ಬಂದಂತೆ ಮಾರ್ಪಡಿಸಲಾಗುವುದಿಲ್ಲ. ವಾಸ್ತವವಾಗಿ, ಕಾರ್ಮಿಕ ಹಕ್ಕುಗಳು ಇಡೀ ಕಾರ್ಮಿಕ ವರ್ಗಕ್ಕೆ ದೊರಕುವಂತೆ ಮಾಡುವುದು ನಮ್ಮ ಉದ್ದೇಶವಾಗಬೇಕು. (ಈಗ, ಒಟ್ಟು ಕಾರ್ಮಿಕರಲ್ಲಿ ಕೇವಲ ಶೇ .7 ರಷ್ಟು ಮಂದಿಗೆ ಮಾತ್ರ ಕಾರ್ಮಿಕ ಕಾನೂನುಗಳು ಅನ್ವಯವಾಗುತ್ತವೆ). ಈಗ, ಕಾರ್ಮಿಕ ಕಾನೂನುಗಳ ರಕ್ಷಣೆ ಹೊಂದಿದ ಆ ಒಂದು ಸಣ್ಣ ವಿಭಾಗವನ್ನೂ ಸಹ ಅವರ ಹಕ್ಕುಗಳಿಂದ ವಂಚಿಸಲಾಗುತ್ತಿದೆ.

ಎರಡನೆಯದಾಗಿ, ಕಾರ್ಮಿಕ ಕಾನೂನುಗಳು ದೊಡ್ಡ ಪ್ರಮಾಣದ ಹೂಡಿಕೆಗೆ ಅಡ್ಡಿಯಾಗಿವೆ ಎಂಬ ವಾದವು ಸಂಪೂರ್ಣವಾಗಿ ಮೋಸದಿಂದ ಕೂಡಿದೆ. ಈ ವಾದವನ್ನು ಸಮರ್ಥಿಸುವ ಅನುಭವಾತ್ಮಕ ಸಾಕ್ಷ್ಯದ ಒಂದು ಎಳೆಯೂ ಇಲ್ಲ. ನಿಜ ಹೇಳಬೇಕೆಂದರೆ, ಕೆಲವು ವರ್ಷಗಳ ಹಿಂದೆ ನವ ಉದಾರವಾದವು ದಿನೇ ದಿನೇ ಏರುಗತಿಯಲ್ಲಿದ್ದಾಗ ಕೆಲವು "ವಿದ್ವಾಂಸರು" ಭಾರತದ ಕೈಗಾರಿಕಾ ಬೆಳವಣಿಗೆಯು ಕಾರ್ಮಿಕ ಕಾನೂನುಗಳಿಂದ ಕುಂಠಿತವಾಗಿದೆ ಎಂದು ಪ್ರತ್ಯಕ್ಷವಾಗಿ ತೋರಿಸಲು ಹೊರಟಿದ್ದರು. ಆದರೆ, ಅವರ ಢೋಂಗಿತನ ಬಯಲಾದ ಕಾರಣದಿಂದ ಅವರು ಮತ್ತೆ ಮುಂದೆ ಹೋಗಿಲ್ಲ.

ವಿದೇಶೀ ಹೂಡಿಕೆಯನ್ನು ಸದ್ಯಕ್ಕೆ ಒಂದು ಬದಿಗೆ ಸರಿಸಿ, ದೇಶದಲ್ಲಿ ಬಂಡವಾಳವು ಹೂಡಿಕೆಯಾಗುತ್ತದೆ ಎಂಬ ಆಶಾಭಾವನೆಗೂ ಆಧಾರವಿಲ್ಲ. ಕಾರ್ಪೊರೇಟ್ ವಲಯದ ಅನುಭವಗಳು ಈ ಅಂಶವನ್ನು ಸಾಬೀತುಪಡಿಸುತ್ತವೆ. ಕಾರ್ಪೊರೇಟ್ ವಲಯವು ಕಾರ್ಮಿಕ ಕಾನೂನುಗಳಿಗೆ ಬದ್ಧವಾಗಿದೆ. ಈ ವಲಯವನ್ನು ಬೆರಳೆಣಿಕೆಷ್ಟು ಮಂದಿ (ಆಲಿಗೊಪಲಿ) ಮತ್ತು ಕೆಲವು ಏಕಸ್ವಾಮ್ಯಗಳು ನಿಯಂತ್ರಿಸುತ್ತವೆ. ಆದಾಗ್ಯೂ, ಯಾವುದೇ ಕಾರ್ಪೊರೇಟ್ ಸಂಸ್ಥೆಯು ಮಾರುಕಟ್ಟೆಯಲ್ಲಿ ಹೊಂದಿರುವ ಪಾಲು ದೀರ್ಘಾವಧಿಯಲ್ಲಿ ಮಾತ್ರ ಬದಲಾಗುತ್ತದೆ. ಆ ಬದಲಾವಣೆಯು ಒಟ್ಟಾರೆ ಬೇಡಿಕೆಯ ಬೆಳವಣಿಗೆಗೆ ಅನುಗುಣವಾಗಿರುತ್ತದೆ. ಆದ್ದರಿಂದ, ಯಾವುದೇ ಸಂಸ್ಥೆಯ ಯಾವುದೇ ಹೂಡಿಕೆಯನ್ನು, ಮೂಲಭೂತವಾಗಿ, ಮಾರುಕಟ್ಟೆಯ ನಿರೀಕ್ಷಿತ ಬೇಡಿಕೆಯ ಬೆಳವಣಿಗೆ ನಿರ್ಧರಿಸುತ್ತದೆಯೇ ವಿನಃ ಲಾಭದ ಬೆಳವಣಿಗೆಯಲ್ಲ. ಆದ್ದರಿಂದ, ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿದಾಗ, ಕಾರ್ಮಿಕರ ವೇತನ ಇಳಿಯುತ್ತದೆ; ಅದೇ ಸಮಯದಲ್ಲಿ ಕಾರ್ಪೊರೇಟ್‌ಗಳ ಲಾಭ ಏರುತ್ತದೆ ಮತ್ತು ಈ ಲಾಭವೇ ಹೂಡಿಕೆಯನ್ನು ಪ್ರಭಾವಿಸುವುದಿಲ್ಲ. ಹೂಡಿಕೆಯ ಬಗ್ಗೆ ಒಂದು ಸಂಸ್ಥೆಗೆ ಎದುರಾಗುವ ಈ ಪರಿಸ್ಥಿತಿಯೇ ಇಡೀ ಕಾರ್ಪೊರೇಟ್ ವಲಯದ ಪರಿಸ್ಥಿತಿಯೂ ಆಗುತ್ತದೆ.

ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುವುದರಿಂದ ಮುಖ್ಯವಾಗಿ ಕಾರ್ಮಿಕರಿಗೆ ಉಂಟಾಗುವ ನಷ್ಟದ ಜೊತೆಯಲ್ಲೇ ಉಂಟಾಗುವ ಮತ್ತೊಂದು ಅನಿವಾರ್ಯ ಪರಿಣಾಮವೆಂದರೆ, ಕಾರ್ಪೊರೇಟ್ ವಲಯದಲ್ಲಿ ವೇತನಗಳ ಕಡಿತದ ಫಲವು ಲಾಭದತ್ತ ಹೊರಳುತ್ತದೆ. ಈ ಹೊರಳುವಿಕೆಯಿಂದಾಗಿ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ಇಳಿಯುತ್ತದೆ. ಏಕೆಂದರೆ, ಲಾಭದ ಪ್ರತಿ ಯೂನಿಟ್‌ನಲ್ಲಿ ಬಳಕೆಗಾಗಿ ವ್ಯಯಿಸುವ ಮೊತ್ತವು, ವೇತನದ ಪ್ರತಿ ಯೂನಿಟ್‌ನಲ್ಲಿ ಬಳಕೆಗಾಗಿ ವ್ಯಯಿಸುವ ಮೊತ್ತಕ್ಕಿಂತ ಕಡಿಮೆ ಇರುತ್ತದೆ. ತತ್ಪರಿಣಾಮವಾಗಿ, ಒಟ್ಟಾರೆಯಾಗಿ, ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಇಳಿಯುತ್ತದೆ. ಉದ್ಯೋಗ ಮತ್ತು ಉತ್ಪತ್ತಿ ಇಳಿಯುತ್ತವೆ. ಆದರೂ, ಈ ಪರಿಣಾಮಗಳು ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುವ ನಿರ್ದಿಷ್ಟ ರಾಜ್ಯಗಳ ಮೇಲೆ ಬೀಳುವುದಿಲ್ಲ, ಏಕೆಂದರೆ, ವೇತನಗಳ ಕಡಿತದ ಫಲವು ಲಾಭದತ್ತ ಹೊರಳುವ ಕಾರಣದಿಂದ ಉಂಟಾಗುವ ಬೇಡಿಕೆಯ ಕೊರತೆಯ ಪರಿಣಾಮವು ಕೇವಲ ಆ ರಾಜ್ಯದ ಉತ್ಪನ್ನಗಳಿಗಷ್ಟೇ ಸೀಮಿತವಾಗಿರುವುದಿಲ್ಲ ಎಂದೂ ವಾದಿಸಬಹುದು. ಆ ರಾಜ್ಯಗಳಲ್ಲಿ, ಬೇರೆ ರಾಜ್ಯಗಳಲ್ಲಿ ಉತ್ಪನ್ನಗಳಿಗೆ ಬೇಡಿಕೆ ಇಲ್ಲದಿದ್ದರೆ ಅಲ್ಲಿ ಎಷ್ಟು ಪ್ರಮಾಣದಲ್ಲಿ ಉದ್ಯೋಗಗಳು ಕುಸಿಯಬಹುದೋ ಅಷ್ಟೇ ಪ್ರಮಾಣದಲ್ಲಿ ಉದ್ಯೋಗಗಳು ಇಳಿಕೆಯಾಗದಿರಬಹುದು. ಉದ್ಯೋಗಗಳ ಸ್ವಲ್ಪ ಕುಸಿತವಂತೂ ಇದ್ದೇ ಇರುತ್ತದೆ.

ಈ ಉದ್ಯೋಗ ನಷ್ಟ ಮತ್ತು ಉತ್ಪಾದನಾ ನಷ್ಟವನ್ನು ಜಾಗತಿಕ ಮಾರುಕಟ್ಟೆಗಾಗಿ ಉತ್ಪಾದಿಸುವ ಮತ್ತು ಪ್ರಾಯಶಃ ಚೀನಾಕ್ಕೆ ಬೆನ್ನು ಮಾಡಿದಂತೆ ಕಾಣುವ ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ಸರಿದೂಗಿಸಬಹುದೇ ಎಂಬುದೇ ಇಲ್ಲಿರುವ ಪ್ರಶ್ನೆ. ಒಂದು ಕಾರ್ಖಾನೆಯನ್ನು ಎಲ್ಲಿ ನೆಲೆಗೊಳಿಸಬೇಕು ಎಂಬುದನ್ನು ನಿರ್ಧರಿಸುವಲ್ಲಿ ವಿದೇಶಿ ಬಂಡವಾಳವು ಪರಿಗಣಿಸುವ ಮೂಲಾಂಶಗಳ ಪೈಕಿ ವೇತನದ ವೆಚ್ಚ ಒಂದು ಅಂಶ ಮಾತ್ರ ಎಂಬುದು ಇಲ್ಲಿ ನೆನಪಿಡಬೇಕಾದ ಒಂದು ಮುಖ್ಯ ಸಂಗತಿ. ಉಲ್ಲಾಸಕರವಾಗಿರುವ ಕೆಲಸದ ವಾತಾವರಣ ಮತ್ತು ಗುಣಮಟ್ಟದ ಶಿಕ್ಷಣ ಹೊಂದಿರುವ ವ್ಯಕ್ತಿಗಳಿಂದ ಕೂಡಿದ ಶ್ರಮಿಕ ಬಲವೇ ಬಂಡವಾಳವು ಪರಿಗಣಿಸುವ ಅತಿ ಮುಖ್ಯವಾದ ಅಂಶ. ಹಾಗಾಗಿ, ಶೌಚಾಲಯಗಳಿಲ್ಲದ, ಕ್ಯಾಂಟೀನ್‌ಇಲ್ಲದ, ಪುಡಿಗಾಸಿಗಾಗಿ ಹನ್ನೆರಡು ಗಂಟೆಗಳಿಗಿಂತ ಹೆಚ್ಚಿಗೆ ಸಮಯ ಕೆಲಸ ಮಾಡುವ, ಆಕ್ರೋಶಭರಿತ, ಅಸಂತುಷ್ಟ ಮತ್ತು ದುಃಖತಪ್ತ ಶ್ರಮಿಕ-ಪಡೆಯು ಚೀನಾವನ್ನು ತೊರೆಯುವ ವಿದೇಶಿ ಬಂಡವಾಳವನ್ನು ಸೆಳೆಯುವ ಆಯಸ್ಕಾಂತವಾಗುವ ಸಾಧ್ಯತೆ ಇಲ್ಲ.

ಈ ಎಲ್ಲ ಅಂಶಗಳ ಹೊರತಾಗಿಯೂ ಇಡೀ ವಿಶ್ವದಲ್ಲೇ ಎಲ್ಲಿಯೂ ಹೆಚ್ಚಿನ ಹೂಡಿಕೆ ಅಗುತ್ತಲೇ ಇಲ್ಲ. ಕೊರೋನಾ ವಿಶ್ವವನ್ನು ಅಪ್ಪಳಿಸುವ ಮುನ್ನವೇ ಜಾಗತಿಕ ಅರ್ಥವ್ಯವಸ್ಥೆಯು ಆಮೆ ನಡಿಗೆಯಲ್ಲಿತ್ತು. ಕಾರ್ಮಿಕ ಕಾನೂನುಗಳನ್ನು ರದ್ದು ಮಾಡುವುದಕ್ಕಿಂತ ಬಹಳ ಮೊದಲೇ ಭಾರತದ ಕಾರ್ಮಿಕರ ಕೂಲಿಯು ಹೇಳಿ ಕೇಳಿ ಚೀನೀ ಕಾರ್ಮಿಕರ ಕೂಲಿಗಿಂತ ಬಹಳ ಕಡಿಮೆಯೇ ಇತ್ತು. ಆ ಸಮಯದಲ್ಲೇ ವಿದೇಶಿ ಬಂಡವಾಳವು ಚೀನಾಕ್ಕೆ ಬದಲಾಗಿ ಭಾರತದಲ್ಲಿ ಅಥವಾ ಏಷ್ಯಾದ ಇತರೆ ದೇಶಗಳಲ್ಲಿ ಹೂಡಿಕೆ ಮಾಡುವ ಇರಾದೆ ವ್ಯಕ್ತಪಡಿಸಲಿಲ್ಲ, ಏಕೆ ? ಮತ್ತೆ, ಮೋದಿ ಸರಕಾರವು ತನ್ನ "ಮೇಕ್ ಇನ್ ಇಂಡಿಯಾ" ಅಭಿಯಾನದೊಂದಿಗೆ ಕಂಡ ಕಂಡವರ ಮೇಲೆ ಮೇಲೆ ಬಿದ್ದುದರ ಹೊರತಾಗಿಯೂ, ಕೊರೋನಾ ಹೊಡೆತದ ಮುನ್ನವೇ, ನಮ್ಮ ತಯಾರಿಕಾ ವಲಯದ ಬೆಳವಣಿಗೆ ದರವು ಬಹಳ ಸಮಯದಿಂದಲೂ ಶೂನ್ಯ ಮಟ್ಟದಲ್ಲಿ ಅಥವಾ ನಕಾರಾತ್ಮಕವಾಗಿಯೇ ಇದೆ, ಏಕೆ?

ವಿದೇಶಿ ಹೂಡಿಕೆಯ ಪರಿಸ್ಥಿತಿಯ ಬಗ್ಗೆ ಇರುವ ಈ ಸತ್ಯವೇ, ಭಾರತದ ಇತರ ರಾಜ್ಯಗಳಿಂದ ಹೂಡಿಕೆ ಆಕರ್ಷಿಸುವ ಪರಿಸ್ಥಿತಿಯ ಬಗ್ಗೆ ಇರುವ ಸತ್ಯವೂ ಹೌದು. ಅಂತೂ ಇಂತೂ ಹೆಚ್ಚಿನ ಹೂಡಿಕೆಯಂತೂ ಇರಲೇ ಇಲ್ಲ. ಹಾಗಾಗಿ, ಒಂದು ರಾಜ್ಯವು ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿದ ಏಕಮಾತ್ರ ಕಾರಣದಿಂದ ಇತರ ರಾಜ್ಯಗಳಿಂದ ಹೂಡಿಕೆಯನ್ನು ಅಷ್ಟಾಗಿ ಸೆಳೆಯಲಾಗುವುದಿಲ್ಲ. ಒಂದು ವೇಳೆ ಅದು ಸಾಧ್ಯವಿದ್ದರೆ, ರಾಜ್ಯ-ರಾಜ್ಯಗಳ ನಡುವೆ ಅದೊಂದು ಪಾತಾಳಕ್ಕೆ ದೌಡಾಯಿಸುವ ಅಪಾಯಕಾರಿ ಸ್ಪರ್ಧೆಯಾಗುತ್ತಿತ್ತು.


ಪುಟ 14 ಕ್ಕೆ

ವ್ಯಂಗ್ಯಚಿತ್ರ: ಸತೀಶ ಆಚಾರ್ಯ



ಕಾರ್ಮಿಕ ಕಾನೂನುಗಳ ಅಮಾನತ್

ಮೋದಿ ಕೊವಿಡ್ ಮದ್ದು



ಪುಟ 7 ರಿಂದ

ಈಗ ಪ್ಯಾಕೇಜಿನ ನಂತರ ಸರಕಾರ ಮಾಡುವ ಒಟ್ಟು ವೆಚ್ಚಗಳೆಷ್ಟು, ರೆವಿನ್ಯೂ ಎಲ್ಲಿಂದ ಬರುತ್ತದೆ ಎಂಬ ವಿವರಗಳನ್ನು ಸರಕಾರ ಮುಂದಿಡಲಿ ಎಂದು ಯೆಚುರಿ ಹೇಳಿದರು.

ಲಾಕ್‌ಡೌನ್ ಕೊವಿಡೊ ಮಹಾಮಾರಿಗೆ ಮದ್ದಲ್ಲ. ಅದು ಮಹಾಮಾರಿಯನ್ನು ಎದುರಿಸಲು ತಯಾರಿ ನಡೆಸುವ ಅವಕಾಶ ಕೊಡುತ್ತದಷ್ಟೇ. ಈ ಅವಧಿಯಲ್ಲಿ ಸರಕಾರ ಎಂತಹ ಸಿದ್ಧತೆಗಳನ್ನು ಮಾಡಿದೆ, ಅದಕ್ಕಾಗಿ ರಚಿಸಿದ ತನ್ನ ಹೊಸ ಖಾಸಗಿ ಟ್ರಸ್ಟಿನಿಂದ ಎಷ್ಟು ಹಣ ವೆಚ್ಚ ಮಾಡಿದೆ ಎಂದೇನೂ ಹೇಳಿಲ್ಲ. ರಾಜ್ಯ ಸರಕಾರಗಳನ್ನು ಕೇಳದೇ ಏಕಾಏಕಿಯಾಗಿ , ಕೇವಲ ನಾಲ್ಕೇ ಗಂಟೆಗಳ ನೋಟೀಸಿನಲ್ಲಿ ಪ್ರಧಾನಮಂತ್ರಿಗಳು ನಾಟಕೀಯ ರೀತಿಯಲ್ಲಿ ಲಾಕ್‌ಡೌನ್ ಹೇರಿದರು. ಅದರಿಂದ ಲಕ್ಷಾಂತರ ವಲಸೆ ಕಾರ್ಮಿಕರು ಹೇಳತೀರದ ಪಾಡು ಪಡುತ್ತಿರುವಾಗ ಅದನ್ನು ರಾಜ್ಯಸರಕಾರಗಳ ಹೆಗಲಿಗೆ ದಾಟಿಸಿ ಕೈತೊಳೆದುಕೊಂಡಿದ್ದಾರೆ. ಆದರೆ ರಾಜ್ಯಗಳಿಗೆ ಈ ಸಮಸ್ಯೆಯನ್ನು ಎದುರಿಸಲು ಬೇಕಾಗುವ ಸಂಪನ್ಮೂಲಗಳನ್ನು ಕೊಡುತ್ತಿಲ್ಲ ಮಾತ್ರವಲ್ಲ, ಅವುಗಳಿಗೆ ಸಲ್ಲಬೇಕಾದ ಬಾಕಿಯನ್ನೂ ಕೊಡುತ್ತಿಲ್ಲ

ಇಂತಹ ಕ್ರಮಗಳ ಬದಲು ಪ್ರಧಾನ ಮಂತ್ರಿಗಳು ಈಗ ಜಪಿಸುತ್ತಿರುವ 'ಆತ್ಮ ನಿರ್ಭರತಾ' ಅಂದರೆ ಸ್ವಾವಲಂಬನೆ ಭಾರತಕ್ಕೆ ಹೊಸದೇನಲ್ಲ. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಭಾಗವೇ ಆಗಿತ್ತು, ನಮ್ಮ ಸಂವಿಧಾನದ ಅಡಿಗಲ್ಲುಗಳಲ್ಲಿ ಒಂದು . ಆದರೆ ಜನಗಳ ತಕ್ಷಣದ ಸಮಸ್ಯೆಗಳನ್ನು ಪರಿಹರಿಸದೆ ದೇಶದ ಸ್ವಾವಲಂಬನೆ ಸಾಧ್ಯವಿಲ್ಲ. ನಮ್ಮ ರೈತರನ್ನು ಭೂತಿಮಿಂಗಿಲಗಳಿಗೆ ಒಡ್ಡುವ ಮೂಲಕ, ಕಾರ್ಮಿಕರ ಕಾನೂನಗಳನ್ನೆಲ್ಲ ಅಮಾನತು ಮಾಡುವ ಮೂಲಕ ಸಾಧ್ಯವಿಲ್ಲ, ರಕ್ಷಣಾ ಉತ್ಪಾದನೆಯಲ್ಲೂ 74ಶೇ. ಎಫ್‌ಡಿಐಗೆ ಮುಕ್ತ ಅವಕಾಶ ನೀಡುವುದು ಸ್ವಾವಲಂಬನೆಯಾಗಲು ಸಾಧ್ಯವಿಲ್ಲ.


ಚೀನಾ ಮಾತ್ರವಲ್ಲ, ಅಮೆರಿಕಾದಲ್ಲಾಗಲೀ, ಜಪಾನಿಲ್ಲಾಗಲೀ, ಬೇರಾವ ದೇಶದಲ್ಲಾಗಲೀ ಮೂಲರಚನೆಗಳಲ್ಲಿ ಪ್ರಭುತ್ವವೇ ಹೂಡಿಕೆಗಳನ್ನು ಮಾಡಿರುವುದು. ಇಲ್ಲಿಯೂ ಮೂಲರಚನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆ ಮಾಡಿದರೆ, ಅದು ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸಿ ಜನಗಳ ಕೈಗಳಲ್ಲಿ ಹಣ ಬರುವಂತೆ ಮಾಡುತ್ತದೆ, ಆಮೂಲಕ ಬೇಡಿಕೆಗಳು ಹೆಚ್ಚುವಂತೆ ಮಾಡಬಲ್ಲದು. ಆದರೆ ಅದರ ಬದಲು ಮೋದಿ ಸರಕಾರ ಎಲ್ಲವನ್ನೂ ಖಾಸಗಿಯವರಿಗೆ ಒಪ್ಪಿಸಲು ಈ ಮಹಾಮಾರಿಯ ಕಾಲದ ಪ್ಯಾಕೇಜನ್ನು ಬಳಸಿಕೊಳ್ಳುತ್ತಿದೆ. ಇದು ನಮ್ಮ ಅರ್ಥವ್ಯವಸ್ಥೆಗೆ ಮರುಜೀವ ತುಂಬಲಾರದು, ದೇಶಿ–ವಿದೇಶಿ ಬಂಡವಾಳಿಗರ ಮತ್ತು ಸರಕಾರದ ಬಂಟರ ಲಾಭಗಳನ್ನು ಶಿಖರಕ್ಕೇರಿಸಬಹುದಷ್ಟೇ.

ಆದ್ದರಿಂದ ಈ ಪ್ಯಾಕೇಜನ್ನು ಪರಿಹಾರದ, ಆರ್ಥಿಕ ಪುನರುಜ್ಜೀವನದ ಸಾಧನ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸಿಪಿಐ(ಎಂ) ಈಗಾಗಲೇ ಆರ್ಥಿಕ ಮಾರ್ಗ ನಕಾಶೆಯನ್ನು ದೇಶದ ಮುಂದಿಟ್ಟಿದೆ. ಅದರಲ್ಲಿ ಸೂಚಿಸಿರುವಂತೆ ತಕ್ಷಣದಲ್ಲಿ ಆದಾಯ ತೆರಿಗೆ ವ್ಯಾಪ್ತಿಯಲ್ಲಿರದ ಪ್ರತಿ ಕುಟುಂಬಕ್ಕೆ 7500ರೂ. ನಗದನ್ನು ಮೂರು ತಿಂಗಳ ಕಾಲ ವರ್ಗಾವಣೆ ಮಾಡಬೇಕು, ಸರಕಾರದ ಗೋದಾಮುಗಳಲ್ಲಿ ತುಂಬಿರುವ ಆಹಾರಧಾನ್ಯಗಳನ್ನು ಪ್ರತಿ ವ್ಯಕ್ತಿಗೆ ತಿಂಗಳಿಗೆ 10ಕೆ.ಜಿ,ಯಂತೆ ಮುಂದಿನ ಆರು ತಿಂಗಳು ಉಚಿತವಾಗಿ ಪೂರೈಸಬೇಕು, ಊರಿಗೆ ಹೋಗಬೇಕೆಂದಿರುವ ಎಲ್ಲ ವಲಸೆ ಕಾರ್ಮಿಕರಿಗೆ ಊರು ತಲುಪಲು ವ್ಯವಸ್ಥೆ ಮಾಡಬೇಕು ಹಾಗೂ ಮಹಾಮಾರಿಯ ವಿರುದ್ಧ ಸಮರದ ಮುಂಚೂಣಿಯಲ್ಲಿರುವವರಿಗೆ ಸುರಕ್ಷತಾ ವ್ಯವಸ್ಥೆಗಳನ್ನು ಹಾಗೂ ಸಂಪನ್ಮೂಲಗಳ ನೆರವನ್ನು ಒದಗಿಸಬೇಕು ಎಂದು ಯೆಚುರಿ ಮತ್ತೊಮ್ಮೆ ಆಗ್ರಹಿಸಿದ್ದಾರೆ.

ಸರಕಾರದ ಇಂತಹ ವರ್ತನೆಯ ಸಂದರ್ಭದಲ್ಲಿ ಪ್ರತಿಪಕ್ಷಗಳು ಒಟ್ಟಾಗಿ ಏನು ಮಾಡಬೇಕೆಂದಿವೆ, ಎಂಬ ಪ್ರಶ್ನೆಗೆ ಉತ್ತರಿಸುತ್ತ, ಸಿಪಿಐ(ಎಂ) ಈಗಾಗಲೇ ತನ್ನ ಆರ್ಥಿಕ ಕ್ರಮಗಳ ಮಾರ್ಗ ನಕಾಶೆಯನ್ನು ಎಲ್ಲ ಪ್ರತಿಪಕ್ಷಗಳಿಗೆ ಕಳಿಸಿದೆ. ಎಡಪಕ್ಷಗಳಂತೂ ಈ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿವೆ, ಇದರೊಂದಿಗೆ ಆರ್‌ಜೆಡಿ, ಎಲ್‌ಜೆಡಿ ಮತ್ತು ವಿಕೆಸಿ ಪಕ್ಷಗಳೂ ಕೈಜೋಡಿಸುತ್ತಿವೆ ಎಂದು ಯೆಚುರಿ ಹೇಳಿದರು.

ಈ ಪತ್ರಿಕಾಗೋಷ್ಠಿಯ ನಂತರ ಮೇ 22ರಂದು ಕಾಂಗ್ರೆಸ್ ಸೇರಿದಂತೆ 18 ಪ್ರತಿಪಕ್ಷಗಳ ಸಭೆ ನಡೆಸಲು ನಿರ್ಧರಿಸಲಾಗಿದೆ. ಇದರಲ್ಲಿ ಸೀತಾರಾಮ್ ಯೆಚುರಿಯವರು ಭಾಗವಹಿಸಿ ಈ ಕೆಳಗಿನ ಬೇಡಿಕೆಗಳನ್ನು ಜಂಟಿಯಾಗಿ ಎತ್ತಬೇಕೆಂಬ ಪ್ರಸ್ತಾವವನ್ನು ಇಡಲಾಗಿದೆ:

1. ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೆ ಮಹಾಮಾರಿಯ ಅವಧಿಯಲ್ಲಿ ತಿಂಗಳಿಗೆ ರೂ.7500 ನೇರ ನಗದು ವರ್ಗಾವಣೆ
2. ತಿಂಗಳಿಗೆ 10 ಕೆ.ಜಿ. ಆಹಾರಧಾನ್ಯಗಳನ್ನು ಅಗತ್ಯವಿರುವ ಎಲ್ಲ ವ್ಯಕ್ತಿಗಳಿಗೆ ಮುಂದಿನ ಆರು ತಿಂಗಳು ಉಚಿತವಾಗಿ ಕೊಡಬೇಕು.
3. ಎಲ್ಲ ವಲಸೆ ಕಾರ್ಮಿಕರಿಗೆ ತಮ್ಮ ಊರುಗಳನ್ನು ತಲುಪಲು ಉಚಿತ ಸಾರಿಗೆ ವ್ಯವಸ್ಥೆ.
4. ಎಲ್ಲ ಏಕಪಕ್ಷೀಯ ನಿರ್ಧಾರಗಳನ್ನು, ನಿರ್ದಿಷ್ಟವಾಗಿ ಕಾರ್ಮಿಕ ಕಾನೂನುಗಳ ರದ್ಧತಿಯ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು.
5. ತಕ್ಷಣವೇ ಹಿಂಗಾರು ಬೆಳೆಗಳನ್ನು ಮತ್ತು ಸಣ್ಣ ಅರಣ್ಯ ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಗಳಲ್ಲಿ ಖರೀದಿಸಬೇಕು. ಮುಂಗಾರು ಬೆಳೆಗೆ ಸಿದ್ಧರಾಗುತ್ತಿರುವ ರೈತರಿಗೆ ಬೀಜಗಳು, ರಸಗೊಬ್ಬರ ಮತ್ತಿತರ ಲಾಗುವಾಡುಗಳನ್ನು ಒದಗಿಸಬೇಕು.
6. ಮಹಾಮಾರಿಯನ್ನು ಎದುರಿಸುವ ಸಮರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಗಳಿಗೆ ಗಮನಾರ್ಹ ಪ್ರಮಾಣದಲ್ಲಿ ನಿಧಿಗಳನ್ನು ಬಿಡುಗಡೆ ಮಾಡಬೇಕು.
7. ಶಾಂತಿಯುತ ಪ್ರತಿಭಟನಾಕಾರರು ಮತ್ತು ಭಿನ್ನಾಭಿಪ್ರಾಯಗಳನ್ನು ವ್ಯಕ್ತಮಾಡುವವರನ್ನು ಗುರಿಮಾಡುವುದನ್ನು, ಕೋಮು ಆಧಾರದಲ್ಲಿ ಗುರುತಿಸುವುದನ್ನು ಮತ್ತು ಬಂಧಿಸುವುದನ್ನು ನಿಲ್ಲಿಸಬೇಕು.
8. ಎಲ್ಲ ರಾಜಕೀಯ ಬಂಧಿಗಳನ್ನು, ನಿರ್ದಿಷ್ಟವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಬಂಧಿಸಿ ಆ ರಾಜ್ಯದ ಒಳಗೆ ಮತ್ತು ಹೊರಗೆ ಜೈಲುಗಳಲ್ಲಿ ಇಟ್ಟಿರುವವರನ್ನು ಬಿಡುಗಡೆ ಮಾಡಬೇಕು.



ಖಾಸಗಿ



ಸಾರ್ವಜನಿಕ

ಪುನ್ನಪ್ರ–ವಯಲಾರ್ ವೀರಗಾಥೆ

ಪುಟ 11 ರಿಂದ

ಕಾರ್ಯಾಚರಣೆಗಳ ಸಮರಧೀರ ಅಲೆಯ ಒಂದು ಭಾಗವಾಗಿತ್ತು. ಅವುಗಳಲ್ಲಿ ಮಲಬಾರಿನ ಕರಿವೆಲ್ಲೂರ್, ಕಾವುಂಬೈ ಮತ್ತು ತಿಲ್ಲಂಕೇರಿ ರೈತ ಹೋರಾಟಗಳು ಪ್ರಮುಖವಾದವು.

ಅನೇಕ ಪ್ರದೇಶಗಳಲ್ಲಿ ಹಸಿವಿನಿಂದ ಸಾವು ಮತ್ತು ಬರಗಾಲ ಸಾಮಾನ್ಯವಾಗಿತ್ತು. ಅಕ್ಕಿಯು ಚಿನ್ನಕ್ಕಿಂತ ದುಬಾರಿಯಾಗಿತ್ತು. ಕರಿವೆಲ್ಲೂರಿನಲ್ಲಿ ಭೂಮಾಲಕರ ಕಣಜಗಳು ತುಂಬಿ ತುಳುಕುತ್ತಿದ್ದರೆ, ಬಡ ರೈತರು ಮತ್ತು ಕೃಷಿ ಕೂಲಿಗಾರರು ಹಸಿವಿನಿಂದ ತತ್ತರಿಸಿದ್ದರು. ಪೋಲಿಸರ ಮತ್ತು ಪ್ರಭುತ್ವಯಂತ್ರಗಳ ಸಂಪೂರ್ಣ ಶಾಮೀಲಿನಿಂದ ಭೂಮಾಲಕರ ಕಳ್ಳ ದಾಸ್ತಾನು ಕಾಳಸಂತೆ ಮಾರುಕಟ್ಟೆ ತಲುಪುತ್ತಿತ್ತು. ಕಾಳಸಂತೆಯ ವಿರುದ್ಧ ದನಿ ಎತ್ತುವವರನ್ನು ಬಗ್ಗುಬಡಿಯಲು ಮಲಬಾರ್ ಪ್ರದೇಶದಲ್ಲಿನ ವಸಾಹತುಶಾಹಿ ಆಡಳಿತವು ವಿಶೇಷ ಮಲಬಾರ್ ಪೋಲಿಸರನ್ನು ನೇಮಿಸಿತ್ತು. ಕರಿವೆಲ್ಲೂರಿನ ಹೊರಗೆ ಭತ್ತವನ್ನು ಕೊಂಡೊಯ್ಯಬೇಡಿ ಎಂಬ ಜನರ ಪ್ರಾರ್ಥನೆಯನ್ನು ಭೂಮಾಲಕರು ಕಿವಿಯ ಮೇಲೇ ಹಾಕಿಕೊಳ್ಳುತ್ತಿರಲಿಲ್ಲ. 1946ರ ಡಿಸೆಂಬರ್ 20ರಂದು ಭೂಮಾಲಕರ ಕಡೆಯವರು ಭತ್ತ ಸಂಗ್ರಹ ಮಾಡುವುದನ್ನು ಜನರು ಪ್ರತಿರೋಧಿಸಿದಾಗ ಪೋಲಿಸರು ಅವರ ಮೇಲೆ ಗುಂಡು ಹಾರಿಸಿದರು. ಪ್ರತಿರೋಧದ ಮುಂದಾಳುತ್ವ ವಹಿಸಿದ್ದ ಪಕ್ಷದ ಮುಖಂಡರು ಪೋಲಿಸರ ಗುಂಡಿಗೆ ಬಲಿಯಾದರು. ನೂರಾರು ಜನರನ್ನು ಸುಳ್ಳು ಆರೋಪ ಹೊರಿಸಿ ಬಂಧಿಸಲಾಯಿತು.

ಪ್ರತಿರೋಧದ ದೀರ್ಘ ಪರಂಪರೆ ಹೊಂದಿರುವ ಮಲಬಾರಿನ ಮತ್ತೊಂದು ಹಳ್ಳಿಯಾದ ಕಾವುಂಬೈಯಲ್ಲಿ, ಧಾನ್ಯಗಳನ್ನು ದಾಸ್ತಾನು ಮಾಡಿದ್ದ ಭೂಮಾಲಕರ ಉಗ್ರಾಣದ ಮೇಲೆ ದಾಳಿ ಮಾಡಬೇಕೆಂದು ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿತು. ಇದನ್ನು ಎದುರಿಸಲು ಭೂಮಾಲಕರು ಪೋಲಿಸರ ಮೊರೆ ಹೋದರು. ಈ ಕಾರ್ಯಾಚರಣೆಯಲ್ಲಿ ಹಲವಾರು ಸಂಗಾತಿಗಳು ಹುತಾತ್ಮರಾದರು, ನೂರಾರು ಜನರನ್ನು ಬಂಧಿಸಿ ಹಿಂಸಿಸಿದರು. ಮಲಬಾರಿನ ಈ ರೈತ ಹೋರಾಟಗಳಲ್ಲಿ ಭಾಗವಹಿಸಿದ್ದ ಅನೇಕ ಮುಖಂಡರನ್ನು ಸೇಲಮ್ಮಿನ ಜೈಲಿನಲ್ಲಿ ಇಟ್ಟಿದ್ದರು, ಅಲ್ಲಿ ಅವರು ಜೈಲಿನಲ್ಲಿ ಉತ್ತಮ ಸೌಕರ್ಯ ಒದಗಿಸಬೇಕೆಂದು ಒತ್ತಾಯಿಸಿ ಮುಷ್ಕರ ಹೂಡಿದರು(ಫೆಬ್ರವರಿ, 1950). ಕಾಂಗ್ರೆಸ್ ಸರ್ಕಾರದ ಪೋಲಿಸರು ಕಮ್ಯುನಿಸ್ಟ್ ಖೈದಿಗಳ ಮೇಲೆ ಗುಂಡಿನ ಮಳೆಗರೆದರು, 22 ಸಂಗಾತಿಗಳು ಹುತಾತ್ಮರಾದರು.

ಪುನ್ನಪ್ರ ಮತ್ತು ವಯಲಾರಿನಲ್ಲಿ ಮಡಿದ ನೂರಾರು ಹುತಾತ್ಮರ ಮತ್ತು ನರಳಿದ ಸಾವಿರಾರು ಸಂಗಾತಿಗಳ ತ್ಯಾಗಗಳು ವ್ಯರ್ಥವಾಗಲಿಲ್ಲ. ಈ ಹೋರಾಟಗಳಿಂದಾಗಿ ಎರಡು ರಾಜರುಗಳ ಸಂಸ್ಥಾನಗಳಾದ ತಿರುವಾಂಕೂರು ಮತ್ತು ಕೊಚಿನ್‌ಗಳನ್ನು ಒಂದುಗೂಡಿಸಿ ತಿರುವಾಂಕೂರು–ಕೊಚಿನ್ ರಾಜ್ಯವನ್ನಾಗಿ ಮಾಡುವ ಪ್ರಕ್ರಿಯೆಗಳು ಪ್ರಾರಂಭವಾದವು. ಏಳು ವರ್ಷಗಳ ನಂತರ, ಬ್ರಿಟಿಷ್ ಆಳ್ವಿಕೆಯ ಮದ್ರಾಸ್ ಪ್ರಸಿಡೆನ್ಸಿಯ ಮಲಬಾರ್ ಜಿಲ್ಲೆಯನ್ನು ಇವುಗಳ ಜತೆ ವಿಲೀನ ಮಾಡಿ ಹೊಸ ಐಕ್ಯ ಭಾಷಾವಾರು ರಾಜ್ಯ ಕೇರಳ ರಚನೆಗೊಂಡಿತು.

ಕಾರ್ಮಿಕರ ಹಕ್ಕುಗಳ ಮೇಲೆ ಯುದ್ಧವು....


ಪುಟ 13 ರಿಂದ

ವೇತನಗಳ ಕಡಿತದ ಫಲವು ಲಾಭದತ್ತ ಹೊರಳುವ ಕಾರಣದಿಂದ ಉಂಟಾಗುವ ಬೇಡಿಕೆಯ ಕೊರತೆಯ ಪರಿಣಾಮವು, ನಾವು ಈಗಾಗಲೇ ಚರ್ಚಿಸಿದ ಕಾರಣಗಳಿಂದಾಗಿ, ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ಇಳಿಸುತ್ತದೆ. ಅದರಿಂದಾಗಿ ಉತ್ಪಾದನೆ ಇಳಿಯುತ್ತದೆ. ಉದ್ಯೋಗಗಳು ನಷ್ಟವಾಗುತ್ತವೆ. ಅಲ್ಲದೇ, ಲಾಭಗಳ ಒಟ್ಟಾರೆ ಮಟ್ಟವೂ ಹೆಚ್ಚುವುದಿಲ್ಲ. ಆದರೆ, ಲಾಭದ ಈ ಒಟ್ಟಾರೆ ಮಟ್ಟದೊಳಗೆ, ಆ ಲಾಭವು ಸಣ್ಣ ಸಣ್ಣ ಬಂಡವಾಳಿಗರಿಂದ ಮತ್ತು ಸಣ್ಣ ಪುಟ್ಟ ಉತ್ಪಾದಕರಿಂದ ಕಾರ್ಪೊರೇಟ್ ವಲಯಕ್ಕೆ ಹೊರಳಿ ಅಲ್ಲಿ ಮರುಹಂಚಿಕೆಯಾಗುತ್ತದೆ. ಏಕೆಂದರೆ, ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿದ ಪರಿಣಾಮವಾಗಿ, ಸಣ್ಣ ಬಂಡವಾಳಿಗರ ಮತ್ತು ಕಿರು ಉತ್ಪಾದಕರ ಉತ್ಪನ್ನಗಳ ಬೇಡಿಕೆ ಕುಗ್ಗಿ ಅವರ ಲಾಭ ಹೆಚ್ಚುವುದಿಲ್ಲ. ಹಾಗಾಗಿ, ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿದ ಕ್ರಮವು ಕೇವಲ ಕಾರ್ಮಿಕರ ಮೇಲಿನ ದಾಳಿಯಷ್ಟೇ ಅಲ್ಲ; ಅದೇ ಸಮಯದಲ್ಲಿ ಸಣ್ಣ ಬಂಡವಾಳಿಗರು ಮತ್ತು ಸಣ್ಣಪುಟ್ಟ ಉತ್ಪಾದಕರ ಮೇಲೆ ನಡೆಸಿದ ಉದ್ದೇಶಪೂರ್ವಕವಲ್ಲದ ದಾಳಿಯೂ ಆಗುತ್ತದೆ. ಹಾಗಾಗಿ, ಇದು ಕೇವಲ ಕಾರ್ಮಿಕರಿಗಷ್ಟೇ ಅಲ್ಲದೆ, ಸಣ್ಣ ಸಣ್ಣ ಬಂಡವಾಳಿಗರು ಮತ್ತು ಸಣ್ಣ ಪುಟ್ಟ ಉತ್ಪಾದಕರೂ ಸೇರಿದಂತೆ ಸಮಾಜದ ಉಳಿದ ಜನರನ್ನು ತೊಂದರೆಗೆ ಈಡು ಮಾಡುವ ಮೂಲಕ ಕಾರ್ಪೊರೇಟ್ ವಲಯದ ಹಿತಾಸಕ್ತಿಗಳಿಗೆ ಪ್ರೋತ್ಸಾಹ ಕೊಡುತ್ತದೆ.

ಈ ಧೋರಣೆಯೇ ಬಿಜೆಪಿಯ ಕೇಂದ್ರ ಹಾಗೂ ರಾಜ್ಯಗಳ ಸರಕಾರಗಳ ಸಾಮಾನ್ಯ ಲಕ್ಷಣ. ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸುವ ಖಯಾಲಿಯ ಈ ಸರ್ಕಾರಗಳ ಜ್ಞಾನವು ಆರ್ಥಿಕ ಬ್ರಹ್ಮಾಂಡದ ಬಗ್ಗೆ ಕಾರ್ಪೊರೇಟ್ ಪ್ರಭೃತಿಗಳಿಂದ ಪಡೆದ ಅಪಾಯಕಾರಿಯಾಗಿ ತಿಳುವಳಿಕೆಯಿಂದ ಕೂಡಿದೆ. ಈ ತಿಳುವಳಿಕೆ ಸರಳವಾಗಿದೆ: ಉತ್ಪಾದನೆ ಮತ್ತು ಉದ್ಯೋಗಗಳ ಹೆಚ್ಚಳಗಳ ನಿರೀಕ್ಷೆಯಲ್ಲಿ ನೀವು ಕಾರ್ಪೊರೇಟ್‌ಗಳನ್ನು ಎಷ್ಟು ಮುದ್ದು ಮಾಡುತ್ತೀರೋ ಅಷ್ಟೂ ಒಳ್ಳೆಯದೇ. ಒಂದು ಶತಮಾನದ ಹಿಂದೆಯೇ ಅಪಖ್ಯಾತಿಗೊಳಗಾಗಿದ್ದ ತಿಳುವಳಿಕೆ ಇದು.

ಈ ತಿಳುವಳಿಕೆಯನ್ನು ಬಿಜೆಪಿಯು ಕಾರ್ಮಿಕರ ಹಕ್ಕುಗಳನ್ನು ತುಳಿದು ಅವರನ್ನು ಮಟ್ಟ ಹಾಕುವವರೆಗೂ ಕೊಂಡೊಯ್ಯುತ್ತದೆ. ಅದರ ಈ ವರ್ತನೆಯು, ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ನಡೆಸುವ ದಾಳಿಗಳನ್ನೇ ಹೋಲುತ್ತದೆ, ಎಳ್ಳಷ್ಟೂ ವ್ಯತ್ಯವಿಲ್ಲದಂತೆ. ಕಾರ್ಮಿಕರ ಮೇಲೆ ನಡೆಸುವ ದಾಳಿಗಳು ಬಿಜೆಪಿಯು ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ಪ್ರಯೋಗಿಸಿದ ದಾಳಿಗಳ ಮುಂದುವರಿಕೆಯೇ ಆಗಿದೆ. ಈ ದಾಳಿಗಳ ಆರ್ಥಿಕ ಪರಿಣಾಮಗಳು ವಿನಾಶಕಾರಿಯಾಗಲಿವೆ.

ಈ ಕೂಲಿಕಾರರು
ಈಗ 'ಘನತೆ'ಯನ್ನು
ಕೇಳುತ್ತಿದ್ದಾರೆ. ಏಕ್‌ದಂ
ಗೊಂದಲ ಆಗುತ್ತಿದೆ.
ಏನದರ ಅರ್ಥವೋ....



ವ್ಯಂಗ್ಯಚಿತ್ರ:
ಸಜಿತ್ ಕುಮಾರ್,
ಡೆಕ್ಕನ್ ಹೆರಾಲ್ಡ್

ಅಫ್ಘಾನಿಸ್ತಾನದಲ್ಲಿ ಅನೌಪಚಾರಿಕ ಯು.ಎಸ್ ಸಾಮ್ರಾಜ್ಯ?



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕಳೆದ 20 ವರ್ಷಗಳಿಂದ ಅಮೆರಿಕವು ಅಫ್ಘಾನಿಸ್ತಾನದ ಮೇಲೆ 'ಭಯೋತ್ಪಾದನೆ ವಿರುದ್ದ ಯದ್ದ'ವನ್ನು ನಡೆಸಿತ್ತು.

ಒಂದು ವರ್ಷಕ್ಕಿಂತ ಹೆಚ್ಚು ಕಾಲ ನಡೆದ ಸುದೀರ್ಘ ಮಾತುಕತೆಗಳ ನಂತರ, ಕತಾರ್ ನ ದೋಹಾದಲ್ಲಿ 2020 ರ ಫೆಬ್ರವರಿ 28 ರಂದು, 'ತಾಲಿಬಾನ್ ಮತ್ತು ಯು.ಎಸ್' ನಡುವೆ ಅಫ್ಘಾನಿಸ್ತಾನದಲ್ಲಿ ಶಾಂತಿ ಸ್ಥಾಪನೆಗಾಗಿ ಒಪ್ಪಂದಕ್ಕೆ ಸಹಿ ಮುದ್ರೆ ಒತ್ತಲಾಯಿತು. ತನ್ನ ಮಿಲಿಟರಿ ಪಡೆಗಳನ್ನು ಹಂತ ಹಂತವಾಗಿ ಹಿಂಪಡೆದು ಕೊಳ್ಳುವುದಾಗಿ ಅಮೆರಿಕ ಈ ಒಪ್ಪಂದದಲ್ಲಿ ಭರವಸೆ ನೀಡಿದೆ. ಆದರೆ, ಇದರಿಂದ ಅಫ್ಘಾನಿಸ್ತಾನದಲ್ಲಿ ಶಾಂತಿ ನೆಲೆಸೇ ಬಿಡುತ್ತದೆ ಎಂಬ ಭ್ರಮೆ ಯಾರಿಗೂ ಇಲ್ಲ.

ಸೆಪ್ಟೆಂಬರ್ 11, 2001ರ ದಾಳಿಯ ನಂತರ ಆರಂಭಗೊಂಡು ಸುಮಾರು ಎರಡು ದಶಕಗಳ ಹಳೆಯದಾದ ಆಫ್ಘಾನಿಸ್ತಾನದ ಮೇಲಿನ ಈ ಯುದ್ದದಲ್ಲಿ ಅಮೆರಿಕಾದ ಪಾಲ್ಗೊಳ್ಳುವಿಕೆಯ ಅಂತ್ಯದ ಆರಂಭವನ್ನು ಈ ಒಪ್ಪಂದ ಸೂಚಿಸುತ್ತದೆ ಎಂಬ ವಿಶ್ವಾಸವಂತೂ ಇನ್ನು ಅಫ್ಘಾನಿಸ್ತಾನದ ಜನರಲ್ಲಿ ಮೂಡಿಲ್ಲವೆನ್ನಬಹುದು. ಏಕೆಂದರೆ, ಒಪ್ಪಂದವು ಅಮೆರಿಕ ಬೆಂಬಲಿತ ಅಫ್ಘಾನಿಸ್ತಾನ ಸರ್ಕಾರವನ್ನು ಹೊರಗಿಟ್ಟು, ಯುಎಸ್ ಸಾಮ್ರಾಜ್ಯ ಮತ್ತು ಅಫ್ಘಾನಿಸ್ತಾನದ ಸರ್ಕಾರೇತರ ಸಂಸ್ಥೆಯಾದ 'ಇಸ್ಲಾಮಿಕ್ ಎಮಿರೇಟ್ಸ್ ಆಫ್ ಅಫ್ಘಾನಿಸ್ತಾನ' ಅಥವಾ 'ತಾಲಿಬಾನ್' ನಡುವೆ ಮಾಡಿಕೊಂಡ ಒಪ್ಪಂದ ವಾಗಿದೆ.

ಶಾಂತಿಗಾಗಿ ತುಡಿತ ಮತ್ತು ಅಮೆರಿಕಾದ ಕೈಗೊಂಬೆ ವಿದೇಶಿ ಆಡಳಿತವನ್ನು ಕೊನೆಗೊಳಿಸುವುದು ಅಫ್ಘಾನಿಸ್ತಾನದ ಜನರ ಹಂಬಲ. ಈ ನಿಟ್ಟಿನಲ್ಲಿ, ತಮ್ಮ ದೇಶದಲ್ಲಿ ದೀರ್ಘಕಾಲಿನ ಕದನ ವಿರಾಮ ಮತ್ತು ಶಾಂತಿಯನ್ನು ಸಾಧಿಸಲು ಅಫ್ಘಾನಿಸ್ತಾನ ರಾಜಕೀಯ ಶಕ್ತಿಗಳ ನಡುವೆ ಸಮಗ್ರ ಒಳಸಂವಾದವನ್ನು ನಿರೀಕ್ಷಿಸುತ್ತಿದ್ದಾರೆ. ತಾಲಿಬಾನ್ ಒಪ್ಪಂದವೊಂದೇ ಶಾಂತಿ ತರದು ಎಂದು ಅವರಿಗೆ ಗೊತ್ತಿದೆ.

ಆದಾಗ್ಯೂ, ಪ್ರಸ್ತುತ ಈ ಒಪ್ಪಂದವು ಒಂದು ರೀತಿಯಲ್ಲಿ ಮಹತ್ವಾಕಾಂಕ್ಷೆಯದ್ದು ಎಂದು ಪರಿಗಣಿಸಲಾಗಿದೆ. ಮೊದಲನೆಯದಾಗಿ, ಇದು ಯುಎಸ್ ಸೈನ್ಯದ ಪ್ರಸ್ತುತ ಬಲದ ಮಟ್ಟವನ್ನು ಶರತ್ತುಗಳೊಂದಿಗೆ 12,000 ದಿಂದ 8600 ಕ್ಕೆ ಇಳಿಸುವ ಗುರಿಯನ್ನು ಹೊಂದಿದೆ. ಎರಡನೆಯದು, ಈ ಒಪ್ಪಂದವು ತಾಲಿಬಾನ್ ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ತ್ಯಜಿಸಿ, ಅಲ್ ಖೈದಾ ದಂತಹ ಭಯೋತ್ಪಾದಕ ಗುಂಪುಗಳೊಂದಿಗೆ ತನ್ನ ನಂಟನ್ನು ಕಡಿತಗೊಳಿಸಲು ನಿರೀಕ್ಷಿಸಲಾಗಿದೆ.

ಆದರೆ, ದೋಹಾ ಒಪ್ಪಂದಕ್ಕೆ ಸಹಿ ಹಾಕಿದ ಮರುದಿನವೇ, ತಾಲಿಬಾನ್ ಅಫ್ಘಾನಿಸ್ತಾನದ ಸರ್ಕಾರಿ ಪಡೆಗಳ ಮೇಲೆ ದಾಳಿ ನಡೆಸಿತು. ಕಾಬೂಲ್ ನಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಲಿದೆ ಎಂದು ನಿರೀಕ್ಷೆಯಲ್ಲಿದ್ದ ಅಂತರಾಷ್ಟ್ರೀಯ ಸಮುದಾಯಕ್ಕೆ ಈ ದಾಳಿಯು ಬೆಚ್ಚಿ ಬೀಳಿಸಿತು. ತಾಲಿಬಾನ್ ಇದನ್ನು ತನ್ನ ರಾಷ್ಟ್ರೀಯವಾದದ ವಿಜಯವೆಂದು ಹೇಳಿಕೊಂಡಿದೆ. ಇತ್ತೀಚೆಗೆ ತಾಲಿಬಾನ್ ಮತ್ತು ಅಫ್ಘಾನ್ ಪಡೆಗಳ ನಡುವೆ ಕದನ ವಿರಾಮ ಮುರಿದು ಬಿದ್ದಿದ್ದು, ಒಂದೇ ದಿನದಲ್ಲಿ (ಮೇ 19ರಂದು) 34 ಪ್ರಾಂತಗಳಲ್ಲಿ 19 ರಲ್ಲಿ ಘರ್ಷಣೆಗಳು ನಡೆದಿವೆ. ಉತ್ತರ ಅಫ್ಘಾನಿಸ್ತಾನದ ಕುಂಡುಶ್ ಎಂಬ ಪಟ್ಟಣದಲ್ಲಿ ಅದನ್ನು ವಶಪಡಿಸಲು ತಾಲಿಬಾನ್ ತೀವ್ರ ದಾಳಿ ನಡೆಸಿದ್ದು, ಅವರನ್ನು ಹಿಮ್ಮೆಟ್ಟಿಸಲು ಅಫ್ಘಾನ್ ಪಡೆಗಳು ಬಾಂಬ್ ದಾಳಿ ನಡೆಸಿದ್ದವು.

ಚೀನಾ-ರಷ್ಯಾದ ಬಲಗೊಳ್ಳುತ್ತಿರುವ ಮೈತ್ರಿಯನ್ನು ಎದುರಿಸುವ ಹಿನ್ನೆಲೆಯಲ್ಲಿ, ಟೆಹ್ರಾನ್ ಮತ್ತು ಮಧ್ಯ ಏಷ್ಯಾದಲ್ಲಿ ಅಮೆರಿಕಾದ ಮಧ್ಯಪ್ರವೇಶ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಯು.ಎಸ್ ಅಫ್ಘಾನಿಸ್ತಾನ ದಿಂದ ಪಡೆಗಳನ್ನು ಮರಳಿ ಮನೆಗೆ ತರುವುದು ಅಸಂಭವ. ಹೀಗಾಗಿ, ಅಫ್ಘಾನಿಸ್ತಾನದಲ್ಲಿ ಯುಎಸ್ ಸಾಮ್ರಾಜ್ಯದ ಪಾತ್ರವು ಬದಲಾವಣೆ ಆಗಬಹುದೇ ವಿನಃ, ಬೇರೆ ಏನನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಈಗ ಅಫ್ಘಾನಿಸ್ತಾನ ವಸಾಹತುವೇ ಆಗಿದ್ದು, ಅದನ್ನು ಅನೌಪಚಾರಿಕ ವಸಾಹತು ಮಾಡಿಕೊಳ್ಳಬಹುದು. ಹಾಗಾಗಿ, ಕಾಬೂಲ್ ನಲ್ಲಿರುವ 1000 ಅಥವಾ ಅದಕ್ಕಿಂತಲೂ ಕಡಿಮೆಯ ಮಟ್ಟಕ್ಕೆ ಯುಎಸ್ ಮಿಲಿಟರಿ ಅಧಿಕಾರಿ ಗಳನ್ನು ಮಾತ್ರ ಕಡಿತ ಮಾಡಿ, ಅಫ್ಘಾನಿಸ್ತಾನ ವನ್ನು ಯುಎಸ್ ಆಳುತ್ತಲೇ ಇರಲು ಬಯಸುತ್ತದೆ ಎನ್ನಬಹುದು.

ಯುದ್ದವನ್ನು ಗೆಲ್ಲಲು ಸಾಧ್ಯವಾಗದ ಕಾರಣ, ಅಮೆರಿಕಾ ಅಫ್ಘಾನಿಸ್ತಾನದಿಂದ ಹೊರಟು ಹೋಗುತ್ತಿದೆ ಎಂದು ಹಲವರ ಅಭಿಪ್ರಾಯವಾಗಿದೆ. ಆದರೆ ಇದು ನಿಜವಲ್ಲ. ಅಮೆರಿಕನ್ನರು ಕಾಬೂಲ್ ಗೆ ಬಂದು ಲಗ್ಗೆ ಹಾಕಿದ್ದು, ಅಫ್ಘಾನಿಸ್ತಾನವನ್ನು ಅಥವಾ ಅಲ್ಲಿನ ಜನರ ಹೃದಯ ಮತ್ತು ಮನಸ್ಸುಗಳನ್ನು ಗೆಲ್ಲಲು ಅಲ್ಲ. ಯು.ಎಸ್ ತನ್ನ ಭೌಗೋಳಿಕ-ರಾಜಕೀಯ ಮತ್ತು ಮಿಲಿಟರಿ ವ್ಯೂಹದ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಕಾಬೂಲ್ ಅನ್ನು ಸೆಪ್ಟೆಂಬರ್ 11 ರ ದಾಳಿಯ ನೆಪದಲ್ಲಿ ಆಕ್ರಮಿಸಿಕೊಂಡಿತ್ತು. 'ಮಿಲಿಟರಿ ಕೈಗಾರಿಕಾ ಸಂಕೀರ್ಣ' ವನ್ನು(ಎಂ.ಐ.ಸಿ) ಯ ಬಲವರ್ಧನೆ ಮತ್ತು ವಿಸ್ತರಣೆ ಮಾಡಿಕೊಳ್ಳಲು ಕಾಬೂಲ್‌ಗೆ ಕಾಲಿಟ್ಟಿತು. ಯುಎಸ್ ತನ್ನ 700 ಶತಕೋಟಿ ಡಾಲರುಗಳ ಬೃಹತ್ ವಾರ್ಷಿಕ ರಕ್ಷಣಾ ಬಜೆಟನ್ನು ಸಮರ್ಥನೆ ಮಾಡಲು ನಿರಂತರವಾಗಿ ಯುದ್ದ ಮತ್ತು ಹಿಂಸಾಚಾರವನ್ನು ಬಯಸುತ್ತದೆ.

ಕಳೆದ ಎರಡು ದಶಕಗಳ ನಂತರ, ಅಮೆರಿಕ ತನ್ನ ಶತ್ರುವಾಗಿದ್ದ ತಾಲಿಬಾನ್ ಜತೆ ಮಾತುಕತೆ ನಡೆಸಲು ಏಕೆ ಉತ್ಸುಕವಾಗಿದೆ? ಇಸ್ಲಾಮಿಕ್ ಮೂಲಭೂತವಾದಿ ಭಯೋತ್ಪಾದಕ ಗುಂಪಾದ ತಾಲಿಬಾನ್ ಜತೆ ಒಪ್ಪಂದಕ್ಕೆ ಅಮೆರಿಕದ ಜನಾಬಿಪ್ರಾಯದ ಸಮ್ಮತಿ ಗಳಿಸುವುದು ಕಷ್ಟಸಾರ್ಧಯವಾದರೂ, ತಾಲಿಬಾನನ್ನು ಅಫ್ಘಾನಿಸ್ತಾನದಲ್ಲಿ ನೇಮಕ ಮಾಡಲು ಅಮೆರಿಕಾ ಉತ್ಸಾಹ ತೋರುತ್ತಿದೆ ಏಕೆ? ಒಂದು ಸ್ಪಷ್ಟ ಕಾರಣವೆಂದರೆ, ಇದೀಗ ಅಮೆರಿಕಾದ ಆರ್ಥಿಕ ಪರಿಸ್ಥಿತಿ ಬಿಗಿಯಾಗಿರುತ್ತದೆ. ಸುದೀರ್ಘ ಕಾಲದ ಯುದ್ದದಲ್ಲಿ ತೊಡಗಿಸಿಕೊಂಡ ಕಾರಣ, ಇದರ ವೆಚ್ಚಗಳ ಬಗ್ಗೆ ಅಮೆರಿಕಾದಲ್ಲಿ ಪುನರ್ವಿಮರ್ಶೆ ನಡೆಯುತ್ತಿದೆ. ಈ ಸಮಯದಲ್ಲಿ, ವಿಶೇಷವಾಗಿ ಯುದ್ಧ ಖರ್ಚುಗಳಿಗೆ ಅದರ ಮಿತ್ರ ರಾಷ್ಟ್ರಗಳ ಸಹಕಾರವನ್ನು ಉಳಿಸಿಕೊಳ್ಳಲು ಕಷ್ಟವಾಗುತ್ತಿದೆ. ಇದಲ್ಲದೇ, ಚೀನಾ-ರಷ್ಯಗಳ ಸವಾಲು ಬೆಳೆಯುತ್ತಿದೆ. ಅವುಗಳ ಜತೆಗಿನ ಸಂಘರ್ಷ-ಯುದ್ದಗಳಿಗೆ ತನ್ನ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳಲು ಬಿಡಿಸಿ ಸಜ್ಜುಗೊಳಿಸಲು ಯು.ಎಸ್ ಉದ್ದೇಶಿಸಿದೆ.

ಕತಾರ್ ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು, ಅಲ್ಲಿನ ಭಾರತೀಯ ರಾಯಭಾರಿ ಪಿ.ಕುಮಾರನ್ ಸಾಕ್ಷಿಯಾಗಿದ್ದರು. ಆದರೆ ಪಾಕಿಸ್ತಾನ ಬೆಂಬಲಿತ ತಾಲಿಬಾನ್ ಅಫ್ಘಾನಿಸ್ತಾನದ ಹೊಸ ಅಂಚಿನಲ್ಲಿ ಉಳಿಯುವಂತೆ ನೋಡಿಕೊಳ್ಳುವಲ್ಲಿ ಶ್ರಮಿಸಿದ ಭಾರತೀಯ ರಾಜತಾಂತ್ರಿಕತೆಗೆ ಇಂದು ತೀವ್ರ ಹಿನ್ನಡೆ ಉಂಟಾಗಿದೆ. ಈ ಬೆಳವಣಿಗೆಗಳಿಂದ ಪಾಕಿಸ್ತಾನವು ಖಂಡಿತ ಸಂತೋಷಗೊಂಡಿದೆ ಎನ್ನಬಹುದು. ಇದಲ್ಲದೇ, ಪಾಕಿಸ್ತಾನದ ರಾಜತಾಂತ್ರಿಕ ಗಣ್ಯರು ತಾಲಿಬಾನ್ ಜೊತೆ ಒಪ್ಪಂದ ಮಾಡಿಕೊಳ್ಳಲು ಟ್ರಂಪ್ ಆಡಳಿತಕ್ಕೆ ಸಹಾಯ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ತಾಲಿಬಾನ್ ಅಧಿಕಾರಕ್ಕೆ ಬಂದಾಗ ಅಫ್ಘಾನಿಸ್ತಾನ ದಲ್ಲಿ ಪಾಕಿಸ್ತಾನದ ಕೈ ಮೇಲಾಗುತ್ತದೆ.

ಅಫ್ಘಾನಿಸ್ತಾನ ದಲ್ಲಿ ವಾಷಿಂಗ್ಟನ್ ನ ಭದ್ರತಾ ಹಿತಾಸಕ್ತಿಗಳನ್ನು ನೋಡಿಕೊಳ್ಳುವುದಾಗಿ ತಾಲಿಬಾನ್ ಭರವಸೆ ನೀಡಿದ್ದು, ಯುಎಸ್ ನ ಹಿತಾಸಕ್ತಿ ಗಳಿಗೆ ಬೇರೆ ಯಾವುದೇ ಶಕ್ತಿಗಳಿಂದ ಧಕ್ಕೆ ಬರದಂತೆ ತಡೆಹಿಡಿಯಲು ಕಾತರಿಸುತ್ತದೆ ಎನ್ನುವುದಾದರೆ, ದೋಹಾ ಒಪ್ಪಂದ ವು ಯುಎಸ್ ನ ಒಂದು ಹೊಸ ಅನೌಪಚಾರಿಕ ವಸಾಹತು ಅಲ್ಲದೆ ಮತ್ತೇನು?

ಶಾಂಘೈ ಸಹಕಾರ ಸಂಸ್ಥೆ (ಎಸ್.ಸಿ.ಒ) ಯಲ್ಲಿ, ತಾಲಿಬಾನ್ ಪ್ರಾಬಲ್ಯದ ಆಡಳಿತವು ಹೇಗೆ ವರ್ತಿಸುತ್ತದೆ? ಅಫ್ಘಾನಿಸ್ತಾನ ದಲ್ಲಿ ಮೂಲಸೌಕರ್ಯ ಹೂಡಿಕೆಗಾಗಿ ಚೀನಿ ಮತ್ತು ರಷ್ಯಾದ ಮಾತುಕತೆಗಳಿಗೆ ಅದು ಹೇಗೆ ಸ್ಪಂದಿಸುತ್ತದೆ? ಚೀನಾ ಮತ್ತು ಇರಾನ್ ಗೆ ಹತ್ತಿರವಾಗಲು ಅಮೆರಿಕ ಅವಕಾಶ ನೀಡುತ್ತದೆಯೇ? ತಾಲಿಬಾನ್ ಈ ಪ್ರದೇಶದಲ್ಲಿ ಎಷ್ಟು ಸಮಯದವರೆಗೆ, ಅಮೆರಿಕಾದ ಹಿತಾಸಕ್ತಿಗಳನ್ನು ಪೂರೈಸುತ್ತದೆ?

ಇವೆಲ್ಲಕ್ಕಿಂತ, ಮುಖ್ಯವಾಗಿ, ಬೇರೆ ಪ್ರಮುಖ ಯುದ್ಧ ಆರಂಭವಾಗದಿದ್ದರೆ, ಯುಎಸ್ ಮಿಲಿಟರಿ-ಕೈಗಾರಿಕಾ ಸಂಕೀರ್ಣ ಎಷ್ಟು ಸಮಯದ ವರೆವಿಗೂ, ಯುದ್ದವಿಲ್ಲದೆ ಸುಮ್ಮನೇ ಕುಳಿತುಕೊಳ್ಳಬಲ್ಲದು? ಹೊಸ ಶಸ್ತ್ರಾಸ್ತ್ರಗಳ ಅಭಿವೃದ್ಧಿಯು, ಹೊಸ ಲೈವ್ ಕ್ಷೇತ್ರಗಳನ್ನು ಬಯಸುತ್ತಿರುತ್ತದೆ. ಅಮೆರಿಕಾದ ಯುದ್ದೋನ್ಮಾದ ಕಾರ್ಯತಂತ್ರ ಗಳು ಯಾವಾಗಲೂ, ಹೊಸ ಯುದ್ದದ ತಾಣಗಳನ್ನು ಹುಡುಕುತ್ತಾ ಇರುತ್ತದೆ. ಹಾಗಾಗಿ, ದೋಹಾ ಒಪ್ಪಂದವು ಅಫ್ಘಾನಿಸ್ತಾನದಲ್ಲಿ ಶಾಂತಿಯನ್ನು ತರಬಲ್ಲದೇ? ಕಾದು ನೋಡಬೇಕು.

ಚೀನಾದ ಮೇಲಿನ ಯು.ಎಸ್ ವ್ಯಾಪಾರ ಸಮರಕ್ಕೆ ಕೋರೊನಾ ತಿರುವು

ಟ್ರಂಪ್ ಆಡಳಿತವು ಇದೀಗ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು, ಚೀನಾದ ವಿರುದ್ದ ವ್ಯಾಪಾರ ಸಮರಕ್ಕೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಯುಎಸ್ ನಲ್ಲಿ ಈಗಾಗಲೇ 16 ಲಕ್ಷಕ್ಕೂ ಹೆಚ್ಚು ಜನರು ಕೋರೊನಾ ಸೋಂಕಿಗೆ ಒಳಗಾಗಿದ್ದಾರೆ. ಸುಮಾರು 96,000 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಪೆಬ್ರವರಿ ತಿಂಗಳಲ್ಲಿ ಇದೊಂದು ಕೇವಲ ಒಂದು ಸಣ್ಣ ಜ್ವರ ಎಂದಿದ್ದ ಟ್ರಂಪ್, ಇದೀಗ ಚೀನಾದ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಮಾತ್ರವಲ್ಲದೆ, ಇದು ಚೀನಾದ ವ್ಯೂಹಾನ್ ವೈರಾಲಜಿ ಲ್ಯಾಬ್ ನಿಂದ ಹುಟ್ಟಿದ ಕಾರಣ, ಉಂಟಾಗಿರುವ ಎಲ್ಲಾ ಖರ್ಚುಗಳನ್ನು ಚೀನಾವೇ ಭರಿಸಬೇಕೆಂದು ಹೇಳುತ್ತಿದ್ದಾರೆ.

ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ನಿಭಾಯಿಸುವಲ್ಲಿ ಸಂಪೂರ್ಣ ಅಸಮರ್ಥತೆ ಮತ್ತು ನಿರ್ಲಕ್ಷ ತೋರಿದ ಟ್ರಂಪ್ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ಯಾರನ್ನಾದರೂ ಅಥವಾ ಯಾವ ದೇಶವನ್ನಾದರೂ ಬಲಿಪಶು ಮಾಡುವಲ್ಲಿ ನಿಸ್ಸೀಮರೆಂದು ಜಗತ್ತಿಗೆ ಗೊತ್ತಿರುವ ಸಂಗತಿ. ಹೀಗಾಗಿ, ಚೀನಾದ ಮೇಲೆ ಕೋವಿಡ್-19 ಸಮರವನ್ನು ಸಾರಿದ್ದಾರೆ. ಈಗಾಗಲೇ ಚೀನಾದ ಮೇಲೆ ನಡೆಯುತ್ತಿರುವ ವಾಣಿಜ್ಯ ಸಮರಕ್ಕಿಂತ ದೊಡ್ಡ ಪ್ರಮಾಣದಲ್ಲಿ ಕೋರೊನಾದೊಂದಿಗೆ ತಳುಕು ಹಾಕಿಕೊಂಡು, ಚೀನಾದ ಮೇಲಿನ ತನ್ನ ವಾಣಿಜ್ಯ ಸಮರ ಅಭಿಯಾನವನ್ನು ವಿಸ್ತರಣೆಗೊಳಿಸುತ್ತಿದ್ದಾರೆ.

ಯು.ಎಸ್ ನ 'ಏಕೈಕ ಸೂಪರ್ ಪವರ್' ಪ್ರಾಬಲ್ಯಕ್ಕೆ ಚೀನಾ ಮತ್ತು ರಷ್ಯಾಗಳು ಸವಾಲು ಒಡ್ಡಿವೆ. ಆರ್ಥಿಕವಾಗಿ, ಚೀನಾ ತನ್ನ ಉತ್ಪಾದನಾ ಸಾಮರ್ಥ್ಯದಿಂದ ಮತ್ತು ಮಿಲಿಟರಿ ಸಾಮರ್ಥ್ಯ ಮತ್ತು ರಣನೀತಿಗಳಿಂದ ರಷ್ಯಾ ಮಿಲಿಟರಿಯಾಗಿ ಸವಾಲು ಒಡ್ಡಿವೆ. ಚುನಾವಣಾ ಸಮಯದಲ್ಲಿ ಮತ್ತು ಆಂತರಿಕ ರಾಜಕೀಯ ಪ್ರಚಾರದಲ್ಲಿ ರಷ್ಯಾದ ಬದಲು ಈಗ ಚೀನಾವನ್ನು ಪ್ರಮುಖ ವೈರಿಯಾಗಿ ಬಿಂಬಿಸಲಾಗುತ್ತಿದೆ.

ಯು.ಎಸ್ ನ ಮುಖ್ಯವಾಹಿನಿ ಮಾಧ್ಯಮಗಳು, ಚೀನಾ ವೈರಾಣುವನ್ನು ಸೃಷ್ಟಿಸಿದೆ ಅಥವಾ ವಿಶ್ವ ಆರೋಗ್ಯ ಸಂಸ್ಥೆ ಯೊಂದಿಗೆ ಕೈಜೋಡಿಸಿ ಸೋಂಕು ಹರಡುವಿಕೆಯನ್ನು ಮರೆ ಮಾಚಿದೆ. ಎಂಬಿತ್ಯಾದಿ ಸುಳ್ಳುಗಳನ್ನು ಸೃಷ್ಟಿಸಿವೆ. ಇದಕ್ಕೆ ಪುರಾವೆಯಾಗಿ ಯು.ಎಸ್ ನ ಗುಪ್ತಚರ ಸಂಸ್ಥೆಗಳಿಂದ 'ಸೋರಿಕೆಯಾದ (ಸುಳ್ಳು) ಮಾಹಿತಿ'ಗಳನ್ನೇ ಮಾಧ್ಯಮಗಳು ಉದ್ಧರಿಸುತ್ತಿವೆ. ಹಿಂದಿನಿಂದಲೂ, ಅದರಲ್ಲೂ ಅಲ್ಲಿನ ಚುನಾವಣಾ ವರ್ಷಗಳಲ್ಲಿ, ಇದೇ ರೀತಿ ಸುಳ್ಳುಗಳನ್ನು ಸೃಷ್ಟಿಸಲಾಗುತ್ತಿದೆ. ಇರಾಕ್ ನಲ್ಲಿ ಸಾಮೂಹಿಕ ವಿನಾಶಕಾರಿ ಶಸ್ತ್ರಾಸ್ತ್ರಗಳ ಅಸ್ತಿತ್ವ, ಸಿರಿಯಾದಲ್ಲಿ ರಾಸಾಯನಿಕ ಶಸ್ತ್ರಾಸ್ತ್ರಗಳ ಬಳಕೆ, ರಷ್ಯಾ 2016 ರಲ್ಲಿ ಯುಎಸ್ ಚುನಾವಣೆಗಳನ್ನು ಹ್ಯಾಕ್ ಮಾಡಿತ್ತು - ಹೀಗೆ ಈ ಮಾಧ್ಯಮಗಳ (ಸೃಷ್ಟಿಸಿ) ವ್ಯಾಪಕವಾಗಿ ಬಿತ್ರಿಸಿದ್ದ 'ಸುದ್ದಿಗಳು' ಕಟ್ಟುಕತೆಗಳೆಂದು ಆನಂತರ ಸಾಬೀತಾಗಿತ್ತು. ಆದರೂ ಅದೇ ರೀತಿಯಲ್ಲಿ ಇದೀಗ, ಚೇನಾದ ವಿರುದ್ಧ ಸುಳ್ಳು ಪ್ರಚಾರ ನಡೆದಿದೆ. ಚೀನೀಯರ, ಏಶ್ಯನ್ನರ ವಿರುದ್ಧ ಯು.ಎಸ್ ಬಿಳಿಯರಲ್ಲಿ ವ್ಯಾಪಕವಾಗಿರುವ ಪೂರ್ವಗ್ರಹ, ಅಜ್ಞಾನ ಮತ್ತು ಜನಾಂಗ-ದ್ವೇಷಗಳು ಹಾಗೂ ಸಾರ್ವತ್ರಿಕವಾಗಿ ಎಲ್ಲ ದೇಶೀಯರ ವಿರುದ್ಧ ಇರುವ ಅನ್ಯದ್ವೇಷದಿಂದಾಗಿ ಇಂತಹ ಸುಳ್ಳು ಪ್ರಚಾರಗಳಿಗೆ ಯು.ಎಸ್ ಜನ ಬಲಿಬೀಳುತ್ತಿದ್ದಾರೆ.

ಸಾಂಕ್ರಾಮಿಕ ರೋಗವು ಈಗಾಗಲೇ, ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ಆಳವಾದ ಬಿರುಕುಗಳನ್ನು ಮತ್ತು ದೋಷಗಳನ್ನು ತೋರಿಸುತ್ತಿದೆಯಷ್ಟೇ. ಇರಾನ್ ಮತ್ತು ವೆನೆಜುವೆಲಾದ ಸಂಪತ್ತನ್ನು ನಿರ್ದಯವಾಗಿ ಯುಎಸ್ ಕದಿಯುತ್ತಿದೆ. ಅದರಲ್ಲೂ, ಅವುಗಳ ಸಂಪತ್ತು ಯು.ಎಸ್ ನ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇರುವುದರಿಂದ ಅವನ್ನು ದೋಚಲಾಗುತ್ತಿದೆ. ಈ ರೀತಿ ಚೀನಾದೊಂದಿಗೆ ವರ್ತಿಸಲು ಅಸಾಧ್ಯವೆಂದು ಟ್ರಂಪ್ ಗೆ ಗೊತ್ತಿದೆ. ಉದಾಹರಣೆಗೆ, ಯುಎಸ್ ಚೀನಾಕ್ಕೆ ಸಾಲವಾಗಿ ನೀಡಬೇಕಾದ 1.09 ಟ್ರಿಲಿಯನ್ ಡಾಲರ್ ಗಳನ್ನು ಮರು ಪಾವತಿಸಲು ನಿರಾಕರಿಸಲು ಸಾಧ್ಯವಿಲ್ಲ. ಹಾಗೇನಾದರೂ ಮಾಡಿದರೆ, ಡಾಲರ್ ಅನ್ನು ಜಾಗತಿಕ ಮೀಸಲು ಕರೆನ್ಸಿಯಾಗಿ ಬಳಸುವ ಅಪಾಯವನ್ನು ಎಲ್ಲಾ ದೇಶಗಳು ಅರಿತು ಕೊಂಡು, ಡಾಲರ್ ಬಳಕೆ ನಿಲ್ಲಿಸಿದರೆ ಅದು ಡಾಲರನ್ನು ಮುಳುಗಿಸಿ ಬಿಡಬಲ್ಲದು ಎಂಬ ಆತಂಕ ಅಮೆರಿಕಾಕ್ಕೆ ಇದೆ. ಹಾಗಾಗಿ, ಚೀನಾದ ಮೇಲೆ ವಾಣಿಜ್ಯ ಸಮರವನ್ನು ಕೊರೋನಾ ನೆಪದಲ್ಲಿ ತೀವ್ರಗಳಿಸಲು ಹೊರಟಿದೆ.

JANASHAKTHI KANNADA VARA PATRIKE May 25-31, 2020 Price: Rs. 10/- Date of Publication: 12 May 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕಾರ್ಮಿಕ ಕಾನೂನು ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ, ವಿದ್ಯುತ್ ಖಾಸಗೀಕರಣ, ವಿದ್ಯುತ್ ದರ ಏರಿಕೆ, ಗ್ರಾಮ ಪಂಚಾಯತ್‌ಗಳಿಗೆ ಆಡಳಿತ ಸಮಿತಿ ಸದಸ್ಯರ ನೇಮಕಾತಿ ವಿರೋಧಿಸಿ ಸಿಪಿಐಎಂನಿಂದ ಪ್ರತಿಭಟನೆ



ಹಾಸನದಲ್ಲಿ ಪ್ರತಿಭಟನೆ


ಉತ್ತರ ಕನ್ನಡದಲ್ಲಿ ಮನವಿ ಸಲ್ಲಿಸುತ್ತಿರುವುದು


ಧಾರವಾಡದಲ್ಲಿ ಮನವಿ ಸಲ್ಲಿಸುತ್ತಿರುವುದು

ಸುರಕ್ಷಾ ಸಾಧನಗಳನ್ನು ನೀಡಲು ಒತ್ತಾಯಿಸಿ ಬಿಸಿಯೂಟ ನೌಕರರ ಪ್ರತಿಭಟನೆ

ರಾಮದುರ್ಗ: ಕ್ವಾರಂಟೈನಲ್ಲಿರುವ ಜನರಿಗೆ ಅಡುಗೆ ಮಾಡಿ ವಿತರಿಸಲು ಸಿದ್ದರಿದ್ದು ನಮಗೆ ಸುರಕ್ಷಾ ಸಾಧನಗಳನ್ನು (ಮಾಸ್ಕ್, ಸ್ಯಾನಿಟೈಜರ್, ಹ್ಯಾಂಡಗ್ಲೋಸ್) ನೀಡಬೇಕೆಂದು ಹಾಗೂ ಕೆಲಸ ಮಾಡಿದ ದಿನಗಳಿಗೆ ವೇತನ ನೀಡಬೇಕೆಂದು ಬಿಸಿಯೂಟ ನೌಕರರು ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಬಿಸಿಯೂಟ ಯೋಜನೆಯಲ್ಲಿ ಅತ್ಯಂತ ದುರ್ಬಲ ವರ್ಗಕ್ಕೆ ಸೇರಿದ ಸುಮಾರು 10 ಸಾವಿರ ಬಡ ಹೆಣ್ಣು ಮಕ್ಕಳು ಇಡೀ ಜಿಲ್ಲೆಯ ಹಿರಿಯ-ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಬಿಸಿಯೂಟ ಯೋಜನೆಯಲ್ಲಿ ದುಡಿಯುತ್ತಿದ್ದಾರೆ. ಇವರಿಗೆ ಬೇಸಿಗೆ ದಿನಗಳಲ್ಲಿ ಬರಗಲಾ ಸಂದರ್ಭದಲ್ಲಿ ಶಾಲೆಗಳಲ್ಲಿ ಅಡುಗೆಯನ್ನು ಮಾಡುತ್ತಿದ್ದರು. ಆದರೇ ಈಗ ಕೊರೋನಾ ಸೋಂಕು ಇರುವದರಿಂದ ಏಪ್ರೀಲ್-ಮೇ ತಿಂಗಳಲ್ಲಿ ಇವರು ಬದುಕು ನಡೆಸುವದು ತುಂಬಾ ದುಸ್ಥರವಾಗಿದೆ. ಆದ್ದರಿಂದ ಜಿಲ್ಲೆಯಲ್ಲಿ ಯಾವುದೇ ತಾಲೂಕಿನಲ್ಲಿ ಕ್ವಾರಂಟೈನಲ್ಲಿರುವವರಿಗೆ ಬಿಸಿಯೂಟ ದವರು ಅವರಿಗೆ ಅಡುಗೆ ಮಾಡಿ ಕೊಡುತ್ತಿದ್ದರೆ ಅವರಿಗೆ ಸುರಕ್ಷಾ ಸಾಧನಗಳನ್ನು




ಹಾಗೂ ವೇತನವನ್ನು ನೀಡಬೇಕೆಂದು ಕಾರ್ಮಿಕ ಮುಖಂಡ ಜಿ.ಎಂ. ಜೈನೆಖಾನ್ ಒತ್ತಾಯಿಸಿದ್ದಾರೆ.

ತಾಲೂಕಾಧ್ಯಕ್ಷೆ ತುಳಸಮ್ಮ ಮಾಳದಕರ, ನಾಗರತ್ನಾ ಮಾಳಿ, ಪ್ರೇಮಾ ಜಾಧವ, ಪಾರ್ವತಿ ಹಂಪನ್ನವರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 19 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :



* ಗಡ್ಡ ಬಿಟ್ಟಿದ್ದಕ್ಕೆ ಮುಸ್ಲಿಂ ಎಂದು ಹಲ್ಲೆ ಮಾಡಿದರು !? (ಮೇ.22)
* ಜನತೆಯ ಮೇಲೆ ಯುದ್ಧ ನಡೆಸಿರುವ ಸರಕಾರಗಳೊಂದಿಗೆ ಹೇಗೆ ನಿಲ್ಲಬೇಕು? (ಮೇ.21)
* ಮೋದಿ ಕೊವಿಡ್ ಮದ್ದು :ಕಾಯಿಲೆಯನ್ನುಗುಣಪಡಿಸದ ಪಥ್ಯ (ಮೇ.20)
* ಆತ್ಮನಿರ್ಭರ್ ಪ್ಯಾಕೇಜ್ 20 ಲಕ್ಷಕೋಟಿಯಲ್ಲ! (ಮೇ.19)
* ಮೋದಿ ಪ್ಯಾಕೇಜ್ ವಂಚನೆ ವಿರುದ್ಧರೈತ-ಕಾರ್ಮಿಕರ ಪ್ರತಿರೋಧ! (ಮೇ.18)
* ವಾರದಕವಿತೆ: ಕೆ.ಎಸ್.ನ ಅವರ 'ಬರಿಗೊಡಗಳಿಗೆ ಸಮಾಧಾನ' (ಮೇ.17)
* ಮೂಗಿಗೆ ತುಪ್ಪ ಸವರುವಯೆಡ್ಡಿ ಪ್ಯಾಕೇಜ್ ! (ಮೇ.16)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'**ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ **'ಬೆಲ್ ಐ ಕಾನ್ ಬಟನ್'** ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.



ಬರಿಗೊಡಗಳಿಗೆ ಸಮಾಧಾನ

ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ
ಮಟಮಟ ಮಧ್ಯಾಹ್ನದಲ್ಲಿ,
ಬೀದಿಯೊಳಗಾಗಿ ಒಂದು ತಲೆಯಿಲ್ಲ ;
ಬಿಸಿಲೇ ಎಲ್ಲ!

ನಿರ್ಜೀವವಾಗಿದೆ ನಿರಂತರ ನಿರ್ಭಾಗ್ಯ ನೀಲಗಗನ.
(ರಾತ್ರಿಯ ಮಾತು ರಾತ್ರಿಗಾಯಿತು; ಈಗ ಹೇಳಿ !)
ಒಂದಾದರೂ ಬಿಳಿಮುಗಿಲೇ, ಶಾಂತಿಯೇ, ರಾಮ ರಾಮ!
ಹತ್ತು ಲಕ್ಷ ಜನದುಸಿರಾಚೆಗೆ, ಊರಾಚೆಗೆ
ಯಾರದೋ ಪಾಳು ಹೊಲದೊಳಗೆ
ತಲೆಯ ತಗ್ಗಿಸಿ ಸುಟ್ಟ ಕೂಳೆಯನು ಮೇಯುತಿವೆ
ಊರ ದನ ಗುಂಪುಗುಂಪಾಗಿ; ನಿಮಿಷದ ಹಿಂದೆ
ಕೊರಳ ಗೆಜ್ಜೆಯ ಇಂಪು ಹರಿದಿತ್ತು ಬೇಲಿಗಳ ಮೇಲೆ.
ಹೊಗೆಯ ಗೋಪುರವೇಳುತಿದೆ ಬಂಡೆಗಳ ಮುಂದೆ,
ತರಗೆಲೆ ರಾಸಿಗಾಗುತಿದೆ ನಿಷ್ಕಾಮದಹನ.
ಗುಡಿಯ ಬಾಗಿಲಲಿ ಬಿಸಿಲ್ಗುದುರೆಗಳ ನೀರವ ನಿರ್ಗಮನ:-
ಮುತ್ತಿನ ಹಾರವಿಲ್ಲ, ಹತ್ತುವ ದೇವರಿಲ್ಲ,
ಕಟ್ಟುವುದಿಲ್ಲ, ಒದೆಯುವುದಿಲ್ಲ-ಹೆಸರಿಗೆ ಕುದುರೆ!
ಯಾರಿಗೆ ಬೇಕೀ ಗತವೈಭವಗಳ ಪರಂಪರೆ?
ಬೋರೆಯಿಂದ ಬಳಲಿ ಬಂದ ಕುಂಟುಗಾಳಿಗೆ
ಪರ್ವತವಾಗಿದೆ ಮಣ್ಣುಮಾಳಿಗೆ.
ದೂರ ದಾರಿಯಲಿ ಎದ್ದ ದೂಳಿನಲಿ
ಉಸಿರೆಳೆಯುತ್ತಿದೆ ಲಾರಿ.
ಬಾಂದಳದ ವಿಮಾನ
ಅದೆಷ್ಟು ನಿಧಾನ?

ದಾರವಿಲ್ಲದ ಸೂಜಿ ನಾಟಿದೆ ನೀಲಿಬಟ್ಟೆಯಲ್ಲಿ
ತಲೆಗೆದರಿದ ಗಿಡಬಳ್ಳಿ ಬೆಂಡಾಗಿವೆ ಬಿಸಿಲಲ್ಲಿ.
ಮಣ್ಣಿನ ಬಣ್ಣ ಬಂದಿದೆ ಚೆಲುವಿನ ಕಣ್ಣಿಗೆ;
ನೀರಡಿಕೆಯ ದೀಪವುರಿಯುತಿದೆ

ಕವಿತೆಯ ತುಟಿಯಲಿ ಸಣ್ಣಗೆ.
ಇದು ಹಸಿರಿಲ್ಲದ ಕೆಸರಿಲ್ಲದ ಉಸಿರಿಲ್ಲದ ನರಕ.
ಜಳ್ಳಾಗಿದೆ ಈ ಮುದಿಮರವನಕ;
ಹಕ್ಕಿ ತಂಗುವುದಿಲ್ಲ;
ಕೋತಿ ಜಗ್ಗುವುದಿಲ್ಲ-
ಏನಿದರ ಅಮರ ಭಾವ?
ನೂರು ವಸಂತಗಳ ಹೀರಿ ಕಟ್ಟರೆಯಾಗಿದೆ ಇದರ ಜೀವ;
ಹಾವಿನ ಸಂಸಾರದ ಪೊಟ್ಟರೆಯಾಗಿದೆ ಇದರ ದೇಹ.
ಯಾರಿಗೆ ಬೇಕು ಇದರ ಸ್ನೇಹ?
ಬಿರುಗಾಳಿಯಾದರೂ ಬೀಸಿ
ಇದು ಬಿದ್ದರೆ ವಾಸಿ!

ಯಾವ ಬಣ್ಣ ಬಂತಂತೆ ಚೆಲುವಿನ ಕಣ್ಣಿಗೆ?
ಕವಿತೆಯ ತುಟಿಯಲಿ ಉರಿವುದೇನು ಸಣ್ಣಗೆ?
ಹಳೆಯ ಪುಸ್ತಕದಲ್ಲಿ ಹಿಂದೆಯೇ ಬರೆದಿದೆ:
"ತುಂಬಿದ ಕೊಡ ತುಳುಕುವುದಿಲ್ಲ"
(ಭೇಷಾಗಿದೆ ಬರವಣಿಗೆ).
ಸಾವಿರ ಬೀದಿಗಳಲ್ಲಿ ನಾಳೆ ನಡೆಯಲಿದೆ
ಭಾಗೀರಥಿಯ ಮೆರವಣಿಗೆ.

ಬರಿಗೊಡಗಳಿಗೆ ಸಮಾಧಾನ ಹೇಳಿದ್ದೂ ಹೇಳಿದ್ದೆ
ನೀರಿಲ್ಲದ ನಲ್ಲಿ
ಮೃದು ಸ್ವರದಲ್ಲಿ:

"ತುಂಬಿದ ಕೊಡ ತುಳುಕುವುದಿಲ್ಲ."
ಬರಿಗೊಡವೂ ತುಳುಕುವುದಿಲ್ಲ,
ತುಳುಕಿದರೂ ಚಿಂತೆಯಿಲ್ಲ,
ಎಂದಿಗೆ ಬರುವುದು ನೀರು?

ಉತ್ತರವೇ ಇಲ್ಲ.
ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ:
"ತುಂಬಿದ ಕೊಡ ತುಳುಕುವುದಿಲ್ಲ."

-ಕೆ.ಎಸ್. ನರಸಿಂಹಸ್ವಾಮಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**